(ಶ್ರೀ ಕೋಣಂದೂರು ಲಿಂಗಪ್ಪ)

ಪ್ರಕಾರ ಈಗ ಅಧ್ಯಾಪಕರುಗಳು ಕೆಲಸದ ಮೇಲೆ ವಾಪಸು ಹೋಗಿದ್ದಾರೆ. ಆದರೆ, ಮತ್ತೆ ಇದನ್ನು ಬೋರ್ಡಿಗೆ ವಹಿಸುವ ಬಗ್ಗೆ ವಿಚಾರ ಮಾಡುತ್ತಿರುವುದರಿಂದ, ಅಧ್ಯಾಪಕ ವರ್ಗದವರ ಮನಸ್ಸಿನ ಮೇಲೆ ಮತ್ತೆ ಒಂದು ರೀತಿಯ ಕೆಟ್ಟ ಪರಿಣಾಮವನ್ನು ಉಂಟುಮಾಡುವ ಸಾಹಸಕ್ಕೆ ಸರಕಾರ ಹೋಗುತ್ತಿದೆ. ಆದುದರಿಂದ, ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಏರ್ಪಾಡು ಮಾಡಬೇಕು.

The Hon'ble Chief Minister had agreed to make a statement.

Mr. DEPUTY SPEAKER.—It need not be agitated like this. The statement will be made and I will send words to the Hon'ble Chief Minister.

ಶ್ರೀ ಕೋಣಂದೂರು ಲಿಂಗಪ್ಪ.—ಮುಖ್ಯ ಮಂತ್ರಿಗಳು ಇಲ್ಲದಿದ್ದಲ್ಲಿ, ಬೇರೆ ಯಾರಾದರೂ ಮಂತ್ರಿಗಳು ಹೇಳಿಕೆ ಕೊಡುವುದು ಒಳ್ಳೆಯದು.

Mr. DEPUTY SPEAKER.—Yes.

Death of a Youth in Police Custody at Anekal

ಶ್ರೀ ಕಾಗೋಡು ತಿಮ್ಮಪ್ಪ.—ಆನೇಕಲ್ ಪೋಲೀಸ್ ಸ್ಟೇಷನ್ನಿನಲ್ಲಿ ಒಬ್ಬ ಯುವಕ ಮೃತಪಟ್ಟ ಸಂದರ್ಭದಲ್ಲಿ, ವಿಚಾರಣೆ ನಡೆದ ಮೇಲೆ, ಮಾಹಿತಿಯನ್ನು ಪಡೆದುಕೊಂಡು ಮತ್ತೊಂದು ಹೇಳಿಕೆ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದರು. ಇವತ್ತಿನವರೆಗೂ ಅವರ ಹೇಳಿಕೆ ಬಂದಿಲ್ಲ. ಫಾಲಿಡಾಲ್ ಕುಡಿದು ಸತ್ತಿದ್ದಾನೆಂದು ಕಥೆ ಕಟ್ಟಿ ಹೇಳಿದ್ದಾರೆ. ಆದರ ಬಗ್ಗೆ ವಿವರಣೆ ಕೇಳಿದಾಗ ವಿಚಾರಣೆ ಮಾಡಿ, ಪೂರ್ಣ ಮಾಹಿತಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಅದನ್ನು ಕೊಡಿಸಿಕೊಡಬೇಕು.

ಉಪಾಧ್ಯಕ್ಷರು.—ಮುಖ್ಯ ಮಂತ್ರಿಗಳು ಬಂದಾಗ ಅದನ್ನು ತೆಗೆದುಕೊಳ್ಳೋಣ.

Licensing for Construction of Cinema House

ಶ್ರೀ ಕಾಗೋಡು ತಿಮ್ಮಪ್ಪ.—ಸಿನಿಮಾ ಟಾಕೀಸು ಬಗ್ಗೆ ಪ್ರಸ್ತಾಪ ಮಾಡಿದ್ದೆ. ಟಾಕೀಸಿಗೆ ಪರ್ಮಿಟ್ ಕೊಟ್ಟು ಬಿಟ್ಟರೆ, ಕಷ್ಟವಾಗುತ್ತದೆ. ಅದಿಕಾರಿಗಳು ಅಷ್ಟಷ್ಟು ಹಂಚಿಕೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಜಾಗ್ರತೆ ಈ ವಿಷಯದಲ್ಲಿ ಸರಕಾರದ ನಿಲವು ಏನು ಎಂದು ಗೊತ್ತಾದರೆ ಒಳ್ಳೆಯದು. ಆದುದರಿಂದ, ಜಾಗ್ರತೆ ಸರಕಾರದವರು ಒಂದು ಹೇಳಿಕೆಯ ಮೂಲಕ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು.

BUDGET ESTIMETS FOR 1974–1975

Demands for Grants

Demand Nos: 9 and 30

Sri K. H. RANGANATH (Minister for Transport and Housing).—Sir, on the recommendation of the Governor, I beg to move:

"That a sum not exceeding Rs. 47,'9,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 9 "Taxes on Vehicle."

"That a sum exceeding Rs. 3,38,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of demand No. 30 "Housing"

Mr. DEPUTY SPEAKER.—Demands moved:

"That a sum not exceeding Rs. 47,99,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of demand No. 9 "Taxes on Vehicles."

"That a sum not exceeding Rs. 3,38,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 3 "Housing"

2–30 P.M.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಮತ್ತು ವಸತಿ ಸೌಕರ್ಯದ ಸಚಿವರು ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕಂಥ ಸಾರಿಗೆಗೆ ಸಂಬಂಧಪಟ್ಟ ಬೇಡಿಕೆ ಮತ್ತು ವಸತಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧ ಮಾಡಿ ಮಾತನಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಸಚಿವರು ಮಂಡಿಸಿರತಕ್ಕ ಈ ಎರಡು ಬೇಡಿಕೆಗಳಲ್ಲಿ ಮೊದಲನೆ ಬೇಡಿಕೆ ಸಾರಿಗೆಗೆ ಸಂಬಂಧಪಟ್ಟ ಬೇಡಿಕೆ. ನಾನು ಈ ಇಲಾಖೆ ಮೇಲೆ ಮಾತನಾಡುವುದಕ್ಕೆ ಮೊದಲು, ಒಂದು ವಿವರಣೆಯನ್ನು ಸರ್ಕಾರದವತಿಯಿಂದ ಕೇಳಲು ಅಪೇಕ್ಷೆಪಡುತ್ತೇನೆ. Annual Report of the Motor Vehicles Department for the year 1973–1974 ಮತ್ತು Highlight of achievements of Motor Vehicles Department for 1973–1974 ಇವೆರಡು ವರದಿಗಳನ್ನು ಈ ಸದನದ ಸದಸ್ಯರುಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರುಗಳಿಗೆ ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ವರದಿ ಕೊಟ್ಟಿಲ್ಲ. ವರದಿ ಇಲ್ಲದೇ ಇರುವುದರಿಂದ ಈಗ ಇರತಕ್ಕ ಬಸ್ಸುಗಳು ಎಷ್ಟು? ಪ್ರಯಾಣ ಮಾಡತಕ್ಕ ಜನಸಂಖ್ಯೆ ಎಷ್ಟು? ಇನ್ನೂ ಎಷ್ಟು ಬಸ್ಸುಗಳು ಬೇಕಾಗುತ್ತವೆ? ಎನ್ನುವ ವಿಷಯವನ್ನು ಪತ್ತೆ ಹಚ್ಚುವುದಕ್ಕೆ ನಮ್ಮಿಂದ ಆಗುತ್ತಾ ಇಲ್ಲ. ಹಾಗೇನೇ ವಸತಿಗೆ ಸಂಬಂಧಪಟ್ಟ ವಿಷಯಕ್ಕೂ ಕೂಡ ಆಯವ್ಯಯ ಪತ್ರದಲ್ಲಿ ವಿಶೇಷವಾಗಿ ಪ್ರಸ್ತಾಪ ಮಾಡಿದ್ದು ಬಿಟ್ಟರೆ ಅದರ ಬಗ್ಗೆ ಪ್ರತ್ಯೇಕ ವರದಿ ಕಳುಹಿಸಿಲ್ಲ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಮನೆಗಳು ಇವೆ, ಎಷ್ಟು ಜನಕ್ಕೆ ಸ್ವಂತ ಮನೆಗಳು ಇವೆ, ಎಷ್ಟು ಜನಕ್ಕೆ ಸ್ವಂತ ಮನೆಗಳು ಇಲ್ಲ. ವಸತಿ ಸೌಕರ್ಯ ಇಲ್ಲದೆ ಇರತಕ್ಕ ಸಾರ್ವಜನಿಕರಿಗೆ ಎಷ್ಟು ವರ್ಷಗಳಲ್ಲಿ ಸಂಪೂರ್ಣ ವಸತಿ ಸೌಕರ್ಯ ಒದಗಿಸುವುದಕ್ಕೆ ಆಗುತ್ತದೆ ಎಂಬುದನ್ನು ಅರಿಯುವುದಕ್ಕೆ ಆಗುತ್ತಾ ಇಲ್ಲ. ಈ ಸಂಪೂರ್ಣ ಮಾಹಿತಿಯನ್ನು ಸದನಕ್ಕೆ ಒದಗಿಸುವ ವಿಷಯದಲ್ಲಿ ಸರ್ಕಾರ ಲೋಪ ಮಾಡಿದೆ. ಅಷ್ಟೇ ಅಲ್ಲ ವರದಿಗಳನ್ನು ಮಾನ್ಯ ಸದಸ್ಯರುಗಳಿಗೆ ಕೊಡದೆ ಇರುವುದರಿಂದ ತಾವು ಅನೇಕ ವಿಷಯಗಳನ್ನು ಮುಚ್ಚಿ ಹಾಕಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಇದೆ ಎಂದು ಹೇಳುತ್ತೇನೆ. ಮಾನ್ಯ ಸಚಿವರ ಬಗ್ಗೆ ನನಗೆ ಅಪಾರ ಗೌರವ ಇದೆ ಎಂದು ಹಿಂದೆಯೇ ಹೇಳಿದ್ದೇನೆ. ಅದನ್ನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ.

Mr. DEPUTY SPEAKER.—Hon. Member's personal respect or reverence for anybody is not under discussion.

ಶ್ರೀ ಎಸ್. ಬಂಗಾರಪ್ಪ.—ಹಿಂದೆಯೂ ಈ ಮಂತ್ರಿಗಳು ನಮ್ಮವರೇ ಮುಂದೆ ಕೂಡ ನಮ್ಮವರೇ. ಹೌಸಿಂಗ್ ಬಗ್ಗೆಯಾಗಲೀ, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ವಿಷಯದಲ್ಲಾಗಲೀ ಸಂಪೂರ್ಣ ಮಾಹಿತಿ ಒದಗಿಸಿದ್ದರೆ ಇದರ ಬಗ್ಗೆ ಹೆಚ್ಚಿನ ವಿಷಯ ಚರ್ಚೆ ಮಾಡುವುದಕ್ಕೆ

(ಶ್ರೀ ಎಸ್. ಬಂಗಾರಪ್ಪ)

ಅವಕಾಶವಾಗುತ್ತಿತು. ಈಗ ಅವಕಾಶ ಇಲ್ಲದ ಹಾಗೆ ಆಗಿದೆ. ರಾಜ್ಯದಲ್ಲಿರತಕ್ಕ ರೂಟ್ ರಾಷ್ಟ್ರೀಕರಣ ಮಾಡುತ್ತೇವೆಂದು ಅನೇಕ ವರ್ಷಗಳಿಂದ ಕಾಂಗ್ರೆಸ್ ಸರ್ಕಾರದವರು ಹೇಳುತ್ತಾ ಹೋಗಿದ್ದಾರೆ. ಸಾರ್ವಜನಿಕ ಹಣ ಬಂಡವಾಳಶಾಹಿಗಳ ಹೊಟ್ಟೆಗೆ ಸೇರಬಾರದು ಎಂದು ಮೂಲ ನೀತಿಯನ್ನು ಮಾನ್ಯ ಸಚಿವರು ಒಪ್ಪುತ್ತಾರೆಂದು ಭಾವನೆ ಮಾಡುತ್ತೇನೆ. ಸಮಾಜವಾದದಲ್ಲಿ ನಂಬಿಕೆ ಇರುವ ಶ್ರೀ ರಂಗನಾಥ್ ಅವರು ಬಸ್ ರಾಷ್ಟ್ರೀಕರಣ ಮಾಡುವಾಗ ಯಾವ ನೀತಿಯನ್ನು ಪ್ರತಿಪಾದನೆ ಮಾಡುತ್ತಾರೋ? ಸ್ವಾತಂತ್ರ್ಯ ಪೂರ್ವ ಮತ್ತು ಈವೊತ್ತು ಕೂಡ ಅನೇಕ ಕಡೆ ಗಳಲ್ಲಿ ಖಾಸಗಿ ಬಸ್‌ಗಳನ್ನು ಓಡಿಸತಕ್ಕ ಅಭಿಪ್ರಾಯ ಇದೆ. ಧಾರವಾಡ ಜಿಲ್ಲೆಯಲ್ಲಿ ಮತ್ತು ಬೇರೆ ಕಡೆಗಳಲ್ಲಿ ಎಲ್ಲೆಲ್ಲಿ ಬಸ್ ರಾಷ್ಟ್ರೀಕರಣ ಮಾಡಿದ್ದಾರೆ, ಅಲ್ಲಿ ಬಸ್ ಮಾರ್ಗಗಳನ್ನು ಬಿಟ್ಟರೆ, ಅನೇಕ ಕಡೆ ಖಾಸಗೀ ಬಸ್ ಮಾಲೀಕರು ಬಸ್ಸುಗಳನ್ನು ನಡೆಸತಕ್ಕ ಒಂದು ಪರಿಸ್ಥಿತಿ ಇದೆ. ಸಾರ್ವಜನಿಕರ ಹಣಬಂಡವಾಳಶಾಹಿಗಳ ಅರ್ಥಾತ್ ಬಸ್ಸುಗಳ ಮಾಲೀಕರ ಹೊಟ್ಟೆಗೆ ಸೇರುವುದ ರಿಂದಶ್ರೀಮಂತ ವರ್ಗ ಸೃಷ್ಟಿಯಾಗುತ್ತದೆ.ಮತ್ತು ಇರತಕ್ಕ ಶ್ರೀಮಂತರು ದೊಡ್ಡ ಶ್ರೀಮಂತರಾಗು ತ್ತಾರೆ. ಅದು ಆಗ ಕೂಡದು ಎಂದು ಎಲ್ಲಾ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹಿಂದೆ ಇದ್ದ ಸಾರಿಗೆ ಸಚಿವರಾದ ಶ್ರೀ ಮಹಮದಾಲಿಯವರು ಹೇಳುತ್ತಾ ಹೋದರು. ಅದಾದ ನಂತರ ಮಾನ್ಯ ಶ್ರೀ ಅಜೀಜ್ ಸೇಟ್‌ರವರು ಬಂದರು. ಅವರು ಕೂಡ ದೊಡ್ಡ ದೊಡ್ಡ ಹೇಳಿಕೆ ಯನ್ನು ಕೊಟ್ಟರು. ಸೌತ್ ಕೆನರಾ ಜಿಲ್ಲೆಯಲ್ಲಿ ಬಸ್‌ಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂದಾಗ ಸೌತ್ ಕೆನರಾ ಜಿಲ್ಲೆಯಲ್ಲಿರತಕ್ಕ ಖಾಸಗಿ ಬಸ್‌ಗಳ ಮಾಲೀಕರು ಬೆಂಗಳೂರಿಗೆ ಧಾವಿಸಿ ಬಂದು ಸಾರ್ವಜನಿಕರಿಗೆ ಅನ್ಯಾಯವಾಗುತ್ತಿದೆ, ಎಂದು ಹೇಳಿ ಚಾಕಚಕ್ಯತೆಯಿಂದ ಬುದ್ಧಿವಂತಿಕೆ ಯಿಂದ ವಾದ ಇಟ್ಟು ಸರ್ಕಾರದ ಬಸ್ಸುಗಳನ್ನು ಉದಾಹರಣೆಗೆ ಕೊಟ್ಟರು. ಈ ಕೆಂಪು ಬಸ್‌ಗಳಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ ಎಂಬ ಕಾರಣವನ್ನು ಮುಂದಿಟ್ಟು ಈ ಖಾಸಗೀ ಬಸ್ ಮಾಲೀಕರು ಅದೇ ಮಾರ್ಗದಲ್ಲಿ ತಮ್ಮ ಬಸ್‌ಗಳನ್ನು ಓಡಿಸುವುದರ ಮೂಲಕ ಹಣ ಮಾಡುತ್ತಿದ್ದಾರೆ. ಕೆಂಪು ಬಸ್‌ಗಳನ್ನು ತೋರಿಸಿ ಹಣ ಮಾಡುತ್ತಿದ್ದಾರೆ. ಈ ಬಗ್ಗೆ ತಮ್ಮ ವಾದವನ್ನು ಸರ್ಕಾರದ ಮುಂದೆ ಇಡುವುದರಲ್ಲಿ ಅವರು ಬಹಳ ನಿಪುಣರಾಗಿದ್ದಾರೆ. ಹಿಂದೆ ಈ ಖಾತೆಯನ್ನು ನೋಡಿ ಕೊಳ್ಳುತ್ತಿದ್ದ ಮಾನ್ಯ ಅಜೀಜ್‌ಸೇಠ್ ಅವರು ಎಲ್ಲ ಬಸ್‌ಮಾರ್ಗ ಗಳನ್ನು ರಾಷ್ಟ್ರೀಕರಣ ಮಾಡಲಾಗುವುದು ಎಂದು ಹೇಳಿಕೆ ಕೊಟ್ಟರು. ಅದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿ ವರದಿಯಾಯಿತು. ಆದರೆ ಅವರು ಹೇಳಿದಂಥ ಮಾತು ಅಂದರೆ ಬಾಂಬ್ ಸಿಡಿಯಲೇ ಇಲ್ಲ; ಅದು ಕಿಸ್‌ಮದ್ದಾಗಿ ಹೋಯಿತು;

ಉಪಾಧ್ಯಕ್ಷರು.—ನಾನ್ ವಯುಲೆಂಟ್ ಬಾಂಬ್;

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರ ಮಾತಿನಲ್ಲಿ ಹೇಳುವುದಾದರೆ ಅದು ನಾನ್ ವಯಲೆಂಟ್ ಬಾಂಬ್ ಆಯಿತು; ಅಂದರೆ ಅದು ಅಹಿಂಸಾ ಬಾಂಬ್ ಆಯಿತು. ಮುಂದೆ ಅವರು ತಾವು ಹೇಳಿದ ಮಾತಿಗೆ ಅಪಾರ್ಥ ಬರಬಾರದು ಎಂದುಕೊಂಡು ರಾಷ್ಟ್ರೀಕರಣವನ್ನು ಹಂತಹಂತ ವಾಗಿ ಮಾಡುತ್ತೇವೆಂದು ಹೇಳಿದರು. ಈ ಮಾತನ್ನು ಅವರು ಹೇಳುವುದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಜನರೂ ಸಹ ಕಾರಣರು. ಏಕೆಂದರೆ ಅವರು ಆ ಜಿಲ್ಲೆಯನ್ನು ಸೇರಿಸಿಕೊಂಡು ಎಲ್ಲ ಭಾಗ ಗಳಲ್ಲಿಯೂ ರಾಷ್ಟ್ರೀಕರಣ ಮಾಡಲಾಗುವುದೆಂದು ಹೇಳಿದ್ದರು. ಎಲ್ಲ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗುತ್ತದೆ ಎಂಬ ಮೂಲ ನೀತಿಯನ್ನು ಈ ಖಾತೆಯನ್ನು ವಹಿಸಿಕೊಂಡ ಎಲ್ಲ ಮಾನ್ಯ ಮಂತ್ರಿಗಳೂ ಸಹ ಪ್ರತಿಪಾದನೆ ಮಾಡುತ್ತಾರೆ. ಇದರ ಅರ್ಥ ಎಂದರೆ ಬಂಡವಾಳಶಾಹಿ ಗಳನ್ನು ಸೃಷ್ಟಿ ಮಾಡತಕ್ಕಂಥ ಅವಕಾಶ ಕೊಡುವುದಿಲ್ಲ ಮತ್ತು ಅವರ ಬೊಜ್ಜು ಬೆಳೆಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು. ಮತ್ತು ಇದರಿಂದ ಬರತಕ್ಕಂಥ ವರಮಾನ ಏನಿದೆ, ಅದು ಕೆಲವೇ ವ್ಯಕ್ತಿಗಳ ಕೈಸೇರುವುದಕ್ಕೆ ಅವಕಾಶ ಕೊಡದೆ, ಆ ಹಣ ಸರ್ಕಾರಕ್ಕೆ ಸೇರುವಂತೆ ಮಾಡಿ ತನ್ಮೂಲಕ ಅದರ ಅನುಕೂಲ ಸಮಾಜದ ಎಲ್ಲ ಜನತೆಗೂ ಸಿಗುವಂತೆ ಮಾಡುವ ತತ್ವ ಏನಿದೆ, ಇದನ್ನು ಸಾಮಾನ್ಯವಾಗಿ ಎಲ್ಲರೂ ಹೇಳುತ್ತಾರೆ. ಆದರೆ ಅದನ್ನು ಜಾರಿಗೆ ತರುವ ಧೈರ್ಯ ಮಾತ್ರ ಈ ಕಾಂಗ್ರೆಸ್ ಸರ್ಕಾರಕ್ಕೆ ಬರಲಿಲ್ಲ.

ಶ್ರೀ ಕೋಣಂಡೂರು ಲಿಂಗಪ್ಪ.—ಇಂದಿರಾಗಾಂಧಿ ಸರ್ಕಾರಕ್ಕೆ?

ಶ್ರೀ ಎಸ್. ಬಂಗಾರಪ್ಪ.—ಇಂದಿರಾಗಾಂಧಿಯ ಸರ್ಕಾರವೇ ಆಗಲೀ, ಅಥವಾ ಅದಕ್ಕೆ ಯಾವುದೇ ಹೆಸರನ್ನೂ ಇಟ್ಟರೂ ಸಹ ಈ ಕೆಲಸವನ್ನು ಮಾಡಲು ಇವರಿಗೆ ಇನ್ನೂ ಧೈರ್ಯ ಬರಲಿಲ್ಲ.

ಈ ಖಾತೆಯನ್ನು ಯಾರಾದರೂ ವಹಿಸಿಕೊಂಡಾಗ ಅವರ ಕಾಲದಲ್ಲಿ ಈ ಕೆಲಸವಾಗಬಹುದೆಂಬ ಆಶೆ ನಮಗೆ ಇರುತ್ತದೆ. ಆದರೆ ಅವರ ಕಾಲದಲ್ಲಿ ಆಗುವುದಿಲ್ಲ ; ಅವರು ಹೊರಟುಹೋಗುತ್ತಾರೆ; ಮತ್ತೊಬ್ಬರು ಬರುತ್ತಾರೆ ; ಈಗ ಮಾನ್ಯ ರಂಗನಾಥನ್ ಅವರು ಬಂದಿದ್ದಾರೆ. ಇವರೂ ಸಹ ಈ ಕೆಲಸವನ್ನು ಮಾಡಬಲ್ಲರೇ ಎಂಬ ಪ್ರಶ್ನೆ ನನ್ನ ತಲೆಯನ್ನು ಕಾಡುತ್ತಿದೆ. ಇವರ ಕಾಲದಲ್ಲಿಯೂ ಸಹ ಇದನ್ನು ಮಾಡದಿದ್ದರೆ ಬಂಡವಾಳಷಾಹಿಗಳನ್ನು ಬೆಳೆಸುವುದಕ್ಕೆ ಮಾನ್ಯ ರಂಗನಾಥ್ ಅವರು ಕಾರಣರಾಗುವುದಿಲ್ಲವೇ ಎಂಬ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಮುಂದೆ ಇಡ ಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳ ಉತ್ತರ ಏನಿದೆ ಎಂಬುದನ್ನು ತಿಳಿಯುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ರಾಜ್ಯದಲ್ಲಿರತಕ್ಕಂಥ ಎಲ್ಲ ಬಸ್ ಮಾರ್ಗಗಳನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡುವುದಕ್ಕೆ ಯಾವ ಒಂದು ದೊಡ್ಡ ನೀತಿಯನ್ನು ರೂಪಿಸಿಕೊಂಡಿದ್ದೀರಾ, ತನ್ಮೂಲಕ ಜನತೆಯ ಹಣ ಕೆಲವೇ ಜನರ ಕೈಸೇರದೆ ಸರ್ಕಾರದ ಪಾಲಾಗುವಂತೆ ಮಾಡಲು ಏನು ವ್ಯವಸ್ಥೆ ಮಾಡಿದ್ದೀರಾ ಎಂಬ ಬಗ್ಗೆ ಈ ಸದನಕ್ಕೆ ಮಾನ್ಯ ಮಂತ್ರಿಗಳು ಈ ದಿನ ತಮ್ಮ ಉತ್ತರದಲ್ಲಿ ತಿಳಿಸಬೇಕು. ಏಕೆಂದರೆ ಇಂದು ಅನೇಕ ಖಾಸಗೀ ಬಸ್ ಮಾಲೀಕರುಗಳು ಕಾಂಟ್ರಾಕ್ಟ್ ಕ್ಯಾರೇಜಸ್ ಎಂಬ ಹೆಸರಿನಲ್ಲಿ ರಾಷ್ಟ್ರೀಕರಣವಾಗಿರುವ ಬಸ್ ಮಾರ್ಗಗಳಲ್ಲಿಯೇ ಬಸ್‌ಗಳನ್ನು ಓಡಿಸು ತ್ತಿದ್ದಾರೆ. ಇವರು ಜನರನ್ನು ಆಕರ್ಷಣೆ ಮಾಡಲು ತಮ್ಮ ಬಸ್‌ಗಳಿಗೆ ನಾನಾ ರೀತಿಯ ಗರಿ ಗರಿ ಬಣ್ಣಗಳನ್ನು ಹಾಕಿಸಿರುತ್ತಾರೆ ; ಬಸ್‌ನ ಒಳಗೆ ಮತ್ತು ಹೊರಗೆ 28 ತರಹ ಬಲ್ಬ್‌ಗಳನ್ನು ಹಾಕಿಸಿರುತ್ತಾರೆ; ಇಂತಹ ಬಣ್ಣಗಳನ್ನು ಮಾನ್ಯ ಸಚಿವರು ಕಂಡಿರಲಿಲ್ಲವೆಂದು ಕಾಣುತ್ತದೆ; ಇಂದು ಸರ್ಕಾರೀ ಬಸ್‌ಗಳಿಗೆ ಇರುವ ಬಣ್ಣ ಎಂದರೆ ಕೆಂಪು ಬಣ್ಣ ಒಂದೇ ? ಅದು ಡೇಂಜರ್ ಕಲರ್ ? ಇತ್ತೀಚೆಗೆ ಕೆಲವು ಬೇರೆ ಬೇರೆ ಬಣ್ಣದ ಬಸ್‌ಗಳನ್ನು ಸರ್ಕಾರದವರು ಸಹ ಓಡಿಸು ತ್ತಿದ್ದಾರೆ. ಕಾರವಾರ, ಬೆಳಗಾಂ, ಪಣಜಿ ಮುಂತಾದ ಕಡೆಗಳಿಗೆ ಈ ಬೇರೆ ಬೇರೆ ಬಣ್ಣದ ಬಸ್ ಗಳನ್ನು ಓಡಿಸುತ್ತಿದ್ದಾರೆ. ಈ ಬಸ್‌ಗಳಲ್ಲಿ ಪುಷ್–ಬ್ಯಾಕ್ ಸೀಟ್‌ಗಳನ್ನು ಅಳವಡಿಸಿದ್ದಾರೆ. ನಾವು ಕೂತರೆ ನಮ್ಮನ್ನು ಹಿಂದಕ್ಕೆ ದಬ್ಬುತ್ತದೆ. ಅನುಕೂಲತೆ ದೃಷ್ಟಿಯಿಂದ ಖಾಸಗೀ ಬಸ್‌ಗಳ ಸೀಟಿ ಗಿಂತ ಇವು ಉತ್ತಮವಾಗಿರುತ್ತವೆ ; ಆದರೆ ದರ ಮಾತ್ರ ಜಾಸ್ತಿ. ನೆರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ದರಗಳು ಕಡಿಮೆ ಇದೆ ಎಂದು ಹಿಂದಿನ ಮಂತ್ರಿಗಳು ಹೇಳುತ್ತಿದ್ದರು. ಸರ್ಕಾರದವರು ಬಸ್ ದರಗಳನ್ನು ಹೆಚ್ಚಿಸುವಾಗ ಯಾವ ರಾಜ್ಯದಲ್ಲಿ ಹೆಚ್ಚು ದರಗಳು ಇರುತ್ತವೋ ಅಂತಹ ರಾಜ್ಯಗಳನ್ನು ಉದಾಹರಣೆ ಕೊಟ್ಟು ಅಲ್ಲಿಗಿಂತ ಕಡಿಮೆ ಇದೆ ಎಂದು ಹೇಳಿಬಿಡುತ್ತಾರೆ. ಇವರು ಹೆಚ್ಚಾಗಿ ಹೋಲಿಕೆ ಮಾಡುವುದು, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ, ರಾಜ್ಯ ಗಳನ್ನು ಮಾತ್ರ ; ಆದರೆ ನಮ್ಮ ದೇಶದಲ್ಲಿ ಇರುವುದು ಇವಿಷ್ಟೇ ರಾಜ್ಯಗಳು ಮಾತ್ರವಲ್ಲ, ಇನ್ನೂ ಅನೇಕ ರಾಜ್ಯಗಳು ಇವೆ ; ನಮ್ಮ ರಾಜ್ಯದ ಬಸ್ ದರಗಳಿಗಿಂತಲೂ ಕಡಿಮೆ ದರ ಇರುವ ರಾಜ್ಯಗಳು ಇವೆ. ಆದರೆ ಅವುಗಳನ್ನು ಇಲ್ಲಿ ಉದಾಹರಣೆಗೆ ಕೊಡುವುದಿಲ್ಲ. ಎಲ್ಲಿ ಜಾಸ್ತಿ ದರ ಇರುತ್ತದೋ ಅಂತಹ ರಾಜ್ಯಗಳನ್ನೇ ಉದಾಹರಣೆಗೆ ಕೊಡುತ್ತಾರೆ ಇಂದು ನಮ್ಮ ರಾಜ್ಯದಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳು ಸ್ಟೇಟ್ ಕ್ಯಾರೇಜ್ ಬಸ್‌ಗಳ ರೀತಿಯಲ್ಲಿಯೇ ಓಡುತ್ತಿವೆ ; ಜೊತೆಗೆ ಮಾರ್ಗ ಮಧ್ಯದಲ್ಲಿ ಸಹ ಬಸ್ ನಿಲ್ಲಿಸಿ ಅಂದರೆ ಪ್ರಯಾಣಿಕರು ಕೈತೋರಿಸಿದ ಕಡೆಗಳಲ್ಲೆಲ್ಲಾ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗುತ್ತಿರುತ್ತವೆ. ಇವುಗಳಿಗೆ ಕಟ್ಸ್ ಸೀಟ್ಸ್ ಎಂದು ಹೇಳು ತ್ತಾರೆ. ರೆಗ್ಯುಲರ್ ಬಸ್‌ಗಳ ರೀತಿಯಲ್ಲಿಯೇ ಓಡಿಸುತ್ತಿದ್ದಾರೆ. ಸರ್ಕಾರೀ ಬಸ್‌ಗಳು ಒಂದು ಕಡೆ ಓಡುತ್ತಿದ್ದರೆ, ಇನ್ನೊಂದು ಕಡೆ ಈ ಬಸ್‌ಗಳು ಓಡುತ್ತಿರುತ್ತವೆ. ಹಾಡು ಹಗಲಲ್ಲೇ ಈ ರೀತಿಯ ದರೋಡೆಯಾಗುತ್ತಿದೆ. ನಾವು ಒಂದು ನೀತಿಗೆ ಬದ್ಧರಾದ ಮೇಲೆ ಅದರಂತೆ ನಡೆದು ಕೊಳ್ಳಬೇಕಾಗುತ್ತದೆ. ಸಮಾಜವಾದದಲ್ಲಿ ನಂಬಿಕೆ ಇರುವಂತಹ ಜನರು ಇವರು. ಮತ್ತು ಬಂಡ ವಾಳಷಾಹಿಗಳಿಗೆ ಹಣ ಹೋಗಬಾರದು ಎಂಬ ತತ್ವವನ್ನು ಸಹ ಇವರು ಒಪ್ಪಿಕೊಂಡಿದ್ದಾರೆ ; ಆದರೆ ಅದು ಕಾರ್ಯಗತವಾಗುವಂತೆ ನೋಡಿಕೊಳ್ಳುತ್ತಿಲ್ಲ ; ಕಾರ್ಯಗತ ಮಾಡಲು ಹಣಕಾಸಿನ ತೊಂದರೆ ಇದೆ ಎಂದು ಹೇಳುತ್ತಾರೆ. ನಮ್ಮ ಅಭಿಪ್ರಾಯದಲ್ಲ ಹೇಳುವುದಾದರೆ ಸ್ವಾತಂತ್ರ್ಯ ಬಂದಾಗಿನಿಂದ ಇದೇ ರೀತಿಯಲ್ಲಿ ಹಣಕಾಸಿನ ತೊಂದರೆ ಇದೆ ಎಂದು ಪಠಣ ಮಾಡುತ್ತಿದ್ದಾರೆ. ಅಧಿ ಕಾರಕ್ಕೆ ಬಂದ ಯಾವ ಸರ್ಕಾರವೇ ಆಗಲೀ, ಈ ದೇಶದ ಜನರಿಗೆ ಮತ್ತು ಈ ಸದನಕ್ಕೆ ಯಾವಾ ಗಲೂ ಸಹ ನಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಪರವಾಗಿಲ್ಲ ಎಂಬ ಮಾತನ್ನು ಹೇಳಿಲ್ಲ ; ಹಣ ಕಾಸಿನ ಪರಿಸ್ಥಿತಿ ಪರವಾಗಿಲ್ಲ ಎಂಬ ಮಾತನ್ನು ಹೇಳಿಲ್ಲ ; ಹಣಕಾಸಿನ ಪರಿಸ್ಥಿತಿ ಒಂದು ಮಟ್ಟಕ್ಕೆ ಬರುತ್ತಿದೆ ಎಂಬತಕ್ಕಂಥ ಮಾತನ್ನು ಹೇಳುವ ಶಕ್ತಿ ಈ ಸರ್ಕಾರಕ್ಕಾದರೂ ಇದೆಯೇ ಎಂದು ನಾನು ಸ್ಪಷ್ಟವಾಗಿ ಕೇಳಬೇಕಾಗುತ್ತದೆ. ಇಂದು ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳು ಓಡಾಡುತ್ತಿರು ವುದರಿಂದ ಹಣ ಕೆಲವೇ ಜನರ ಹತ್ತಿರ ಕೇಂದ್ರೀಕೃತವಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ಈ ಬಸ್‌ಗಳಿಗೆ ಒಳಗೆ ಮತ್ತು ಹೊರಗೆ ನಾನಾ ಬಣ್ಣಗಳನ್ನು ಜನರನ್ನು ಆಕರ್ಷಣೆ ಮಾಡಲು ಹಾಕಿಸಿರುತ್ತಾರೆ. ಮತ್ತು ಬಣ್ಣ ಬಣ್ಣದ ಸೀಟ್‌ಗಳನ್ನು ಹಾಕಿಸಿರುತ್ತಾರೆ. ಆ ಸೀಟ್‌ಗಳಲ್ಲಿ ಏನಾದರೂ ಕೂತರೆ ಮುಂದೆ ಕಾಲಿಡುವುದಕ್ಕೆ ಜಾಗವಿರುವುದಿಲ್ಲ; 6 ಅಡಿ ಅಥವಾ ಐದೂವರೆ ಅಡಿ ಎತ್ತರವಿರುವವರು ಈ ಬಸ್ಸಿನಲ್ಲಿ ಆಸೆಪಟ್ಟು ಕೂತರೆ ತಮ್ಮ ಸ್ವಂತ ಕಾಲುಗಳನ್ನು ಇಡುವುದಕ್ಕೇ ಜಾಗವಿರುವುದಿಲ್ಲ; ಮೊಣಕಾಲು ಹಾಗೆಯೇ ಮುಂದಿನ ಸೀಟಿಗೆ ಫಿಕ್ಸ್ ಆಗಿಬಿಡುತ್ತದೆ. ಸರಿಯಾಗಿ ಸೀಟ್ ವ್ಯವಸ್ಥೆ ಇಲ್ಲದಿದ್ದರೆ ಹೇಗೆ ? ಕಾಲುಗಳನ್ನು ತಲೆಯ ಮೇಲೆ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ? ಇಂಥ ಪರಿಸ್ಥಿತಿ ಇದ್ದರೂ ಸಹ ಇವುಗಳಿಗೆ ಓಡಿಸಲು ಪರ್ಮಿಟ್ ಕೊಟ್ಟಿದ್ದಾರೆ. ಬಸ್‌ಗಳಿಗೆ ಬಣ್ಣ ಚೆನ್ನಾಗಿ ಬಳಿದಿರುತ್ತಾರೆಯೇ ಹೊರತು, ಜನರಿಗೆ ಸೌಕರ್ಯ ಒದಗಿಸಿಕೊಡಬೇಕು ಎಂಬುದರ ಕಡೆ ಅವರ ಗಮನವೇ ಇರುವುದಿಲ್ಲ; ಇಂತಹ ಬಸ್‌ಗಳಿಗೆ ಏತಕ್ಕೆ ಪರ್ಮಿಟ್ ಕೊಡಬೇಕು? ಈ ಬಗ್ಗೆ ಕಾನೂನಿನ ತೊಡಕು ಇದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹಲವಾರು ಸಲ ಹೇಳಿದ್ದಾರೆ. ಕಾನೂನಿನ ತೊಡಕು ಇದ್ದರೆ ಅದನ್ನು ನಿವಾರಣೆ ಮಾಡಲು ಈ ಸದನ ಇಲ್ಲವೇ ಎಂದು ಕೇಳುತ್ತೇನೆ? ಜವಾಬ್ದಾರಿಯನ್ನು ಹೊತ್ತಿರುವ ಸರ್ಕಾರದವರು ಸಾರ್ವಜನಿಕರಿಗೆ ತೊಂದರೆಯಾದಾಗ ಅದನ್ನು ತಪ್ಪಿಸಲು ಪ್ರಯತ್ನ ಮಾಡಬೇಕು. ಈ ಬಗ್ಗೆ ಕಾನೂನಿನ ತೊಡಕೇನಾದರೂ ಇದ್ದರೆ, ಅದಕ್ಕೆ ಒಂದು ತಿದ್ದುಪಡಿಯನ್ನು ಈ ಸದನದ ಮುಂದೆ ತೆಗೆದುಕೊಂಡು ಬನ್ನಿ.

ಆ ರೀತಿ ಮಾಡುವುದಕ್ಕೆ ಮೋಟಾರ್ ವೆಹಿಕಲ್ಸ್ ಆಕ್ಟಿನಲ್ಲಿ ಅವಕಾಶವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ ಈ ಅನ್ಯಾಯವನ್ನು ತೊಂದರೆಯನ್ನು ತಪ್ಪಿಸಬೇಕು. ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳ ಪರ್ಮಿಟ್‌ಗಳನ್ನು ಸಂಪೂರ್ಣವಾಗಿ ರದ್ದು ಮಾಡಬೇಕು. ಇದರಿಂದ ಏನೂ ತೊಂದರೆ ಇಲ್ಲ. ಈ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳಿಗೆ ಪರ್ಮಿಟ್ ಕೊಡುವುದರಿಂದ ಸಮಾಜದಲ್ಲಿ ಕೆಲವೇ ವರ್ಗಸೃಷ್ಟಿಯಾಗುತ್ತದೆ. ಬಂಡವಾಳಷಾಹಿಗಳ ವರ್ಗ ಸೃಷ್ಟಿಯಾಗುತ್ತದೆ. ಈ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳಲ್ಲಿ ಒಂದು ಸೀಟಿಗೆ 50 ರೂಪಾಯಿಗಳಾಗಲೀ, 25 ರೂಪಾಯಿಗಳಾಗಲೀ ಶಕ್ತಿ ಇರುವವರು ಅಷ್ಟು ಹಣವನ್ನು ಕೊಟ್ಟು ಬಸ್ಸುಗಳನ್ನು ಹತ್ತಿಕೊಂಡು ಹೋಗುತ್ತಾರೆ. ಆದರೆ ಬಡವರು ಏನಿದ್ದಾರೆ ಅವರ ಪರಿಸ್ಥಿತಿ ಹೇಗೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇವೊತ್ತು ಪೇಯಿಂಗ್ ಕೆಪಾಸಿಟಿ ಇರುವವರು ಎಷ್ಟೇ ಬಸ್ಸಿನ ದರ ಜಾಸ್ತಿ ಆದರೂ ಕೂಡ ಜೇಬಿನಿಂದ ದುಡ್ಡು ಕೊಟ್ಟು ಟಿಕೇಟ್ ಖರೀದಿ ಮಾಡುತ್ತಾನೆ. ಪ್ರಯಾಣ ಮಾಡುತ್ತಾರೆ. ಆದರೆ ಬಡವರ ಪರಿಸ್ಥಿತಿ ಬಹಳ ಕಷ್ಟ. ಇವೊತ್ತು ಎಲ್ಲರಿಗೂ ಸೌಲಭ್ಯಬೇಕು, ಸಂತೋಷವಾಗಿ ಪ್ರಯಾಣ ಮಾಡಬೇಕು ಎನ್ನುವ ಆಶೆ ಆಕಾಂಕ್ಷೆ ಇದೆ. ನಾನೂ ಸಹ ಎಷ್ಟೋ ಸಾರಿ ಲಗ್ಷುರಿ ಬಸ್ಸಿನಲ್ಲಿ ಪ್ರಯಾಣ ಮಾಡಿದ್ದೇನೆ. ಇರುವ ವಿಷಯವನ್ನು ನಾನು ಮರೆಮಾಚುವುದಿಲ್ಲ. ಕೆಂಪು ಬಸ್ಸನ್ನು ಹತ್ತಿದರೆ ಗುರಿ ತಲುಪುವುದಕ್ಕಾಗುವುದಿಲ್ಲ. ಅಸೆಂಬ್ಲಿಗೂ ಬರುವುದಕ್ಕಾಗುವುದಿಲ್ಲ. ಈ ಕೆಂಪು ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ಈ ಬಸ್ಸುಗಳನ್ನು ಗುಬ್ಬಿ ಬಸ್‌ಸ್ಟ್ಯಾಂಡಿನಲ್ಲಿಯೂ ನಿಲ್ಲಿಸುತ್ತಾರೆ. ತುಮಕೂರು ಬಸ್‌ಸ್ಟ್ಯಾಂಡಿನಲ್ಲಿಯೂ ನಿಲ್ಲಿಸುತ್ತಾರೆ. ಡ್ರೈವರು ಬಸ್‌ಸ್ಟ್ಯಾಂಡಿನಲ್ಲಿ ಬಸ್ಸನ್ನು ನಿಲ್ಲಿಸಿ ಎಲ್ಲೋ ಹೊರಟು ಹೋಗುತ್ತಾರೆ. ಆ ಮೇಲೆ ಬರುತ್ತಾನೆ. ಈ ಒಂದು ಪರಿಸ್ಥಿತಿ ಕೆಂಪು ಬಸ್ಸುಗಳಲ್ಲಿ ಇದೆ. ಇಂಥಾ ಪರಿಸ್ಥಿತಿಯಲ್ಲಿ ನಾನು ಸರ್ಕಾರದಪತಿಯಿಂದ ಶ್ರೀಮಾನ್ ರಂಗನಾಥ್ ಅವರಿಂದ ಒಂದು ಹೇಳಿಕೆಯನ್ನು ನಿರೀಕ್ಷಣೆ ಮಾಡುತ್ತೇನೆ. ಈ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳು ಏನಿವೆ ಇವುಗಳ ಪರ್ಮಿಟ್‌ಗಳನ್ನು ಮೊದಲು ಸರ್ಕಾರದವರು ರದ್ದು ಮಾಡಬೇಕು. ಇದರಲ್ಲಿ ಏನಾದರೂ ತೊಡಕು ಇದ್ದರೆ ಈ ಬಗ್ಗೆ ಕೇಂದ್ರ ಸರ್ಕಾರದವರೊಡನೆ ವ್ಯವಹಾರ ಮಾಡಿ ಇರತಕ್ಕಂಥಾ ತೊಡಕನ್ನು ನಿವಾರಣೆ ಮಾಡಿ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳ ಪರ್ಮಿಟ್‌ಗಳನ್ನು ರದ್ದು ಮಾಡಿ ಅವುಗಳ ಜಾಗದಲ್ಲಿ ಸರ್ಕಾರಿ ಬಸ್ಸುಗಳನ್ನು ಹಾಕಬೇಕು. ಎಷ್ಟೇ ತೊಂದರೆ ಇದ್ದರೂ ಕೂಡ ಸರ್ಕಾರಿ ಬಸ್ಸುಗಳಲ್ಲಿ ಜನಗಳು ಓಡಾಡಬಹುದು. ಅನುಕೂಲತೆಯ ದೃಷ್ಟಿಯಿಂದ ಕಾಂಟ್ರ್ಯಾಕ್ಟ್ ಬಸ್ಸುಗಳಿಗೆ ಪರ್ಮಿಟ್ ಕೊಟ್ಟು ಬಂಡವಾಳಶಾಹಿಗಳನ್ನು ಸೃಷ್ಟಿ ಮಾಡಬಾರದು. ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳು ಇರಬಾರದು. ಈ ಬಗ್ಗೆ ಕೇಂದ್ರ ಸರ್ಕಾರದವರೊಡನೆ ವ್ಯವಹಾರ ಮಾಡಿ ಇರತಕ್ಕಂಥಾ ಕಾನೂನಿನ ತೊಡಕನ್ನು ನಿವಾರಣೆ ಮಾಡಿ ಈ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳನ್ನು ತೆಗೆಯಬೇಕು ಎಂದು ನಾನು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಪರಿಸ್ಥಿತಿಯ ಒತ್ತಡದಿಂದ ನಾನು ಕಾಂಟ್ರ್ಯಾಕ್ಟ್ ಬಸ್ಸುಗಳಲ್ಲಿ ಓಡಾಡುತ್ತಿದ್ದೇನೆ. ಆದರೂ ಸಹ ನಾನು ಈಗ ಕೆಂಪು ಬಸ್ಸುಗಳನ್ನು ಹತ್ತುವುದಕ್ಕೆ ತಯಾರು ಇದ್ದೇನೆ. ಆದರೆ ಅದರಲ್ಲಿ ಒಳ್ಳೆಯ ಆಡಳಿತ ಬೇಕು. ಕಾಂಟ್ರ್ಯಾಕ್ಟ್ ಬಸ್ಸು

ಗಳಲ್ಲಿ ಪ್ರಯಾಣ ಮಾಡುವಾಗ ಹಾಗೆ ನೋಡಿಕೊಂಡು ಬನ್ನಿ ತಮಗೆ ಗೊತ್ತಾಗುತ್ತದೆ. ಅವರು ಪೋಲೀಸ್ ಸ್ಟೇಷನ್ ಇರುವ ರೋಡಿನಲ್ಲೇ ಬರುತ್ತಾರೆ. ಬಸ್‌ಸ್ಟ್ಯಾಂಡ್‌ಗಳಲ್ಲಿ ಡ್ರೈವರು ಪೋಲೀಸಿನವರಿಗೆ ಟಾಟಾ ಮಾಡುತ್ತಾರೆ. ಪೋಲೀಸಿನವರು ಡ್ರೈವರಿಗೆ ಟಾಟಾ ಮಾಡುತ್ತಾರೆ. ಈ ರೀತಿ ಅವರು ಟಾಟಾ ಮಾಡುವುದರಲ್ಲಿ ಒಂದು ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ಅವನಲ್ಲಿ ಪರ್ಮಿಟ್ ಇದೆಯೋ ಇಲ್ಲವೋ ಯಾವುದೂ ಗೊತ್ತಿಲ್ಲ. ಯಾವುದೋ ಒಂದು ಅಂಡರ್‌ಸ್ಟ್ಯಾಂಡಿಂಗ್ ಮೇಲೆ ಒಬ್ಬರಿಗೊಬ್ಬರು ಟಾಟಾ ಮಾಡಿಕೊಳ್ಳುತ್ತಾರೆ. ಈ ಬಸ್ಸುಗಳನ್ನು ಹತ್ತುವುದಕ್ಕೆ ಜನ ತುಂಬಿರುತ್ತಾರೆ. ಈ ಕಾಂಟ್ರಾಕ್ಟ್ ಕ್ಯಾರೇಜ್‌ಗಳು ನಿರರ್ಗಳವಾಗಿ ಯಾವ ಹೆದರಿಕೆ ಮತ್ತು ಬೆದರಿಕೆಯೂ ಇಲ್ಲದೆ ಹಗಲು ರಾತ್ರಿ ರಸ್ತೆಯಲ್ಲಿ ಓಡಾಡುತ್ತಿರುತ್ತವೆ.

ಶ್ರೀ ಟಿ. ಎಂ. ಮಂಜುನಾಥ್.—ಪೋಲೀಸ್ ಇನ್‌ಸ್ಪೆಕ್ಟರು ಈ ಬಸ್ಸುಗಳಲ್ಲಿ ಕುಳಿತುಕೊಂಡು ಸೇಫಾಗಿ ಕರೆದುಕೊಂಡು ಹೋಗುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಇವೊತ್ತು ರಸ್ತೆಗಳ ತುಂಬಾ ನಾವು ಕಾಣುತ್ತಾ ಇರುವುದು ಸರ್ಕಾರಿ ಸಂಸ್ಥೆಗಳ ಬಸ್ಸುಗಳನ್ನೆಲ್ಲ ಇವೊತ್ತು ನಾವು ರಸ್ತೆಗಳ ತುಂಬಾ ಕಾಣುತ್ತಿರುವುದು ಮಲ್ಟಿ ಕಲರ್ ಇರತಕ್ಕ ಲಗ್ಷುರಿ ಪ್ರೈವೇಟ್ ಬಸ್ಸುಗಳನ್ನು. ನಾನು ಕೆಲವು ಪತ್ರಿಕೆಗಳಲ್ಲಿ ಓದಿದ್ದೇನೆ. ಶ್ರೀಮಾನ್ ರಂಗನಾಥ ಅವರು ಸರ್‌ಪ್ರೈಜ್ ವಿಜಿಟ್ ಕೊಟ್ಟು ಕೆಲವು ಕಾಂಟ್ರಾಕ್ಟ್ ಕ್ಯಾರೇಜ್‌ಗಳನ್ನು ಚೆಕ್ ಮಾಡಿದ್ದಾರೆ ಎಂದು. ಇದು ಬಹಳ ಸಂತೋಷ. ಹಿಂದಿನ ಸಚಿವರೂ ಸಹ ಇದೇ ರೀತಿ ಸರ್‌ಪ್ರೈಜ್ ವಿಜಿಟ್‌ಕೊಟ್ಟು ಕೆಲವು ಕಾಂಟ್ರಾಕ್ಟ್ ಬಸ್ಸುಗಳನ್ನು ಚೆಕ್ ಮಾಡಿದ್ದಾರೆ. ಎರಡು ಬಸ್ಸುಗಳ ಪರ್ಮಿಟ್ ರದ್ದು ಮಾಡಿ ಆ ಮೇಲೆ ಸುಮ್ಮನೆ ಮಲಗಿದರು. ಆದರೆ ಶ್ರೀಮಾನ್ ರಂಗನಾಥ್ ಅವರು ಆ ರೀತಿ ಮಾಡುವುದಿಲ್ಲ ಎನ್ನುವ ನಂಬಿಕೆ ನನಗೆ ಇದೆ. ಈ ರೀತಿ ಸರ್‌ಪ್ರೈಜ್ ವಿಜಿಟ್‌ಕೊಟ್ಟು ಕಾಂಟ್ರಾಕ್ಟ್ ಬಸ್ಸುಗಳನ್ನು ಚೆಕ್ ಮಾಡುವುದನ್ನು ಮಧ್ಯೆ ಮಧ್ಯೆ ಮುಂದುವರಿಸಬೇಕು. ಮಾನ್ಯ ಶ್ರೀ ರಂಗನಾಥ್ ಅವರು ಅಧಿಕಾರದಲ್ಲಿ ಇರುವವರೆಗೂ ಈ ರೀತಿ ಚೆಕ್ ಮಾಡುವುದನ್ನು ಮುಂದುವರಿಸಬೇಕು. ಇಲ್ಲದೇ ಹೋದರೆ ಹಿಂದಿನ ಸಚಿವರು ಮಾಡಿದ ಹಾಗೆ ಷೋ ಮಾಡುವುದಕ್ಕೆ ಒಂದೆರಡು ಸಾರಿ ಸರ್‌ಪ್ರೈಜ್ ವಿಜಿಟ್ ಕೊಟ್ಟು ಚೆಕ್ ಮಾಡಿದರು ಎಂದು ಅರ್ಥವಾಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬಾರದು. ಹಾಗೆಯೇ ಬೆಂಗಳೂರು ನಗರದಲ್ಲಿ ಜನಸಂಖ್ಯೆಯೂ ಜಾಸ್ತಿ ಇದೆ. ಜೊತೆಗೆ ಇಲ್ಲಿ ಫ್ಲೋಟಿಂಗ್ ಪಾಪ್ಯುಲೇಷನ್ ಜಾಸ್ತಿ ಇದೆ. ಆದ್ದರಿಂದ ಬೆಂಗಳೂರು ನಗರದಲ್ಲಿ ಕೂಡ ಹಾಕಿರತಕ್ಕ ಬಸ್ಸುಗಳ ಸಂಖ್ಯೆ ಸಾಲದೆನ್ನುವ ವಾದ ಇದೆ. ಸಾರ್ವಜನಿಕರ ಓಡಾಟ ವಿಪರೀತವಾಗಿದೆ. ಆದ್ದರಿಂದ ಬಸ್ಸುಗಳ ಅನುಕೂಲತೆ ಜಾಸ್ತಿಯಾಗಬೇಕು.

ಕಾರವಾರ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ನಾನು ನೋಡಿದ್ದೇನೆ. ಅಲ್ಲಿ ಬಸ್ಸುಗಳಲ್ಲಿ ಇರತಕ್ಕ ಡ್ರೈವರ್ ಮತ್ತು ಕಂಡಕ್ಟರುಗಳನ್ನು ಆಕ್ಷೇಪಣೆ ಮಾಡಿದರೆ ತಪ್ಪಾಗುತ್ತದೆ. ಏತಕ್ಕೆಂದರೆ ಒಂದು ಬಸ್ಸಿಗೆ ಇಷ್ಟೇ ಜನಗಳನ್ನು ಹಾಕಬೇಕು, ಇಷ್ಟೇ ಕೆಪಾಸಿಟಿ ಇರಬೇಕು ಎಂದು ಇಲಾಖೆಯವರು ಗೊತ್ತು ಮಾಡಿದ್ದಾರೆ. ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಕೆಲವು ಸಂದರ್ಭದಲ್ಲಿ ಮನೆ ಯಜಮಾನ ಬಸ್ಸನ್ನು ಹತ್ತಿರುತ್ತಾನೆ. ಹೆಂಡತಿಗೆ ಬಸ್ಸಿನಲ್ಲಿ ಸೀಟು ಇಲ್ಲ ಎಂದು ಹೇಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಹೆಂಡತಿ ಬಸ್ಸಿನಲ್ಲಿ ಹತ್ತಿರುತ್ತಾಳೆ ಗಂಡನಿಗೆ ಸೀಟು ಸಿಕ್ಕುವುದಿಲ್ಲ. ಇಂಥಾ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ಬಿಟ್ಟು ಹೋಗಬೇಕಾದಂತಹ ಸಂದರ್ಭಗಳು ತೊಂದರೆಗಳು ಬರುತ್ತವೆ. ಅನೇಕ ಕಡೆ ನಾವು ನೋಡಿದ್ದೇವೆ. ಅನೇಕ ಜನ ಸಾಲುಸಾಲಾಗಿ ಬಸ್ಸಿಗಾಗಿ ಕಾಯುತ್ತಿರುತ್ತಾರೆ. ಈಗ ಉದಾಹರಣೆಗಾಗಿ ಹೇಳುವುದಾದರೆ ಶಿವಮೊಗ್ಗ ಜಿಲ್ಲೆಯಲ್ಲಿ ನಮ್ಮದೇ ವಾಸಿ ಎನಿಸುತ್ತದೆ. ಪ್ರೈವೇಟ್ ಬಸ್ಸುಗಳಲ್ಲಿ ಕಾಂಪಿಟೇಷನ್ ಇರುತ್ತದೆ. ಗಂಟೆಗೊಂದು ಬಸ್ಸು ಇರುತ್ತದೆ. ಈ ದೃಷ್ಟಿಯಿಂದ ಕೆಲವು ಕಡೆ ಏನಾಗಿದೆ ಎಂದರೆ ಬಸ್ಸು ರೂಟುಗಳನ್ನು ರಾಷ್ಟ್ರೀಕರಣ ಮಾಡಿರತಕ್ಕ ವಿಭಾಗಗಳಲ್ಲಿ ಸಾರ್ವಜನಿಕರು ಯಾವ ರೀತಿ ಅಭಿಪ್ರಾಯ ಪಡುತ್ತಾರೆ ಎಂದರೆ ಕೆಂಪು ಬಸ್ಸುಗಳಿಗಿಂತ ಪ್ರೈವೇಟ್ ಬಸ್ಸುಗಳು ಇದ್ದರೆ ನಾವು ಊರನ್ನು ತಲುಪುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಕೆಂಪು ಬಸ್ಸುಗಳ ಬಗ್ಗೆ ಒಂದು ತಪ್ಪು ಮನೋಭಾವನೆ ಕೆಟ್ಟ ಮನೋಭಾವನೆ ಜನತೆಯಲ್ಲಿ ಬರುತ್ತಿದೆ. ಅದು ಹೋಗಬೇಕು. ಆದ್ದರಿಂದ ಸರ್ಕಾರದವರು ಹೆಚ್ಚು ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರಕ್ಕೆ ಹಣಕಾಸಿನ ತೊಂದರೆ ಇರಬಹುದು. ಆದರೆ ಅದನ್ನು ನಿವಾರಣೆ ಮಾಡಿ ಹೆಚ್ಚು ಬಸ್ಸುಗಳನ್ನು ಓಡಿಸತಕ್ಕ ಜವಾಬ್ದಾರಿ ಸರ್ಕಾರದ ಮೇಲೆ ಇದೆ ಎಂಬುದನ್ನು ಮನಗಾಣಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ಡ್ರೈವರ್ ಮತ್ತು ಕಂಡಕ್ಟರುಗಳಿಗೆ ಲೈಸೆನ್ಸ್ ಕೊಡುವ ವಿಷಯದಲ್ಲಿ ಹೇಳುವುದಾದರೆ ಸರ್ಕಾರದವರು ಡ್ರೈವರ್ ಮತ್ತು ಕಂಡಕ್ಟರುಗಳಿಗೆ ಯಥೇಚ್ಛವಾಗಿ ಲೈಸೆನ್ಸ್ ಕೊಡುತ್ತಿದ್ದಾರೆ. ಅವರನ್ನು ಸರಿಯಾದ ಪರೀಕ್ಷೆಗೆ ಒಳಪಡಿಸುವುದಿಲ್ಲ. ಮೊದಲು ಡ್ರೈವರ್‌ಗಳಿಗೆ ಲರ್ನಿಂಗ್ ಲೈಸೆನ್ಸ್ ಎಂದು ಕೊಡುತ್ತಾರೆ. ಆ ಮೇಲೆ ಅದನ್ನೇ ಖಾಯಂ ಮಾಡುತ್ತಾರೆ. ಬೆಂಗಳೂರು ನಗರದಲ್ಲಿ ನಾನು ಎಷ್ಟೋ ಸಾರಿ ನೋಡಿದ್ದೇನೆ. ಅನೇಕ ಆಕ್ಸಿಡೆಂಟ್‌ಗಳು ಆಗಿವೆ. ವಿಪರೀತವಾಗಿ ಟ್ರಾಫಿಕ್ ಇರುವ ಕಡೆ ಲಾರಿಗಳು ಎಕ್ಸ್‌ಪ್ರೆಸ್ ಹೋದಹಾಗೆ ಹೋಗುತ್ತವೆ. ಎಷ್ಟೋ ಸಾರಿ ಸರ್ಕಲ್‌ಗಳಲ್ಲಿ ಮತ್ತು ರಸ್ತೆ ಮಧ್ಯದಲ್ಲಿ ಕೈತೋರಿಸಿ ಟ್ರಾಫಿಕ್ ಕಂಟ್ರೋಲ್ ಮಾಡುವುದಕ್ಕೆ ನಿಂತಿರತಕ್ಕ ಪೋಲೀಸ್ ಕಾನ್‌ಸ್ಟೇಬಲ್‌ಗಳು ಮತ್ತು ದಫೇದಾರರನ್ನು ಲಾರಿಗಳು ಹೊಡೆದುಕೊಂಡು ಹೋಗಿರ ತಕ್ಕ ನಿದರ್ಶನಗಳು ಇವೆ. ಆದ್ದರಿಂದ ಈ ಆಕ್ಸಿಡೆಂಟ್‌ಗಳನ್ನು ತಪ್ಪಿಸುವ ಸಲುವಾಗಿ ಡ್ರೈವರ್‌ಗಳಿಗೆ ಲೈಸೆನ್ಸ್ ಕೊಡುವ ವಿಷಯದಲ್ಲಿ ಸ್ವಲ್ಪ ಬಿಗಿಯಾದ ನೀತಿಯನ್ನು ಅನುಸರಿಸಬೇಕು. ಕಾನೂನು ಪ್ರಕಾರ ಡ್ರೈವರ್‌ಗಳಿಗೆ ಲೈಸೆನ್ಸ್ ಕೊಡುವಾಗ ಏನೇನು ಪ್ರೊಸೀಜರನ್ನು ಅನುಸರಿಸಬೇಕೋ ಅದನ್ನು ಅನುಸರಿಸದೆ ಲೈಸೆನ್ಸ್ ಕೊಡುವುದಾದರೆ ಅನಾಹುತಗಳು ಜಾಸ್ತಿಯಾಗುತ್ತವೆ. ಇದೇ ರೀತಿ ಕಂಡಕ್ಟರುಗಳಿಗೂ ಕೂಡ ಲೈಸೆನ್ಸ್ ಕೊಡುವಾಗ ಕಾನೂನು ಪ್ರಕಾರ ಏನೇನು ಪ್ರೊಸೀಜರ್ ಅನುಸರಿಸಬೇಕೋ ಅದನ್ನೆಲ್ಲಾ ಅನುಸರಿಸಬೇಕು. ಎಷ್ಟೋ ಸಾರಿ ಪ್ರಯಾಣಿಕರು ಇನ್ನೂ ಬಸ್ಸು ಹತ್ತುತ್ತಿರುತ್ತಾರೆ, ಆಗಲೇ ಕಂಡಕ್ಟರು ಗಂಟೆಯನ್ನು ಹೊಡೆಯುತ್ತಾರೆ. ಇದರಿಂದಾಗಿ ಎಷ್ಟೋ ಜನ ಬಸ್ಸು ಹತ್ತುವಾಗಲೇ ಅಕ್ಸಿಡೆಂಟಾಗಿ ಸತ್ತು ಹೋಗುತ್ತಾರೆ. ಅದು ಪ್ರತಿನಿತ್ಯ ನಡೆಯುತ್ತಿರುತ್ತದೆ.

3-00 P. M.

ಆ ಒಂದು ದೃಷ್ಟಿಯಿಂದ ತಾವು ಈ ಲೈಸೆನ್ಸ್ ಬಗ್ಗೆ ನಡೆಯತಕ್ಕ ಕೇಸುಗಳು ಬಹಳ ಸಣ್ಣವೆಂದು ಕಾಣಬಹುದು. ಆದಾಗ್ಗೂ ಸರ್ಕಾರದವರು ಇವುಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ನಮಗೆ ಗೊತ್ತಿದೆ ಕೆಲವು ವೆಹಿಕಲ್ಸ್‌ಗಳನ್ನು ಏಕ ಕಾಲಕ್ಕೆ ಡ್ರೈವಿಂಗ್ ಲೈಸೆನ್ಸ್‌ನ್ನೂ ಮತ್ತು ಇನ್ನೂ ಆ ಡ್ರೈವರ್ ಮತ್ತು ಕಂಡಕ್ಟರ ಲೈಸೆನ್ಸ್‌ಗಳನ್ನೂ ಚೆಕ್ ಮಾಡುವುದಕ್ಕೆ ಫ್ಲೈಯಿಂಗ್ ಸ್ಕ್ವಾಡ್ ಅಲ್ಲದೆ ಅದಕ್ಕೆ ಒಂದು ಗುಂಪುಕೂಡಿದ ಪೋಲೀಸ್ ಪಡೆಯೇ ಇದೆ. ಆದರೆ ಹಾಗೆ ಚೆಕ್‌ಮಾಡುವುದರಲ್ಲಿ ಬಹಳ ನಕಲಿ ಚೆಕಿಂಗ್ ಇರುತ್ತವೆ. ಕಾರಣ ಆ ವಾಹನಗಳವರಿಗೂ ಮತ್ತು ಪೋಲೀಸಿನವರಿಗೂ ಒಳಗೊಳಗೆ ಒಂದು ಹೊಂದಾಣಿಕೆ ಇರುತ್ತದೆ. ಆದರೆ ಅದರ ಬಗ್ಗೆ ನಾನೀಗ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕಾರಣ ಇದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಆದರೆ ನಾನು ಈ ಒಂದು ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಮಾಡಬೇಕೆಂದಿರುವುದೇನೆಂದರೆ— ಡ್ರೈವರನಾಗಲಿ- ಕಂಡಕ್ಟರಾಗಲೀ ಅಥವಾ ಬಸ್ ಮಾಲೀಕನಾಗಲಿ ತಪ್ಪು ಮಾಡಿದಾರೆಂದು ಯಾವಾಗ–ಎಲ್ಲಿ ತಿಳಿದು ಬರುತ್ತದೋ ಅಲ್ಲೇ ಅದರ ವಿಚಾರಮಾಡಿ ಅವರಿಗೆ ಶಿಕ್ಷೆ ಮಾಡಬೇಕು ಎಂಬುದನ್ನು ಹೇಳುತ್ತಿದ್ದೇನೆ. ಹೀಗೆ ಅಮೇರಿಕದೇಶದಲ್ಲಿ ಮಾಡುತ್ತಿದ್ದಾರೆಂದು ಕೇಳುತ್ತೇನೆ. ಇದನ್ನು ಬಿಟ್ಟು ಕೋರ್ಟಿಗೆ ಎಳೆದುಕೊಂಡು ಹೋಗುವದು ಎಂದರೆ ಅದರಿಂದ ಅನೇಕ ರೀತಿಯ ತೊಂದರೆಗಳಿರುತ್ತವೆ. ಅದನ್ನು ತಪ್ಪಿನಲು ಸ್ಥಳದಲ್ಲೇ ತಪ್ಪನ್ನು ವಿಚಾರಣೆ ಮಾಡಿ ಅಲ್ಲಿಯೇ ಅದಕ್ಕೆ ಶಿಕ್ಷೆ ಕೊಡಬೇಕೆಂದು ಹೇಳುತ್ತೇನೆ, ಅಂದರೆ ಅವರಿಂದ ಪೆನಾಲ್ಟಿಯನ್ನು ಅಲ್ಲೇ ಸ್ಥಳದಲ್ಲಿ ವಸೂಲ್ಮಾಡಿ ವೆಹಿಕಲ್ಲನ್ನು ಬಿಟ್ಟುಬಿಡ ಎಂದು ಹೇಳುತ್ತೇನೆ. ಅದನ್ನು ಮಾಡದೆ ಪೋಲೀಸಿನವರು ಡ್ರೈವರನ ಲೈಸೆನ್ಸ್‌ನ್ನು ಕಿತ್ತುಕೊಂಡು ಸತಾಯಿಸುವುದು ಇತ್ಯಾದಿಗಳೆಲ್ಲ ಸರಿಯಾದ್ದಲ್ಲ. ಪೋಲೀಸಿನವರ ಈ ಕಾಟವನ್ನು ತಪ್ಪಿಸಿಕೊಳ್ಳಲು ಅವರಲ್ಲಿ ಲೈಸೆನ್ಸ್ ಇದ್ದರೂ ಅವರಿಲ್ಲ ಎನ್ನುವುದು ಆಗ ಪೋಲೀಸನವರು ವೆಹಿಕಲ್ಲನ್ನು ಬಿಡುವುದಿಲ್ಲ ಎನ್ನುವುದು ಇವೆಲ್ಲಾ ಉದ್ಭವವಾಗುವುದಕ್ಕೆ ಬದಲಾಗಿ ಡ್ರೈವರನಾಗಲಿ ಕಂಡಕ್ಟರಾಗಲಿ ತಪ್ಪು ಮಾಡಿದ್ದರೆ ಅವರಿಗೆ ಅಲ್ಲೇ ಸ್ಥಳದಲ್ಲಿ ಪೆನಾಲ್ಟಿ ಹಾಕಿ ಅದನ್ನು ವಸೂಲ್ಮಾಡುವುದಕ್ಕೆ ಒಂದು ಅವಕಾಶ ಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಪೋಲೀಸಿನವರ ವಿಚಾರಕ್ಕೆ ಬಂದರೆ ಇವರಿಗೆ ಅವರ ಇಲಾಖೆಯಲ್ಲಿ ಇಂತಿಂಥವರು ತಿಂಗಳಿಗಿಷ್ಟು ಬಸ್‌ಕೇಸುಗಳನ್ನು ಹಾಕಲೇ ಬೇಕೆಂಬ ಕಡ್ಡಾಯವಿದೆಯಂತೆ. ಅಂದರೆ ಬಸ್ಸಿನವರು ತಪ್ಪು ಮಾಡಲಿ-ಮಾಡದಿರಲಿ ಪೋಲೀಸರಂತು ಅವರ ಮೇಲೆ ತಿಂಗಳಿಗಿಷ್ಟು ಕೇಸುಗಳಂತೆ ಹಾಕಬೇಕೆಂತೆ. ಅಂದಾಗ ಅವರು ಕೇಸನ್ನು ಹಾಕತಕ್ಕ ಪರಿಸ್ಥಿತಿ ನಿಜವಾಗಿ ಅಲ್ಲಿ ಇಲ್ಲದಿದ್ದರೂ ಅದನ್ನು ಸೃಷ್ಟಿಮಾಡಿ ಅವನ್ನು ಕೇಸನ್ನು ಹಾಕಲೇಬೇಕಾಗುತ್ತದೆ. ಅದೇನೇ ಇರಲಿ ಸತ್ಯವೊ

ಅಸತ್ಯವೋ ಅವುಗಳ ವಿಚಾರಣೆಯನ್ನಾದರೂ ಅಲ್ಲೇ ಸ್ಥಳದಲ್ಲಿ ತೀರ್ಮಾನ ಮಾಡುವುದಕ್ಕೆ ಒಂದು ಅವಕಾಶ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇನೆ. ನಾನು ಒಂದಾವರ್ತಿ ಒಂದು ಟ್ಯಾಕ್ಸಿಯಲ್ಲಿ ಸಂಚಾರ ಮಾಡುತ್ತಿದ್ದಾಗ ಅದನ್ನು ಪೋಲೀಸರು ಚೆಕ್ ಮಾಡಿ ಅ ವೆಹಿಕಲ್ಲಿನ ಬಗ್ಗೆ ಒಂದು ಕೇಸ್ ಹಾಕಲು ಆ ಡ್ರೈವರನಿಗೆ ನೋಟೀಸನ್ನು ಜಾರಿ ಮಾಡುವುದಕ್ಕೆ ಆ ವೆಹಿಕಲ್ಲನ್ನೇ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗಬೇಕು ದಾರಿಯಲ್ಲಿ ನೋಟೀಸನ್ನು ಜಾರಿ ಮಾಡುವುದಕ್ಕಾಗುವುದಿಲ್ಲ ಎಂದು ಪೋಲೀಸರು ಆ ದಿವಸ ಅಲ್ಲಿ ವಾದ ಮಾಡುತ್ತಿದ್ದುದು ಬಹಳ ಆಶ್ಚರ್ಯವಾಗಿತ್ತು. ಅದಕ್ಕೆ ತಮ್ಮ ಕಾಲದಲ್ಲಿ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ದಿನ ದಿನಕ್ಕೂ ಜನಸಂದಣಿ ಹೆಚ್ಚುತ್ತಿದೆ. ಅದಕಾಗಿ ಇಲ್ಲಿ ಈ ಸಾರಿಗೆ ಅನುಕೂಲದ ಬಗ್ಗೆ ಸಾರ್ವಜನಿಕರಿಗೆ ಟ್ರಾಂವೆಗಳನ್ನು ಹಾಕತಕ್ಕ ಬಗ್ಗೆ ಅಥವಾ ಅಂಡರ್ ಗ್ರೌಂಡ್ ಬಸ್ಸುಗಳನ್ನು ರನ್ ಮಾಡತಕ್ಕ ಬಗ್ಗೆ ಸರ್ಕಾರದವರೇನು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದಾರೆಂಬುದನ್ನು ಉತ್ತರ ಕೊಡತಕ್ಕ ಸಮಯದಲ್ಲಿ ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರಿಗೆ ಸಂಸ್ಥೆಗೆ 1969 ರಿಂದ 1973 ನೇ ಡಿಶಂಬರ್ ಕೊನೆಯವರೆಗೆ ಆಗಿರತಕ್ಕ ವೆಚ್ಚ ಮತ್ತು ಬಂದಿರತಕ್ಕ ಆದಾಯಗಳನ್ನು ಸೂಚಿಸಿದ್ದಾರೆ. ಆದರೆ ಇದರ ಆದಾಯ ದಿನ ದಿನಕ್ಕೂ ಬಹಳ ಇಳಿಮುಖವಾಗುತ್ತಿದೆ. ಈ ಇಲಾಖೆಯಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಅಲ್ಲಲ್ಲೆ ಬಸ್ಸುಗಳನ್ನು ಚೆಕ್ ಮಾಡತಕ್ಕ ಚೆಕ್ಕಿಂಗ್ ಇನ್‌ಸ್ಪೆಕ್ಟರೂ, ಡ್ರೈವರೂ ಮತ್ತು ಕಂಡಕ್ಟರಗಳೂ ಎಲ್ಲರೂ ಒಂದಾಗಿ ವಿಪರೀತವಾಗಿ ದುಡ್ಡನ್ನು ಹೊಡೆಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬರತಕ್ಕ ಹಣ ವಿಶೇಷವಾಗಿ ಸೋರಿಹೋಗುತ್ತಿರುವುದರಿಂದ ರಾಜ್ಯಕ್ಕೆ ಬರತಕ್ಕ ಆದಾಯ ವರ್ಷ ವರ್ಷೆ ಕಡಮೆಯಾಗುತ್ತಿದೆ ಈ ರೀತಿ ಹಣವನ್ನು ಹೊಡೆದು ಈ ಚೆಕಿಂಗ್ ಇನ್‌ಸ್ಪೆಕ್ಟರುಗಳು ಮತ್ತು ಡ್ರೈವರುಗಳೂ ಕಂಡಕ್ಟರುಗಳೂ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆಂದು ಹೇಳುತ್ತಿದ್ದಾರೆ. ಹೀಗೆ ಹಣ ಸೋರಿ ಹೋಗುತ್ತಿರುವುದನ್ನು ಸರ್ಕಾರದವರು ಕಟ್ಟುನಿಟ್ಟಾಗಿ ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಈ ಬಗ್ಗೆ ಸರ್ಕಾರದವರು ನಿಲುವೇನೆಂಬುದನ್ನು ಕೂಡ ದಯಮಾಡಿ ತಿಳಿಸಬೇಕು.

ಇನ್ನು ಸರ್ಕಾರದವರು ಏನೋ ಕೆಲವು ಕಾರಣಗಳಿಂದ ಪೆಟ್ರೋಲ್ ಎಣ್ಣೆ ಬೆಲೆ ಜಾಸ್ತಿಯಾಗಿದೆ—ಸ್ಪೇರ್ ಪಾರ್ಟುಗಳ ಬೆಲೆ ಜಾಸ್ತಿಯಾಗಿದೆ ಎಂದು ಬಸ್ ದರಗಳನ್ನು ಒಂದಕ್ಕೆ ಮೂರರಷ್ಟು ಹೆಚ್ಚಿಸಿದ್ದಾರೆ. ಇದರಿಂದ ರಾಜ್ಯದಲ್ಲಿ ಸ್ಟೇಟ್‌ಕ್ಯಾರೇಜುಗಳೂ ಕಾಂಟ್ರಾಕ್ಟ್ ಕ್ಯಾರೇಜುಗಳೂ ಜಾಸ್ತಿಯಾಗಿವೆ. ಇಲಾಖೆಯಲ್ಲಿ ಸೋರಿ ಹೋಗುತ್ತಿರುವ ಹಣವನ್ನು ತಡೆಗಟ್ಟಿದರೆ ಪ್ರಯಾಣಿಕರ ಬಸ್‌ದರವನ್ನು ಸರ್ಕಾರ ಹೆಚ್ಚಿಸತಕ್ಕ ಅಗತ್ಯ ಅಷ್ಟಾಗಿ ಇರುವುದಿಲ್ಲ.

ಇನ್ನು ನಾನು ವಸತಿ ಸೌಕರ್ಯದ ಬೇಡಿಕೆಯ ಬಗ್ಗೆ ನಾಲ್ಕು ಮಾತುಗಳನ್ನಾಡಲು ಇಚ್ಛಿಸಿದ್ದೇನೆ...

ಶ್ರೀ ಕೆ. ಪ್ರಭಾಕರ್.—ಸರ್ಕಾರಿ ಬಸ್ಸುಗಳಲ್ಲಿ ಲಾಭ ಹೆಚ್ಚಾಗುವುದಕ್ಕೆ ಸಾರ್ವಜನಿಕರೂ ಕೂಡ ಸಹಕರಿಸಬೇಕು...

ಶ್ರೀ ಎಸ್. ಬಂಗಾರಪ್ಪ.—ಸಾರ್ವಜನಿಕರು ಇನ್ನೆಷ್ಟು ಸಹಕರಿಸಬೇಕು ? ಈ ಕೆಂಪು ಬಸ್ಸುಗಳೇನಿವೆ ಇವುಗಳಿಗೆ ಬಾಗಿಲಿಗೆ ಬೋಲ್ಟ್—ನಟ್ಟುಗಳೇ ಇರುವುದಿಲ್ಲ. ಆದಾಗ್ಯೂ ಸಾರ್ವಜನಿಕರು ಇವುಗಳಲ್ಲಿ ಪ್ರಯಾಣ ಮಾಡುವುದನ್ನು ಬಿಟ್ಟಿಲ್ಲ. ಈ ಕೆಂಪು ಬಸ್ಸುಗಳು ಪ್ರಯಾಣ ಹೊರಟ ಮೇಲೆ ರಸ್ತೆಯಲ್ಲಿ ಎಲ್ಲಿ ಅಂದರೆ ಅಲ್ಲೇ ನಿಂತುಹೋಗುತ್ತಿವೆ. ಆದರೂ ಸಾರ್ವಜನಿಕರು ಇವುಗಳಲ್ಲಿ ಪ್ರಯಾಣ ಮಾಡುವುದನ್ನು ಕೈಬಿಟ್ಟಿಲ್ಲ. ಈ ಕೆಂಪು ಬಸ್ಸುಗಳಲ್ಲಿ ಒಂದೇ ಸಮನೆ ಹಿಂದೂ ಮುಂದೂ ಹೊಗೆ ಬರುತ್ತಿದ್ದರೂ ಸಾರ್ವಜನಿಕರು ಸಹಿಸಿಕೊಂಡು ಪ್ರಯಾಣ ಮಾಡುತ್ತಿದ್ದಾರೆ. ಪೆಟ್ರೋಲು ಇಲ್ಲದಿದ್ದರೂ ಓಡುವಂಥ ಕೆಲವು ಕೆಂಪುಗಾಡಿಗಳಿವೆ ? ಅನೇಕ ಬಸ್ಸುಗಳಿಗೆ ಟೈರು ಟ್ಯುಬುಗಳೇ ಸರಿಯಾಗಿರುವುದಿಲ್ಲ. ಹೊಸ ಟೈರು ಟ್ಯೂಬುಗಳನ್ನು ನುಂಗಿ ನೀರುಕುಡಿಯುವಂಥ ಅಧಿಕಾರಿಗಳು ಈ ಸಾರಿಗೆ ಇಲಾಖೆಯಲ್ಲಿದ್ದಾರೆ. ಹಿಂದೆ ಒಂದಾವರ್ತಿ ರೈಲ್ವೆ ಇಲಾಖೆಯಲ್ಲಿ ಇಂಜಿನ್ನುಗಳನ್ನು ಖರೀದಿ ಮಾಡಿದ ದಾಖಲೆ ಇದ್ದರೂ ಇಂಜಿನ್ನೇ ಇರಲಿಲ್ಲವೆಂದು ಹೇಳುತ್ತಿದ್ದಾರೆ. ಅಂಥ ಪರಿಸ್ಥಿತಿ ಇಲ್ಲಿ ಆಗಬಾರದೆಂದು ಹೇಳುತ್ತಿದ್ದೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ವಸತಿ ಸೌಕರ್ಯದ ಬಗ್ಗೆ ಹೇಳುವುದಾದರೆ—ಅಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರು ನಿದ್ದಾರೆ ಇವರೆಲ್ಲರೂ ಗ್ರಾಮಾಂತರವಾಸಿಗಳಾಗಿದ್ದಾರೆ. ಅಲ್ಲಿ ಅಂದರೆ ಅವರವರ ಗ್ರಾಮಗಳಲ್ಲಿ ಎಷ್ಟು ಜನರಿಗೆ ತಮ್ಮದೇ ಆದ ನಿವೇಶನವಾಗಲೀ ಅಥವಾ ಮನೆಯಾಗಲಿ ಇದೆ? ಅಲ್ಲಿ ಗುಡಿಸಲು ಗಳಲ್ಲಿವಾಸಮಾಡತಕ್ಕವರ ಗೋಳನ್ನು ಹೇಳತೀರದು. ಮನೆ ಕಟ್ಟುವುದಕ್ಕೆ ಸಾಕಷ್ಟು ಸೌಲತ್ತು ಕೊಟ್ಟಿಲ್ಲ ಅಂದಮೇಲೆ ಎಂಥ ಬೇಜವಾಬ್ದಾರಿ ಕೆಲಸ ಮಾಡಿದ್ದಾರೆಂಬುದನ್ನು ನಾನು ಸ್ಪಷ್ಟಪಡಿಸ ಬೇಕಾಗಿಲ್ಲ. ಇಂದು ಹಳ್ಳಿಗಳಲ್ಲಿ ನೋಡಿದರ ಶೇಕಡ 10–15 ಜನರಿಗೆ ಮಾತ್ರ ಮನೆಯಿದೆ, ಕೆಲವರಿಗೆ ಮನೆ ಕಟ್ಟಿಕೊಳ್ಳಲು ಜಾಗವೇ ಇಲ್ಲ. ಬೇರೆ ಜಾಗದಲ್ಲಿ ಅವರು ಕಟ್ಟಿ ಕೊಂಡಿರಬಹುದು, ಕೆಲವರಿಗೆ ಮನೆ ಮತ್ತು ಜಾಗ ಎರಡೂ ಇಲ್ಲ. ಇಂಥ ಪರಿಸ್ಥಿತಿ ಇದೆ, ಹಳ್ಳಿಗಾಡು ಮತ್ತು ಪಟ್ಟಣ ಗಳಲ್ಲಿ ಇದೇ ಪರಿಸ್ಥಿತಿಯಿದೆ. ಹಿಂದೆ ಜನತಾ ಗೃಹ ನಿರ್ಮಾಣ ಯೋಜನೆಗಾಗಿ ಬಾಂಗ್ಲ ತೆರಿಗೆ ಯನ್ನು ಮುಂದುವರೆಸಿದರು. ಯೋಜನೆಯ ಹೆಸರು ಬಹಳ ಚೆನ್ನಾಗಿದೆ. ಮಂತ್ರಿಗಳ ಅಮೃತ ಹಸ್ತದಿಂದಲೇ ಅದು ಮುಕ್ತಾಯವಾಗಬಹುದು. ಕೇಂದ್ರ ಸರಕಾರ ಕೈಬಿಟ್ಟಿದೆ, ರಾಜ್ಯ ಸರಕಾರ ಸುಸ್ತುಹೊಡೆದಿದೆ. ವಸತಿಯ ಬಗ್ಗೆ. ನಿವೇಶನಗಳ ಬಗ್ಗೆ ಸರಕಾರದ ನಿಲುವೇನು ಎಂಬುದನ್ನು ಸ್ಪಷ್ಟಪಡಿಸಬೇಕು. ಎಷ್ಟು ಜನರಿಕೆ ಮನೆಯಿದೆ, ಎಷ್ಟು ಜನರಿಗೆ ಇಲ್ಲ, ಅವರಿಗೆ ಮನೆಗೆ ಅವ ಕಾಶಮಾಡಲು ಯಾವ ಯೋಜನೆ ಮಾಡಿದ್ದೀರಿ ಎಂಬುದನ್ನು ಉತ್ತರದಲ್ಲಿ ತಿಳಿಸಬೇಕು. ಮನೆ ಕಟ್ಟಿಕೊಳ್ಳಲು ಮೆಟೀರಿಯಲ್ಸ್ ಕೊಡುವ ಬಗ್ಗೆ ಸಹ ಒಂದು ನೀತಿಯನ್ನನುಸರಿಸಬೇಕು. ವಸತಿ ಗಾಗಿ ಇಂದು 3 ಕೋಟಿ 85ಲಕ್ಷ ರೂಪಾಯಿಗಳ ಒಂದು ಯೋಜನೆಯಿದೆ. ಇದರಿಂದ ಎಷ್ಟು ಮನೆಗಳನ್ನು ನಿರ್ಮಾಣಮಾಡಬಹುದು? ಬೇರೇಬೇರೇ ತೆರಿಗೆ ಹಾಕಿ ಬಡವರಿಗೆ, ದುರ್ಬಲ ವರ್ಗದ ವರಿಗೆ ಮನೆ ಕಟ್ಟಿಸಿಕೊಡುವ ಯೋಜನೆ ಮಾಡಬೇಕೆಂದು ಹಲವಾರು ಮಾನ್ಯ ಸದಸ್ಯರು ಅನೇಕ ಸಲ ಹೇಳಿದ್ದಾರೆ. ಹಿಂದೆ ಸೊಸೈಟಿ ಮಾಡಿದರು, ತಾಲ್ಲೂಕು ಬೋರ್ಡಿನ ಮೂಲಕ ಮನೆ ಕಟ್ಟಿಸಿ ದರು. 11 ರೂಪಾಯಿಗಳ ಒಂದು ಷೇರು ತೆಗೆದುಕೊಳ್ಳಬೇಕು ಎಂದು ಹೇಳಿ ತೆಗೆದುಕೊಂಡ ವರಿಗೆ ಸೊಸೈಟಿ ಮೂಲಕ ಸಾಲ ಕೊಡಿಸಿದರು. ಇದು ಎಂಥ ಆಭಾಸದ ಕೆಲಸ ? ಸಾಲ ಕೊಟ್ಟರೆ ಅದನ್ನು ತೀರಿಸಬೇಕು. ಅದನ್ನು ಹೇಗೆ ತೀರಿಸಬೇಕು ? ಸಾಲ ಕೊಟ್ಟಮೇಲೆ ಅದನ್ನು ಪಡೆದವನಿಗೆ ತೀರಿಸಲು ಶಕ್ತಿಯಿದೆಯೇ ಎಂದು ಯೋಚನೆಮಾಡಬೇಕು. ಉದಾಹರಣೆಗೆ ಹರಿ ಜನರಿಗೆ ಸೊಸೈಟಿ ಮಾಡಿ ಸಾಲ ಕೊಟ್ಟಿದ್ದಾರೆ, ಅವರಿಗೆ ಸ್ವಂತ ಜಮೀನಿಲ್ಲ, ಸಂಪಾದನೆಯಿಲ್ಲ. ಅವರು ಹೇಗೆ ತೀರಿಸಬೇಕು ? ಅಸಲು, ಅದಕ್ಕೆ ಬಡ್ಡಿ, ಚಕ್ರಬಡ್ಡಿ ಎಲ್ಲಾ ಹಾಕಿ ಸಾಲವನ್ನು ವಾಪಸು ಕೊಡು ಎಂದರೆ ಅವನು ಸಂಪಾದನೆ ಇಲ್ಲದಿರುವಾಗ ಎಲ್ಲಿಂದ ತಂದುಕೊಡಬೇಕು ? ಬಡ್ಡಿ ಬೆಳೆಯುತ್ತಿದೆ. ಕೂಲಿ ಮಾಡುವವರಿಗೆ ಸಾಲ ತೀರಿಸುವ ಶಕ್ತಿಯಿದೆಯೇ ? ಸಾಲ ತೀರಿಸ ಬೇಕಾದರೆ ಅವನಿಗೆ ಸಂಪಾದನೆಗೆ ಏನಾದರೂ ಮಾರ್ಗ ಕಲ್ಪಿಸಿಕೊಡಬೇಕು. ಹಾಗೆ ಮಾಡಿದರೆ ಸಾಲ ವಾಪಸು ಕೊಡಬಹುದು. ಆದುದರಿಂದ ಇರುವ ಕಾನೂನನ್ನು ತಿದ್ದುಪಡಿ ಮಾಡಬೇಕು. ಎಲ್ಲಿಯವರೆಗೆ ಸಂಪಾದನೆ ಮಾಡಲು ಶಕ್ತಿ ಬರುವಂತೆ ಮಾಡುವುದಿಲ್ಲ ಅಲ್ಲಿಯವರೆಗೆ ಸಾಲ ವಾಪಸು ಕೊಡು ಎಂದು ಹೇಳುವುದಕ್ಕೆ ಹಕ್ಕಿಲ್ಲ. ಆದುದರಿಂದ ಈಗ ಕೊಟ್ಟಿರುವ ಸಾಲವನ್ನು ರೈಟಾಫ್ ಮಾಡಬೇಕು. ಬಡವರು ಅದನ್ನು ಕೊಡುವುದಕ್ಕಾಗುವುದಿಲ್ಲ. ಕೆಲವರು ಅರ್ಧ ಗೋಡೆ ಕಟ್ಟಿದ್ದಾರೆ, ಕಂಬ ಇಟ್ಟಿದ್ದಾರೆ, ಹೀಗೆ ಅರ್ಧಂಬರ್ಧ ಮಾಡಿ ಅಲ್ಲಿಗೆ ನಿಲ್ಲಿಸಿದ್ದಾರೆ. ಬರಗಾಲ ಬಂದಾಗ ಹಿಂದೆ ನಾವು ಗುಲ್ಬರ್ಗಾಕ್ಕೆ ನಿಯೋಗ ಹೋಗಿದ್ದೆವು. ಅಲ್ಲಿ ಕೆಲವು ಮನೆಗಳನ್ನು ಕಟ್ಟಿದುದನ್ನು ನೋಡಿದೆವು. ಅವನ್ನು ನೋಡಿದಾಗ ಎರಡನೆಯ ಯುದ್ಧದಲ್ಲಿ ಬಾಂಬು ಬಿದ್ದಾಗ ಜಪಾನಿನಲ್ಲಿದ್ದ ಸ್ಥಿತಿ ಜ್ಞಾಪಕಕ್ಕೆ ಬಂತು. ಅಲ್ಲಿದ್ದ ಮನೆಗಳು ಆ ಸ್ಥಿತಿಯಲ್ಲಿದ್ದವು. ಕೆಲವರು ಗುಡ್ಡದ ಪಕ್ಕದಲ್ಲಿ, ಊರಿಗೆ ದೂರದಲ್ಲಿ ಕಟ್ಟಿದ್ದಾರೆ. ಮನೆಗಳಿಗೆ ಬಾಗಿಲಿಲ್ಲ, ಕಿಟಕಿಯಿಲ್ಲ, ಅವುಗಳಲ್ಲಿ ಒಬ್ಬರೂ ವಾಸ ವಿಲ್ಲ. ಸರಕಾರಿ ಲೆಕ್ಕದ ಪ್ರಕಾರ 1972—73ರಲ್ಲಿ 3 ಲಕ್ಷದ 76 ಸಾವಿರ ಮನೆಗಳು ನಿರ್ಮಾಣ ವಾಗಿವೆ. ಆದರೆ ಜನತೆಗೆ ಮನೆಗಳು ದೊರೆಯದೆ ಹಣ ಪೋಲಾಗಿದೆ. ಕಟ್ಟಿರುವ ಮನೆಗಳು ವಾಸಕ್ಕೆ ಲಾಯಕ್ಕಾಗಿಲ್ಲ, ನಾಯಿನರಿಗಳು ಕಟ್ಟಿರುವ ಮನೆಗಳಲ್ಲಿ ವಾಸಮಾಡುತ್ತಿವೆ. ವಸತಿ ಯೋಜನೆ ಈ ನಮೂನೆಯಾಗಿದೆ. ಈ ನಮೂನೆ ಮಾಡಿದರೆ ಹಣವೆಲ್ಲಿಂದ ಬರುವುದು ಎಂಬುದು ಹಣಕಾಸಿನ ಸಚಿವರ ಯೋಚನೆ. ಅರ್ಧಂಬರ್ಧ ಮಾಡಿರುವ ಮನೆಗಳನ್ನು ಪೂರ್ಣ ಮಾಡಿ ಅವು ಗಳನ್ನು ವಸತಿಗೆ ಯೋಗ್ಯವಾಗಿ ಮಾಡಬೇಕು. ಇಲ್ಲದಿದ್ದರೆ ಇದುವರೆಗೆ ಖರ್ಚುಮಾಡಿರುವ ಹಣ ಹಾಳಾಗುವುದು

Mr. Chairman (Sri T. M. Manjunath) in the Chair

ಶ್ರೀ ಎಂ. ವೈ. ಘೋರ್ಪಡೆ.—ಅರ್ಧಂಬರ್ಧವಾಗಿರುವ ಮನೆಗಳನ್ನು ಪೂರ್ಣ ಮಾಡುತ್ತೇವೆ. ಪೀಪಲ್ಸ್ ಹೌಸಿಂಗ್ ಪ್ರೋಗ್ರಾಂ ಪ್ರಕಾರ 14ಸಾವಿರ ಮನೆ ಕಟ್ಟಿದ್ದಾರೆ. ಈ ತಿಂಗಳು ಅಥವಾ ಮೇ ಆಖೈರಿನೊಳಗೆ 14 ಸಾವಿರ ಮನೆಗಳನ್ನು ಪೂರ್ಣವಾಗಿ ಕಟ್ಟಿ ಮುಗಿಸುತ್ತೇವೆ. ಈ ವಿಚಾರದಲ್ಲಿ ಅನುಮಾನ ಬೇಕಾಗಿಲ್ಲ. ಅದನ್ನು ಪೂರ್ತಿಮಾಡಿ 10 ಸಾವಿರ ಮನೆಗಳ ಕೆಲಸ ಪ್ರಾರಂಭಿಸುತ್ತೇವೆ. ಮಳೆ ಬರುವುದಕ್ಕೆ ಮುಂಚೆ ಈಗ ಕಟ್ಟುತ್ತಿರುವ ಮನೆಗಳ ಕೆಲಸ ಪೂರ್ಣಗೊಳಿಸುತ್ತೇವೆ. ಏಪ್ರಿಲ್ ಮೇಯೊಳಗೆ ಪೂರ್ಣಮಾಡಲು ಬೇಕಾದ ಹಣವನ್ನಾಗಲೇ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ. ಅರ್ಧವಾಗಿರುವ ಮನೆಗಳ ಕೆಲಸವನ್ನು ಪೂರ್ತಿ ಮಾಡುವುದರಲ್ಲಿ ಅರ್ಥವಿದೆ. ಅಲ್ಲದೆ ಮತ್ತೆ 10 ಸಾವಿರ ಮನೆಗಳನ್ನು ನಿರ್ಮಿಸುವ ವಿಚಾರವೂ ಸಂತೋಷಕರವಾದುದು. ಯೋಜನೆ ಮುಂದುವರೆಯುವುದು. ಹತ್ತು ಸಾವಿರ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮವನ್ನು ಹಾಕಿದರೆ ಈ ಪ್ರಕಾರವಾಗಿ ಎಷ್ಟು ಶತಮಾನಗಳಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಕೋಟಿಗಟ್ಟಲೆ ಜನರಿಗೆ ವಸತಿ ಸೌಕರ್ಯವನ್ನು ಪೂರೈಸಿ ಕೊಡುತ್ತೀರಿ ಎಂದು ಕೇಳುತ್ತೇನೆ. ಎಷ್ಟು ಶತಮಾನಗಳ ಯೋಜನೆಯನ್ನು ಹಾಕುತ್ತೀರಿ ಎಂದು ಕೇಳುತ್ತೇನೆ. ನೀವು ಹತ್ತು ಮೈಲಿ ದೂರದಲ್ಲಿರುವಾಗಲೇ ವಾಸನೆಯನ್ನು ಹಿಡಿಯಬಲ್ಲೆವು ನೀವು ಯಾರು, ನಿಮ್ಮ ಸಮಾಚಾರವೇನು ಎಂದು. ನಿಮ್ಮನ್ನು ಪತ್ತೆ ಹಚ್ಚತಕ್ಕ ಪರಿಸ್ಥಿತಿ ನಮ್ಮನ್ನು ನೀವು ತಂದಿದ್ದೀರಿ. ಜನ ಅಲ್ಲಿಗೆ ಬಂದಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಕಟ್ಟುವುದಕ್ಕೆ ಬರುತ್ತಾರೆಂದರೆ ಜನ ಅನುಮಾನದಿಂದ ಕಾಣುತ್ತಾರೆ. ಏಕೆಂದರೆ ಇದು ಬಡವರ ಯೋಜನೆಯಲ್ಲ. ಕಂಟ್ರಾಕ್ಟರು ಮತ್ತು ದೊಡ್ಡ ದೊಡ್ಡವರು ಬಡವರ ಹೆಸರಿನಲ್ಲಿ ಅನುಕೂಲ ಮಾಡಿಕೊಳ್ಳುವ ಯೋಜನೆ. ಭಾರತ ದೇಶದಲ್ಲಿ ಸುಮಾರು 15 ಸಾವಿರ ಕೋಟಿ ರೂಪಾಯಿ ಸಾಲ ಮಾಡಿ ಪ್ರತಿಯೊಬ್ಬರ ತಲೆಯ ಮೇಲೂ ನೂರಾರು ಸಾವಿರಾರು ರೂಪಾಯಿ ಸಾಲವನ್ನು ತಮ್ಮ ಆಡಳಿತದಲ್ಲಿ ಹಾಗೂ ತಮ್ಮ ಪೂರ್ವಜರ ಆಡಳಿತದಲ್ಲಿ ಹೊರಿಸಿದ್ದೀರಿ. ಹಣಕಾಸಿನ ಪರಿಸ್ಥಿತಿಯಿಂದ ಹತ್ತು ಸಾವಿರ ಮನೆಗಳಿಗೇ ಸೀಮಿತಗೊಳಿಸುತ್ತಾರೆಯೋ ಅಥವಾ ಅದನ್ನು ಮುಂದುವರಿಸುತ್ತಾರೆಯೋ ಎನ್ನುವುದನ್ನು ಹೇಳಬೇಕು. ಇಷ್ಟು ಮನೆ ಕಟ್ಟುತ್ತೇವೆಂದು ಹೇಳುತ್ತೀರಿ. ಅದಕ್ಕಿಂತ ಹೆಚ್ಚು ಕಟ್ಟುವುದಕ್ಕಾಗುವುದಿಲ್ಲವೆಂದು ನನಗೆ ಗೊತ್ತು. ಅದಕ್ಕಿಂತ ಮೇಲೆ ಜಗಿತ ಮಾಡುವುದಕ್ಕೆ ಶಕ್ತಿ ನಿಮ್ಮ ಹತ್ತಿರ ಇಲ್ಲ. ಕೊನೇ ಪಕ್ಷ ಒಂದು ಯೋಜನೆಯನ್ನು ಹಾಕಿ ಅದಕ್ಕೆ ಎಷ್ಟು ಖರ್ಚಾಗುತ್ತದೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನಾದರೂ ಹೇಳಿ. ಹಣಕಾಸಿನ ಸಚಿವರು ಹಣವಿಲ್ಲ ಎಂದು ಹೇಳಿದ್ದಾರೆ. ಕೊನೇ ಪಕ್ಷ ಇಷ್ಟು ವರ್ಷಗಳಲ್ಲಿ ರಾಜ್ಯದಲ್ಲಿರತಕ್ಕ ಜನರಿಗೆ ಕಟ್ಟಿಸುವುದಕ್ಕಾಗಿ ಯೋಜನೆ ಹಾಕಿಕೊಂಡಿದ್ದೇವೆಂದು ಹೇಳಬಹುದು. ಬಡವರು ಈ ಹೊತ್ತು ಜೀವನ ಮಾಡುವುದಕ್ಕೆ ಆಗುವುದಿಲ್ಲ. ತಾವೆಲ್ಲ ದೊಡ್ಡ ದೊಡ್ಡ ಮನೆಗಳಲ್ಲಿ ಇದ್ದೀರಿ. ಸಮಾಜವಾದವನ್ನು ಹೇಳುತ್ತೀರಿ, ನಾವೂ ನಿಮ್ಮ ಹಾಗೆಯೇ ಎಂದು ಹೇಳುತ್ತೀರಿ. ಗುಲ್ಬರ್ಗ ಚುನಾವಣೆಯಲ್ಲಿ ಕೂಡ ಇದೇ ರೀತಿ ಹೇಳಿ ಗೆದ್ದು ಬಂದಿದ್ದೀರಿ. ಮಾನ್ಯ ಘೋರ್ಪಡೆಯವರು ಮತ್ತು ಅನೇಕ ಮಂತ್ರಿಗಳು ಅಲ್ಲಿಗೆ ಹೋಗಿ ಅಲ್ಲಿಯೇ ತಂಗಿದ್ದರು. ಖಾಸಗಿ ಭೇಟಿಯ ಮೇಲೆ ಹಣಕಾಸಿನ ಸಚಿವರು ಹೋಗಿ ಗುಲ್ಬರ್ಗದಲ್ಲಿ ಖಾಯಂ ಆಗಿ ವಸತಿ ಮಾಡಿ ಚುನಾವಣೆ ಮುಗಿಯುವವರೆಗೂ ಆ ಭಾಗದಲ್ಲಿ ಓಡಾಡಿದರು. ಚುನಾವಣೆಗೆ ಹೋದಾಗ ಮತ್ತೊಂದು ಕಡೆ ಹೋದಾಗ ಮನೆಗಳನ್ನು ನಿರ್ಮಾಣ ಮಾಡುತ್ತೇವೆ, ನಿಮಗೆಲ್ಲ ನೆರಳು ಸಿಕ್ಕುವ ಹಾಗೆ ಮಾಡುತ್ತೇವೆ, ಆ ಜವಾಬ್ದಾರಿ ನಮಗೆ ಇದೆ, ನಿಮ್ಮನ್ನು ನೋಡಿದರೆ ನಮ್ಮ ಕರುಳು ಕಿತ್ತು ಬರುತ್ತದೆ ಎಂದು ಕಳಕಳಿಯ ಮಾತುಗಳನ್ನು ಹೇಳುತ್ತೀರಿ. ಬಡ ಜನರನ್ನು ನೋಡಿದರೆ ನಿಮ್ಮ ಹೃದಯ ಮಿಡಿಯುತ್ತದೆ. ಇದು ಇಡೀ ರಾಜ್ಯಕ್ಕೆ ಕೊಟ್ಟಿರುವ ಮಾತು, ಇಡೀ ದೇಶಕ್ಕೆ ಕೊಟ್ಟಿರುವ ಮಾತು. ಈ ಮಾತನ್ನು ಸಾರ್ವಜನಿಕರಿಗೆ ಕೊಟ್ಟ ಮೇಲೆ ಅದನ್ನು ಉಳಿಸಿಕೊಳ್ಳಬೇಕು. ಈ ಮಾತನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ಭಾವನೆ ಮಾಡುತ್ತೇನೆ. ಈ ದೃಷ್ಟಿಯಿಂದ ನಾನು ಕೇಳುತ್ತೇನೆ, ರಾಜ್ಯದಲ್ಲಿರುವ ಜನತೆಗೆ ವಸತಿಯನ್ನು ಶೀಘ್ರವಾಗಿ ಒದಗಿಸುವುದಕ್ಕೋಸ್ಕರ, ಸ್ವಂತ ಮನೆಗಳನ್ನು ಮಾಡಿಕೊಡುವುದಕ್ಕೋಸ್ಕರ ಸ್ಪಷ್ಟವಾದ ಯೋಜನೆಯನ್ನು ಹಾಕಬೇಕು ಮತ್ತು ಇದಕ್ಕೆ ಎಷ್ಟೇ ಹಣ ಖರ್ಚಾಗಲಿ ಅದರಲ್ಲಿ ಎಷ್ಟು ರಾಜ್ಯ ಸರ್ಕಾರ ಕೊಡುತ್ತದೆ ಮತ್ತು ಕೇಂದ್ರ ಸರ್ಕಾರದಿಂದ ಎಷ್ಟು ಪಡೆಯುವುದಕ್ಕೆ ಸಾಧ್ಯ ಅಥವಾ ಬೇರೆ ಸಂಘ ಸಂಸ್ಥೆಗಳಿಂದ ಕೂಡಿಸುವುದಕ್ಕೆ ಸಾಧ್ಯ ಎನ್ನುವ ಮಾತನ್ನು ತಿಳಿಸಬೇಕೆಂದು ಹೇಳುತ್ತೇನೆ.

ಬಸ್ಸುಗಳ ವಿಷಯದಲ್ಲಿ ಒಂದು ಮಾತನ್ನು ಹೇಳುವುದು ಮರೆತಿದ್ದೆ. ಕೆ. ಎಸ್. ಆರ್. ಟಿ. ಸಿ. ಯಲ್ಲಿ ಅಡ್ವರ್ಟೈಸ್‌ಮೆಂಟಿಗಾಗಿ ಟೆಂಡರನ್ನು ಕರೆದಿದ್ದಾರೆ. ಕೆಲವರು ಕೊಟೇಷನ್‌ಗಳನ್ನು ಕೊಟ್ಟಿ

(ಶ್ರೀ ಎಸ್. ಬಂಗಾರಪ್ಪ)

ದ್ದಾರೆ. ಅದರಲ್ಲಿ ಕೆನರಾ ಅಡ್ವರ್ಟೈಸಿಂಗ್ ಕಂಪನಿಯವರು 29,50,000 ರೂಪಾಯಿಗಳಿಗೆ ಟೆಂಡರ್ ಹಾಕಿದ್ದಾರೆ. ಇನ್ನೊಬ್ಬರು ಕ್ಲಾಸಿಕ್ ಅಡ್ವರ್ಟೈಸಿಂಗ್ ಕಂಪನಿಯವರು 25,13,700 ರೂಪಾಯಿಗಳಿಗೆ ಟೆಂಡರ್ ಹಾಕಿದ್ದಾರೆ. ಮತ್ತೊಬ್ಬರು ಮೈಸೂರು ಕಮರ್ಷಿಯಲ್ ಕಾರ್ಪೋರೇಷನ್ ನವರು 25,10,421 ರೂಪಾಯಿಗಳ ಟೆಂಡರ್ ಹಾಕಿದ್ದಾರೆ. ಕಡಿಮೆಯಾಗಿ ಕೊಟೇಷನ್ ಕೊಟ್ಟಿರುವವರು 25,10,421 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಇಲ್ಲಿ 9,50,000 ರೂಪಾಯಿಗಳಿಗೆ ಕೊಟೇಷನ್ ಕೊಟ್ಟಿರುವವರನ್ನು ಬಿಟ್ಟು 25, 3700 ರೂಪಾಯಿಗಳಿಗೆ ಕೊಟೇಶನ್ ಕೊಟ್ಟಿರುವುದನ್ನು ಒಪ್ಪಿಕೊಂಡಿದ್ದಾರೆ. ಇವರು ಯಾರೋ ಕುಂದಾಪುರದವರಂತೆ ಅವರು ಸಾಕಷ್ಟು ಪ್ರಭಾವವನ್ನು ಸರ್ಕಾರದ ಮೇಲೆ ಬೀರಿ ರಾಜ್ಯ ಸಕಾರದಿಂದ ಪಡೆದಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಇದು ಕಾರ್ಪೋರೇಷನ್ನಿಗೆ ಸಂಬಂಧಪಟ್ಟ ವಿಷಯ. ಸರ್ಕಾರದ ಮುಂದೆ ಟೆಂಡರುಗಳು ಬರುವುದೂ ಇಲ್ಲ, ಅದಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡುವುದಕ್ಕೂ ಬರುವುದಿಲ್ಲ. ಆದ್ದರಿಂದ ಸರ್ಕಾರದ ಮುಂದೆ ಬಂದಿದೆ, ಸರ್ಕಾರದವರು ಒಪ್ಪಿಕೊಂಡಿದ್ದಾರೆ ಎಂದು ಹೇಳುವುದು ಸರಿಯಾದ ಮಾತಲ್ಲ. ಸರ್ಕಾರದ ಮುಂದೆ ಅದು ಬರುವುದಿಲ್ಲ. ಕಾರ್ಪೊರೇಷನ್ ಸ್ವಾಯತ್ತ ಸಂಸ್ಥೆ. ಅದೇ ತೀರ್ಮಾನ ಮಾಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕಾರ್ಪೊರೇಷನ್ ಸ್ವಾಯತ್ತ ಸಂಸ್ಥೆ ಎಂದು ಹೇಳಿದರೆ ಅದು ಮಾಡುವ ಕೆಲಸವನ್ನು ಯಾರೂ ಕೇಳುವ ಹಾಗೆ ಇಲ್ಲ ಯಾರೂ ಹೇಳುವ ಹಾಗೆ ಇಲ್ಲ ಮನಸ್ವೇಚ್ಛೆ ಮಾಡಬಹುದು ಎಂದು ಅರ್ಥವೇ ?

ಶ್ರೀ ಕೆ. ಎಚ್. ರಂಗನಾಥ್.—ಆ ಮಾತು ಬೇರೆ.

ಶ್ರೀ ಎಸ್. ಬಂಗಾರಪ್ಪ.—ಈ ಕಾರ್ಪೊರೇಷನ್ ಮೇಲೆ ಸರ್ಕಾರಕ್ಕೆ ಹತೋಟಿ ಇಲ್ಲವೇ ? ಕಾರ್ಪೊರೇಷನ್ ಈ ರೀತಿ ನಾಲ್ಕು ಲಕ್ಷ ಚಿಲ್ಲರೆಯಷ್ಟು ವ್ಯತ್ಯಾಸ ಬರುವ ವ್ಯವಹಾರವನ್ನು ಮಾಡಿದ್ದಾರೆ ಅದಕ್ಕೆ ಜವಾಬ್ದಾರರು ಯಾರು ? ಕಾನೂನು ಪ್ರಕಾರ ಕಾರ್ಪೊರೇಷನ್ ರಚನೆಯಾಗಿದೆ, ಅದರ ಜವಾಬ್ದಾರಿ ಎನ್ನುವ ಮಾತನ್ನು ಹೇಳಿ ಸರ್ಕಾರ ನುಣುಚಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರ ನುಣುಚಿಕೊಳ್ಳುತ್ತಿದೆ ಎಂದು ನಾನು ಹೇಳಲಿಲ್ಲ. ಮಾನ್ಯ ಸದಸ್ಯರು ಸರ್ಕಾರ ಮಾರಿದೆ ಎಂದು ಆಪಾದನೆ ಮಾಡಿದರು. ಆ ರೀತಿ ಆಗಿಲ್ಲ, ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದೆ. ಸರ್ಕಾರ ನುಣುಚಿಕೊಳ್ಳುವ ಮಾತೇ ಇಲ್ಲ. ಸರ್ಕಾರದ ಗಮನಕ್ಕೆ ತಂದರೆ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತನ್ನೂ ಹೇಳಲಿಲ್ಲ.

3-30 P. M.

ಶ್ರೀ ಎಸ್. ಬಂಗಾರಪ್ಪ.—ಈ ಕಾರ್ಪೊರೇಷನ್ ಒಂದು ಅಟಾನಮಸ್ ಬಾಡಿ ಎಂದು ಇದರ ಮೇಲೆ ಸರಕಾರ ಯಾವ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದರೆ ಇಂತಹ ಕಾರ್ಪೊರೇಷನ್‌ಗಳಲ್ಲ ಅನ್ಯಾಯಗಳಾಗುತ್ತಿದ್ದಾರೆ ಅದನ್ನು ಸರಿಪಡಿಸುವುವವರು ಯಾರು ? ಇದರ ಬಗ್ಗೆ ಸರಕಾರ ಸೂಕ್ತವಾದ ಒಂದು ಕಾರ್ಯಕ್ರಮ ತೆಗೆದುಕೊಂಡು ಇಲ್ಲಿ ಆಗುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟಬೇಕು, ಕೊನೆಯದಾಗಿ ಒಂದು ಮಾತನ್ನು ಸಾರಿಗೆ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ನಮ್ಮ ಕೆ ಎಸ್ ಆರ್ ಟಿ ಸಿ ಯವರು ಓಡಿಸುವ ಬಸ್ಸುಗಳಲ್ಲಿ ನಾಮ ಫಲಕಗಳನ್ನು ಸರಿಯಾಗಿ ಜನರಿಗೆ ತಿಳಿಯುವಂತೆ ಹಾಕುತ್ತಿಲ್ಲ. ಇಂದು ಅನಕ್ಷರಸ್ಥರ ಸಂಖ್ಯೆಯೇ ಹಳ್ಳಿಕಡೆ ಹೆಚ್ಚಾಗಿದೆ. ನಮ್ಮ ಕರ್ಣಾಟಕ ರಾಜ್ಯದಲ್ಲಿರುವ ಎಲ್ಲ ಬಸ್ಸುಗಳಲ್ಲಿರುವ ನಾಮಫಲಕಗಳನ್ನು ಕನ್ನಡದಲ್ಲಿ ಇರುವಂತೆ ಏರ್ಪಾಡು ಮಾಡಬೇಕು ನಮ್ಮ ರಾಜ್ಯದಿಂದ ಹೊರ ರಾಜ್ಯಗಳಿಗೆ ಹೋಗುವಾಗ ಅದರಲ್ಲಿರುವ ನಾಮಫಲಕಗಳು ಕನ್ನಡದಲ್ಲೂ ಇರಬೇಕು ಮತ್ತು ಇದರ ಪಕ್ಕದಲ್ಲಿ ಆ ರಾಜ್ಯದ ಭಾಷೆಯಲ್ಲಿ ಬೇಕಾದರೂ ಹಾಕಬಹುದು ಇದರ ಬಗ್ಗೆ ಕೆ ಎಸ್ ಆರ್ ಟಿ ಸಿ ಯವರಿಗೆ ಸರಿಯಾದ ಸೂಚನೆ ಕೊಡಬೇಕೆಂದು ಹೇಳಿ ಇಲ್ಲಿ ತಂದಿರುವ ಬೇಡಿಕೆಗಳನ್ನು ವಿರೋಧ ಮಾಡುತ್ತೇನೆ. ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸತ್ಯನಾರಾಯಣಸಿಂಗ್ (ಹೊಸಪೇಟೆ).—ಮಾನ್ಯ ಅಧ್ಯಕ್ಷರೇ, ಸಾರಿಗೆ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತಾ ಈ ಸಂದರ್ಭದಲ್ಲಿ ಕೆಲವಾರು ವಿಚಾರಗಳನ್ನು ಅವರ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಸಾರಿಗೆ ಇಲಾಖೆಯಿಂದ ಸುಮಾರು ಹದಿನೈದೂವರೆ ಕೋಟಿ ರೂಪಾಯಿಗಳಷ್ಟು ಆದಾಯವನ್ನು ಪಡೆಯುತ್ತವೆ ಮತ್ತು ಅತಿ ಕಡಿಮೆ ಖರ್ಚಿನಲ್ಲಿ ಇದರ ಕೆಲಸಗಳು ನಡೆಯುತ್ತಿವೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಸಾರಿಗೆ ಇಲಾಖೆಯೂ ಸರಕಾರದ ಒಂದು ಭಾಗ, ಇಂತಹ ಸಾರಿಗೆ ಉದ್ಯಮದ ಬಗ್ಗೆ ಒಂದು ಅಕ್ಷರ ಕೂಡ ಅವರ ವರದಿಯಲ್ಲಿ ಕೊಡಲಿಲ್ಲವಲ್ಲಾ ಎಂದು ಬಹಳ ವಿಷಾದವಾಗುತ್ತಿದೆ. ಸಾರಿಗೆ ಉದ್ಯಮದ ಬಗ್ಗೆ ಈಗಾಗಲೇ ಕೆಲವರು ಟೀಕೆಗಳನ್ನು ಮಾಡಿರುತ್ತಾರೆ. ನಾನು ಅವುಗಳೊಂದನ್ನೂ ವಿಚಾರ ಮಾಡಲು ಹೋಗದೆ ಸರಕಾರಕ್ಕೆ ಕೆಲವಾರು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಇಂದು ಸಾರಿಗೆದಾರರಿಗೆ ಅನೇಕ ಕಷ್ಟಗಳು ಬಂದಿವೆ. ಟೈರುಗಳು ಸಿಗುತ್ತಿಲ್ಲ. ಮೋಟಾರು ವಾಹನಗಳ ಬಿಡಿ ಭಾಗಗಳು ಸಿಗುತ್ತಿಲ್ಲ. ಇದರಿಂದಾಗಿ ಮೋಟಾರು ಮಾಲೀಕರುಗಳು ಬಹಳ ಕಷ್ಟಪಡುತ್ತಿದ್ದಾರೆ. ಸರಕು ಸಾಗಾಣಿಕೆಗೆ ಮುಖ್ಯವಾಗಿ ಟೈರುಗಳು ಬೇಕು. ಇವನ್ನು ಸರಕಾರ ಎಲ್ಲರಿಗೂ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಮೋಟಾರು ವಾಹನಗಳಿಗೆ ಬೇಕಾಗುವ ಬಿಡಿ ಭಾಗಗಳು ಸಿಗುತ್ತಿಲ್ಲ. ಇವಕ್ಕಾಗಿ ಕೇಂದ್ರದವರೊಡನೆ ಒತ್ತಾಯ ಮಾಡಿ ಸಾಕಷ್ಟು ಟೈರುಗಳು ಮತ್ತು ಬಿಡಿ ಭಾಗಗಳು ಎಲ್ಲ ಭಾಗದಲ್ಲೂ ಸಿಗುವಂತೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಲಾರಿ ಇತ್ಯಾದಿ ವಾಹನಗಳ ಓಡಾಟಕ್ಕೆ ಬಹಳ ತೊಂದರೆಗಳಾಗುತ್ತವೆ. ನಮ್ಮ ಸರಕಾರಕ್ಕೆ ತಿಳಿದಿರುವಂತೆ ನಮ್ಮ ಭಾಗದಲ್ಲಿ ಕಬ್ಬಿಣದ ಅದಿರು ರವಾನೆ ಮಾಡಬೇಕಾದಂತಹ ಸ್ಥಳ ಇಲ್ಲ. ಸಾಗಾಣಿಕೆ ಮಾಡಬೇಕಾದರ ಮೋಟಾರು ವಾಹನಗಳಿಗೆ ಬೇಕಾದ ಟೈರುಗಳೇ ಸಿಗುತ್ತಿಲ್ಲ. ಕಬ್ಬಿಣದ ಅದಿರು ರವಾನೆಯಿಂದ ನಮ್ಮ ದೇಶಕ್ಕೆ ವಿದೇಶೀ ವಿನಿಮಯ ಸಂಪಾದನೆ ಮಾಡುವಂತಹ ಸ್ಥಳವಾಗಿದೆ. ಇದರಿಂದ ಇಲ್ಲಿ ಅದಿರು ಸಾಗಾಣಿಕೆಗೆ ಅನುಕೂಲವಾಗುವಂತೆ ವಾಹನಗಳಿಗೆ ಅಗತ್ಯವಾದ ಟೈರುಗಳು ಹಾಗೂ ಬಿಡಿ ಭಾಗಗಳು ದೊರೆಯಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ನಾನು ಸಾರಿಗೆ ಮಂತ್ರಿಗಳಲ್ಲಿ ಅನೇಕ ಸಲಹೆಗಳನ್ನು ಕೊಡಬೇಕಾಗಿದೆ. ನನಗಿರುವ ಕಾಲಾವಕಾಶದಲ್ಲಿ ಎಲ್ಲವನ್ನೂ ತಿಳಿಸಲು ಸಾಧ್ಯವಾಗುವುದಿಲ್ಲ. ಮುಂದೆ ಅವಕಾಶ ಕೊಟ್ಟರೆ ಇವುಗಳನ್ನೆಲ್ಲಾ ಮಾನವರಿಕೆಯಾಗುವಂತೆ ತಿಳಿಸುತ್ತೇನೆ. ಸದ್ಯದಲ್ಲಿ ಕಾಂಟ್ರಾಕ್ಟು ಕ್ಯಾರೇಜು ಬಗ್ಗೆ ಮೂರು ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೇದಾಗಿ, ಈಗಾಗಲೇ ನನ್ನ ಅನೇಕ ಮಿತ್ರರೂ ಹೇಳಿದ್ದಾರೆ ಮತ್ತು ಈ ಸದನದಲ್ಲಿ ಅನೇಕ ವಿಚಾರಗಳು ಇದರ ಬಗ್ಗೆ ಬಂದಿರುವುದನ್ನೂ ಕೇಳಿದ್ದೇವೆ. ಪೋಲೀಸು ಪರ್ಮಿಟ್ಟುಗಳ ಮೇಲೆ ಕಾಂಟ್ರಾಕ್ಟು ಕ್ಯಾರೇಜು ಬಸ್ಸುಗಳನ್ನು ಓಡಿಸುವ ವ್ಯವಸ್ಥೆಯನ್ನು ನಿಲ್ಲಿಸಬೇಕು ಮತ್ತು ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕು. ಎರಡನೇದಾಗಿ, ಕಾಂಟ್ರಾಕ್ಟು ಕ್ಯಾರೇಜುಗಳು ಸ್ಟೇಜು ಕ್ಯಾರೇಜುಗಳಾಗಿ ಕೆಲಸ ಮಾಡುತ್ತಿವೆ. ಒಂದು ಪಟ್ಟಣದಿಂದ ಇನ್ನೊಂದು ಜಾಗಕ್ಕೆ ಹೋಗುವಾಗ ದಾರಿಯುದ್ದಕ್ಕೂ ಪ್ರತಿಯೊಂದು ಸ್ಥಳದಲ್ಲೂ ಬಸ್ಸುಗಳನ್ನು ನಿಲ್ಲಿಸಿ ಪ್ರಯಾಣಿಕರನ್ನು ತುಂಬಿಕೊಂಡು ಹೋಗುತ್ತಿರುತ್ತಾರೆ. ಇವರನ್ನು ಚೆಕ್ ಮಾಡಲು ಸರಕಾರದವರೇನೋ ಇಲ್ಲಿ ನಾಲ್ಕು ಸ್ಕ್ವಾಡುಗಳನ್ನು ಮಾಡಿದ್ದಾರೆ. ಇದರ ಮೂಲಕ ಚೆಕ್ಕು ಮಾಡುತ್ತಾರೆಂದು ಹೇಳಬಹುದು. ಬಸ್ಸುಗಳು ಓಡಾಡುವ ಮೇನ್ ರೋಡುಗಳಲ್ಲಿ ಹಾಗೂ ಟ್ರಂಕು ರೋಡುಗಳಲ್ಲಿ ಚೆಕ್ ಮಾಡಲು ಇದಕ್ಕೆ ಪ್ರತ್ಯೇಕವಾದ ಒಂದು ಸ್ಕ್ವಾಡನ್ನು ನೇಮಕ ಮಾಡಿ ಇದರ ಮೂಲಕ ಸ್ಟೇಜು ಕ್ಯಾರೇಜು ಬಸ್ಸುಗಳನ್ನು ಹಾಗೂ ಕಾಂಟ್ರಾಕ್ಟು ಕ್ಯಾರೇಜುಗಳನ್ನು ತನಿಖೆ ಮಾಡಲು ಒಂದೊಂದು ಪಟ್ಟಣದಲ್ಲೂ ಇಟ್ಟರೆ ಆಗ ಇವನ್ನು ತಡೆಗಟ್ಟಲು ಸಹಾಯವಾಗಬಹುದು. ಇದರ ಬಗ್ಗೆ ತಕ್ಕ ಕ್ರಮ ಕೈಗೊಳ್ಳಲು ಒಂದು ಪ್ರತ್ಯೇಕ ಸ್ಕ್ವಾಡ್‌ನ್ನು ಮಾಡಿ ಇವರು ಒಂದು ದಿನ ತುಮಕೂರಿನಲ್ಲಿ, ಇನ್ನೊಂದು ದಿನ ದಾವಣಗೆರೆ ಇಲ್ಲವೇ ಹಿರಿಯೂರುಗಳಲ್ಲಿದ್ದು ಚೆಕ್ ಮಾಡಬಹುದು. ಇದರಿಂದ ಪ್ರಯಾಣಿಕರಿಗೂ ಅನುಕೂಲವಾಗುತ್ತದೆ. ಈ ಕಾಂಟ್ರಾಕ್ಟು ಕ್ಯಾರೇಜುಗಳನ್ನು ತಡೆಗಟ್ಟಲು ಇನ್ನೊಂದು ಮುಖ್ಯವಾದ ಸಲಹೆ ಎಂದರೆ ಇಂತಹ ಕ್ಯಾರೇಜುಗಳ ಈಗ ಬೆಂಗಳೂರು ಹಾಗೂ ಮೈಸೂರು ಇಂತಹ ಕೇಂದ್ರಗಳಿಂದಲೇ ಆರಂಭವಾಗುತ್ತವೆ. ಆದ್ದರಿಂದ to the complete exclusicn of private operrators under Chapter IV (A) of the Moter Vehicles Act, ಇವನ್ನು ನ್ಯಾಷನಲೈಸು ಮಾಡಿದರೆ ಆಗ ಇವರನ್ನು ಚೆಕ್ ಮಾಡಬಹುದು. ಇಲ್ಲಿ ಕೆಲವರು ಸುಮಾರು 50 ವೆಹಿಕಲ್‌ಗಳನ್ನು ಇಟ್ಟುಕೊಂಡು ಖಾಸಗಿಯಾಗಿ ಓಡಿಸುತ್ತಿರುವುದನ್ನು ತಡೆಗಟ್ಟಲು ಈಗಿರುವ ಕಾನೂನಿನಿಂದ ಸಾಧ್ಯವಾಗುತ್ತದೆ. ಇದೂ ಅಲ್ಲದೆ ನಮ್ಮ ಬೆಂಗಳೂರು

(ಶ್ರೀ ಬಿ. ಸತ್ಯನಾರಾಯಣಸಿಂಗ್)

ಹಾಗೂ ಇನ್ನು ಕೆಲವು ಸ್ಥಳಗಳಲ್ಲಿ ಸ್ಟಾರ್ಟಿಂಗ್ ಪಾಯಿಂಟು ಇರುತ್ತವೆ. ಕಾನೂನು ಪ್ರಕಾರ ಇಲ್ಲಿ ಸರಿಯಾಗಿ ತನಿಖೆ ಮಾಡಿದರೆ ಇಲ್ಲಿರುವ ಅವ್ಯವಹಾರಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ. ಇದನ್ನು ನಮ್ಮ ಸಾರಿಗೆ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಗಳಿಗೆ ಇಲ್ಲಿ ಒಂದು ಸಲಹೆ ಕೊಡಬೇಕಾಗಿದೆ. ತಮಿಳುನಾಡಿನಲ್ಲಿ ಬಸ್ಸುಗಳನ್ನು ನ್ಯಾಷನಲೈಸು ಮಾಡಿದಾಗ ಅಲ್ಲಿನ ಹೈಕೋರ್ಟಿನವರು ಅದಕ್ಕೆ ಒಪ್ಪದೆ ತಳ್ಳಿಹಾಕಿದರು ಎಂದು ಹೇಳಿದರು. ಆದರೆ ಅಲ್ಲಿ ನ್ಯಾಷನಲೈಸು ಮಾಡಿದ ರೂಟುಗಳಿಗೆ ತಡೆ ಹಾಕಲಿಲ್ಲ. ನ್ಯಾಷನಲೈಸು ಮಾಡಿದ ಬಸ್ಸುಗಳು ಹಾಗೂ ಇವರಿಗಿದ್ದ ಎಲ್ಲ ವರ್ಕ್‌ಷಾಪುಗಳನ್ನು ಆಕ್ವೈರು ಮಾಡಬೇಕೆಂದು ಹೇಳಿದ್ದರಿಂದ ಹೈಕೋರ್ಟು ಇದಕ್ಕೆ ಒಪ್ಪದೆ ತಳ್ಳಿಹಾಕಿತು. ನ್ಯಾಷನಲೈಸೇಷನ್‌ಗೆ ಹೈಕೋರ್ಟು ವಿರೋಧವಾಗಿರಲಿಲ್ಲ. ಖಾಸಗಿ ಬಸ್ಸು ಮಾಲೀಕರುಗಳ ಪ್ರೈವೇಟು ಪ್ರಾಪರ್ಟಿಯನ್ನು ವಶಮಾಡಿಕೊಳ್ಳಬೇಕೆಂದು ಹೇಳಿದ್ದಕ್ಕೆ ಹೈಕೋರ್ಟು ಒಪ್ಪಲಿಲ್ಲ. ಇದಕ್ಕಾಗಿ ನಾನಾಗಲೇ ಹೇಳಿದಂತೆ ನಮ್ಮ ಮೋಟಾರು ವಾಹನಗಳ ಕಾನೂನಿನ ಚಾಪ್ಟರು 4 (ಎ) ಪ್ರಕಾರ ಇದನ್ನು ತಡೆಗಟ್ಟಬಹುದು. ಇದನ್ನು ಸರಕಾರ ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈಗಾಗಲೇ ಕೆ.ಎಸ್.ಆರ್.ಟಿ.ಸಿ ಕಾರ್ಪೊರೇಷನ್ ಒಂದು ಆಟಾನಮಸ್ ಬಾಡಿ ಎಂದು ಹೇಳಿ ಇದರಲ್ಲಿ ಸರಕಾರ ಕೈ ಹಾಕುವ ಹಾಗಿಲ್ಲ ಎಂದರು. ನಾನು ಇದರ ಬಗ್ಗೆ ಹೇಳಬೇಕಾದರೆ ನಮ್ಮ ಸಾರಿಗೆ ಮಂತ್ರಿಗಳೇ ಈ ಕಾರ್ಪೊರೇಷನ್‌ನ ಅಧ್ಯಕ್ಷರಾಗಿರಬೇಕು. ಈಗ ಬೇರೆಯವರು ಅಧ್ಯಕ್ಷರಾಗಿರುವುದರಿಂದ ನಮ್ಮ ಮಂತ್ರಿಗಳಿಗೆ ಅಲ್ಲಿ ಯಾವ ಸ್ಥಾನಮಾನವೂ ಇಲ್ಲ. ಇದರಿಂದ ಸರಕಾರ ಯಾವ ಯೋಜನೆಗಳನ್ನೂ ಸರಿಯಾಗಿ ಕಾರ್ಯಗತ ಮಾಡಲಾಗುವುದಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಇನ್ನು ಮುಂದಾದರೂ ನಮ್ಮ ಸಾರಿಗೆ ಮಂತ್ರಿಗಳೇ ಈ ಕಾರ್ಪೊರೇಷನ್ನಿನ ಅಧ್ಯಕ್ಷರಾಗಿರುವಂತೆ ಮಾಡಬೇಕು. ಸಾರಿಗೆ ಇಲಾಖೆಯ ಮಂತ್ರಿಗಳೇ ಇದರಲ್ಲಿ ಚೇರ್ಮನ್ನರಾಗಿದ್ದರೆ ಇಲ್ಲಿನ ಯೋಜನೆಗಳನ್ನು ಕಾರ್ಯಗತಮಾಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಈಗಿರುವಂತಹ ಒಂದು ಇಕ್ಕಟ್ಟಿನ ಪರಿಸ್ಥಿತಿಗೆ ಸಿಗಬೇಕಾಗುತ್ತದೆ. ಇದರ ಬಗ್ಗೆ ಸರಕಾರ ಗಮನಕೊಡಬೇಕೆಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ. ನಲ್ಲಿ ಕೆಲಸಮಾಡಲು ಇರುವ ವರ್ಕಿಂಗು ಪ್ರಾಕ್ಟೀಸುಗಳು ಹಾಗೂ ಇದರ ಪ್ರೊಸೀಜರುಗಳೆಲ್ಲಾ ಬಹಳ ಹಳೇ ಕಾಲದಿಂದ ಬಂದಿರುವಂತಹವುಗಳು. ಇದನ್ನು ಸುಧಾರಿಸಲು ಒಂದು ಎಕ್ಸ್‌ಪರ್ಟ್ ಕಮಿಟಿ ನೇಮಕಮಾಡಿ ಈಗಿರುವ ಪ್ರೊಸೀಜರುಗಳನ್ನು ಸರಿಯಾಗಿ ಪರಿಶೀಲಿಸಿ ಸೂಕ್ತವಾದ ಮಾರ್ಪಾಡುಗಳನ್ನು ಮಾಡಿದರೆ ಇದರಿಂದ ಹೆಚ್ಚು ಅನುಕೂಲಗಳಾಗುತ್ತವೆ ಎಂದು ಸರಕಾರದ ಗಮನಕ್ಕೆ ಇಲ್ಲಿ ತರಲಿಚ್ಛಿಸುತ್ತೇನೆ.

ಮೂರನೇದು ಬಹಳ ಮುಖ್ಯವಾದ ಸಲಹೆ ಎಂದರೆ ನಮ್ಮ ಪಕ್ಕದ ತಮಿಳುನಾಡು ರಾಜ್ಯದಲ್ಲಿ ಸಣ್ಣ ಸಣ್ಣ ಪ್ರೈವೇಟು ಕಾರ್ಪೊರೇಷನ್‌ಗಳು ಎಂದು ಮಾಡಿಕೊಂಡು ಚೆನ್ನಾಗಿ ಕೆಲಸ ಮಾಡುತ್ತಿವೆ. ಇದರಂತೆ ನಮ್ಮಲ್ಲೂ ಸಣ್ಣ ಕಾರ್ಪೊರೇಷನ್‌ಗಳನ್ನು ಮಾಡಲು ಸಾಧ್ಯವಿದೆ. ಈಗಿರುವಂತೆ ದೊಡ್ಡದಾಗಿರು ಕಾರ್ಪೊರೇಷನ್ ಮಾಡಿದರೆ ಇದರಿಂದ ಕೆಲಸಗಳು ಕುಂಠಿತವಾಗುತ್ತವೆ. ಬೇಗನೆ ಕೆಲಸಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿ ತಮಿಳುನಾಡಿನಲ್ಲ ಚಿಕ್ಕ ಚಿಕ್ಕ ಕಾರ್ಪೊರೇಷನ್‌ಗಳೆಂದು ಮಾಡಿಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ಪರಿಶೀಲಿಸಬಹುದು. ಖಾಸಗಿ ಬಸ್ಸುಗಳ ಮಾಲೀಕರೇ ಸಣ್ಣ ಕಾರ್ಪೊರೇಷನ್‌ಗಳೆಂದು ಮಾಡಿಕೊಂಡು ನೂರಾರು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಉದಾಹರಣೆಯಾಗಿ ಹೇಳುವುದಾದರೆ ಪಾಂಡ್ಯನ್ ರೋಡ್‌ವೇಸ್ ಮಧುರೈ ಎನ್ನುವವರು ರಾಷ್ಟ್ರೀಕರಣ ಮಾಡಿರುವ ರೂಟುಗಳಲ್ಲಿ ಸಣ್ಣ ಕಾರ್ಪೊರೇಷನ್ ಮಾಡಿಕೊಂಡು ಇದು ದೇಶದಾದ್ಯಂತ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಇವರು ಸುಮಾರು 134 ರೂಟುಗಳಲ್ಲಿ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಚಿಕ್ಕ ಕಾರ್ಪೊರೇಷನ್‌ಗಳನ್ನು ಮಾಡಿದರೆ ಉತ್ತಮವಾಗಿ ಕೆಲಸಮಾಡಲು ಸಹಾಯವಾಗುತ್ತದೆ. ಸರಕಾರ 31-3-1973ರಲ್ಲಿ ಇದಕ್ಕೆ ಸ್ವಲ್ಪ ಬಂಡವಾಳವನ್ನೂ ಕೊಟ್ಟಿದೆ. ಸುಮಾರು 10 6 ಲಕ್ಷ ರೂಪಾಯಿ ಕೊಟ್ಟು ಒಂದು ವರ್ಷದಲ್ಲಿ ಇದರಿಂದ ಸುಮಾರು 11.78 ಲಕ್ಷ ರೂಪಾಯಿನ ಲಾಭ ಸಂಪಾದಿಸುತ್ತಿದೆ.

ಈ ಒಂದು ಕಾರ್ಪೊರೇಷನ್ ನಾಲ್ಕು ಜಿಲ್ಲೆಗಳಲ್ಲಿ ಸಾರಿಗೆ ವ್ಯವಸ್ಥೆಯನ್ನು ಮಾಡುತ್ತಿದೆ. ಚೆರಿಯನ್ ಟ್ರಾನ್ಸ್‌ಪೋರ್ಟ್, ಕೊಯಮತ್ತೂರು ಇದು ಸರ್ಕಾರಿ ಸಂಸ್ಥೆ. ಸರ್ಕಾರದ ಬಂಡವಾಳ 45 ಲಕ್ಷ ರೂಪಾಯಿ. ಒಂದೇ ವರ್ಷದಲ್ಲಿ ಸರ್ಕಾರ ಹಾಕಿದ ಬಂಡವಾಳವನ್ನು ಪೂರಾ

ಲಾಭದ ರೂಪದಲ್ಲಿ ತೆಗೆದಿದ್ದಾರೆ. ಚಿಕ್ಕ ಚಿಕ್ಕ ಕಾರ್ಪೊರೇಷನ್ ಮಾಡಿದಲ್ಲಿ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಸಾಧ್ಯವಾಗುತ್ತದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇದರ ಬಗ್ಗೆ ಸರ್ಕಾರದವರು ತೀವ್ರ ಆಲೋಚನೆ ಮಾಡಬೇಕು. ನಮ್ಮ ಕಾರ್ಪೊರೇಷನ್‌ನಲ್ಲಿ ನಾಲ್ಕು ಸಾವಿರ ವಾಹನಗಳು ಇದ್ದು, ಆಡಳಿತವನ್ನು ಸುವ್ಯವಸ್ಥೆಯಿಂದ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಒಂದು ವಿಚಾರವನ್ನು ಬಹಳ ತೀವ್ರವಾಗಿ ಆಲೋಚನೆಮಾಡಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ಉಚಿತವೆಂದು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವರ್ಕರ್ಸ್ ಪಾರ್ಟಿಸಿಪೇಷನ್ ಇನ್ ದಿ ಕ್ಯಾಪಿಟಲ್ ಅಂಡ್ ಮ್ಯಾನೇಜ್‌ಮೆಂಟ್ ಎಂಬ ಹೊಸ ತತ್ವ ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಜಾರಿಗೆ ತಂದಿದ್ದಾರೆ. ಕಾರ್ಮಿಕರು ಸಂಸ್ಥೆಯ ಶೇರುದಾರರಾಗಿರುವುದರಿಂದ ಲಾಭದಲ್ಲಿ ಹಕ್ಕು ಪಡೆಯುತ್ತಾರೆ. ಆದ್ದರಿಂದ ಹೆಚ್ಚಿನ ಶ್ರದ್ಧೆಯಿಂದ ಕೆಲಸಮಾಡುವ ತತ್ವ ಈ ಯೋಜನೆಯಲ್ಲಿ ಅಡಕವಾಗಿದೆ. ಈ ಯೋಜನೆಯನ್ನು ರಾಜ್ಯ ಸರ್ಕಾರದವರು ನಮ್ಮ ಸಾರಿಗೆ ಸಂಸ್ಥೆಯಲ್ಲಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ನಮ್ಮ ಹತ್ತಿರ 1969–70 ಹಳೆ ಎಂ.ಎಸ್.ಆರ್.ಟಿ.ಸಿ. ಆಡಿಟ್ ವರದಿ ಮತ್ತು 1970-71ರ ಆಡಿಟ್ ರಿಪೋರ್ಟ್ ಬಿಟ್ಟರೆ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಇನ್ನೂ ಯಾವ ರಿಪೋರ್ಟ್ ಇಲ್ಲ. ಈಗ ನಮ್ಮ ಹತ್ತಿರ ಇದ್ದ ಅಂಕೆ ಆಧಾರದಮೇಲೆ ಹೇಳಬೇಕಾಗುತ್ತದೆ. ಮೂರು ವರ್ಷವಾದರೂ ತಮ್ಮ ಆಡಿಟ್ ರಿಪೋರ್ಟ್ ಸದನಕ್ಕೆ ಕೊಡದೆ ಇರುವುದು ವಿಷಾದದ ಸಂಗತಿಯಾಗಿದೆ. ಈ ಒಂದು ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯನ್ನು ವಿಮರ್ಶೆ ಮಾಡುವಾಗ ಟ್ರಾಫಿಕ್ ವಿಭಾಗ, ಮೇನ್‌ಟನೆನ್ಸ್ ವಿಭಾಗ ಮತ್ತು ಅಡ್ಮಿನಿಸ್ಟ್ರೇಷನ್ ವಿಭಾಗವೆಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಟ್ರಾಫಿಕ್ ವಿಭಾಗವನ್ನು ಹೇಳುವುದಾದರೆ ಪ್ರತಿಕಿಲೋಮೀಟರ್ ಅರ್ನಿಂಗ್ ಏನು ಇದೆ, ಅದು ಬಹಳ ಕಡಿಮೆ ಆಗಿದೆ. ಯಾರೂ ಇದರ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುತ್ತಾ ಇಲ್ಲ. ನಾನಾದರೂ ಹೇಳುತ್ತೇನೆ. ಡಿವಿಜನಲ್ ಲೆವಲ್‌ನಲ್ಲಿ ಡಿವಿಜನಲ್ ಟ್ರಾಫಿಕ್ ಜವಾಬ್ದಾರಿಯನ್ನು ನೋಡಿಕೊಂಡು ಹೋಗುವ ಅಧಿಕಾರಿಯಾರು ಇದ್ದಾರೆ, ಅವರಿಗೆ ಈ ಜವಾಬ್ದಾರಿಯನ್ನು ವಹಿಸಿ, ಪ್ರತಿವರ್ಷ ಟಾರ್‌ಜೆಟ್ ಹಾಕಿ ಅರ್ನಿಂಗ್ಸ್ ಹೆಚ್ಚಿಗೆ ಆಗುವಂತೆ ಮಾಡುವುದು ಆವಶ್ಯಕವೆಂದು ಸೂಚನೆ ಕೊಡುತ್ತೇನೆ. ಇದೇ ರೀತಿಯಾಗಿ ಪ್ರ ವರ್ಷ ಷೆಡ್ಯೂಲ್ಸ್ ಏನು ಹಾಕುತ್ತಾರೆ, ಒಂದು ಸಾರಿ ಹಾಕಿದ ಷೆಡ್ಯೂಲ್ ಹಾಗೆಯೇ ನಡೆದುಕೊಂಡು ಹೋಗುತ್ತದೆ. ಒಂದು ಕಡೆ ಬೇಡಿಕೆ ಹೆಚ್ಚು ಆಗುತ್ತದೆ ಇನ್ನೊಂದು ಕಡೆ ಬೇಡಿಕೆ ಕಡಿಮೆಯಾಗುತ್ತದೆ. ಪ್ರತಿವರ್ಷ ಷೆಡ್ಯೂಲ್ ಮಾರ್ಪಾಡು ಮಾಡಬೇಕಾದುದು ಅವಶ್ಯಕ. ಈ ಜವಾಬ್ದಾರಿಯನ್ನು ಡಿವಿಜನಲ್ ಟ್ರಾಫಿಕ್ ಆಫೀಸರ್ ಮೇಲೆ ಹೇರಿಸಬೇಕಾದುದು ಅಗತ್ಯವಿರುತ್ತದೆ. ಕೆ. ಎಸ್. ಆರ್. ಟಿ. ಸಿ. ಆದಾಯ ಏನು ಸೋರಿಹೋಗುತ್ತಿದೆ, ಆದನ್ನು ನಿಲ್ಲಿಸಲು ಎಲ್ಲಿ ಟ್ರಾಫಿಕ್ ಪಾಯಿಂಟ್‌ಗಳಲ್ಲೂ ವಿಂಡೋಬುಕ್ಕಿಂಗ್ಸ್ ಏರ್ಪಾಡು ಮಾಡಬೇಕು. ಆರೀತಿ ಕಂಡಕ್ಟರ್ ಕೈಯಲ್ಲಿ ಹಣ ಸಿಕ್ಕದಹಾಗೆ ಮಾಡಿದರೆ ಸೋರಿಹೋಗುವ ಹಣ ನಿಲ್ಲಿಸುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ವಿಂಡೋ ಬುಕ್ಕಿಂಗ್‌ಗೆ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಕಲಕ್ಷನ್ ಬೋನಸ್ ಸ್ಕೀಮ್ ಬಗ್ಗೆ ಈ ಸಭೆಯಲ್ಲಿ ಹೇಳಿದ್ದೇನೆ. ಕಲೆಕ್ಷನ್ ಮೇಲೆ ಕಂಡಕ್ಟರ್ ಮತ್ತು ಡ್ರೈವರ್‌ಗೆ ಬೋನಸ್ ಕೊಡುವುದನ್ನು ಜಾರಿಗೆ ತರುವುದು ಅವಶ್ಯಕ. ಇನ್ನೊಂದು ಹೊಸ ಸೂಚನೆ ಕಾಂಟ್ರಾಕ್ಟ್ ಕಲೆಕ್ಷನ್ ಸ್ಕೀಮ್ ಬಗ್ಗೆ ಕೊಡುತ್ತೇನೆ. ಪ್ರತಿಯೊಂದು ಷೆಡ್ಯೂಲ್ ಕಲಕ್ಷನಿನ್ನ ಅಂಕಿ ಸಂಖ್ಯೆಗಳು ಇವೆ. ಇಡೀ ವರ್ಷದ ಅಂಕಿಸಂಖ್ಯೆಯನ್ನು ತೆಗಿದುಕೊಂಡು ಸರಾಸರಿ ಷೆಡ್ಯೂಲ್ ಕಲಕ್ಷನ್ ಏನು ಆಗುತ್ತದೋ ಅದರ ಮೇಲೆ ಹತ್ತು ಪರ್ಸೆಂಟ್ ಜಾಸ್ತಿ ಮಾಡಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕಂಡಕ್ಟರ್ಸ್ ನಿರ್ದಿಷ್ಟವಾದ ಕಲಕ್ಷನ್ ಕೊಡತಕ್ಕದ್ದು. ಹೆಚ್ಚಿನ ಕಲಕ್ಷನ್ ಅವನಿಗೆ ಸೇರಿದ್ದು, ಕಮ್ಮಿ ಆದರೆ ಅದನ್ನು ಅವನು ತುಂಬಿ ಕೊಡಬೇಕು ಎನ್ನುವ ವ್ಯವಸ್ಥೆಯನ್ನು ಜಾರಿಗೆ ತಂದರೆ ತಮಗೆ ಆಗುವ ಅನೇಕ ತಲೆಶೂಲೆಗಳು ಕಮ್ಮಿಯಾಗುತ್ತದೆಯೆಂದು ತಿಳಿಯುತ್ತೇನೆ. ಚಕ್ಕಿಂಗ್ ಪದ್ಧತಿ ಏನು ಇದೆ ಅದು ಬಹಳ ಲೋಪದೋಷಗಳಿಂದ ಕೂಡಿದೆ. ಇದನ್ನು ಕೂಡಲೇ ರದ್ದು ಮಾಡುವುದು ಅವಶ್ಯಕ. ಚೆಕ್ಕಿಂಗ್ ಇನ್ಸ್‌ಪೆಕ್ಟರ್‌ಗಳನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕಮಾಡಬೇಕಾದುದು ಅಗತ್ಯವೆಂದು ನಾನು ತಿಳಿಸುತ್ತೇನೆ. ಅವರಿಗೆ ಒಂದು ವರ್ಷಕ್ಕಿಂತ ಹೆಚ್ಚಿಗೆ ಕಾಂಟ್ರಾಕ್ಟ್ ಕೊಡಕೂಡದು. ಆ ಒಂದು ವರ್ಷದ ಅವಧಿಯಲ್ಲಿ ಚೆನ್ನಾಗಿ ಕೆಲಸಮಾಡಿ ರಿಸಲ್ಟ್ ಚೆನ್ನಾಗಿ ತೋರಿಸಿದರೆ ಮಾತ್ರ ಮುಂದಿನ ವರ್ಷಕ್ಕೆ ಅವರ ಕೆಲಸದ ಅವಧಿಯನ್ನು ಬೆಳೆಸತಕ್ಕದ್ದು. ಇಲ್ಲದೆ ಹೋದರೆ ಅವರನ್ನು ತೆಗೆದುಹಾಕಬೇಕು. ನಮ್ಮ ಚೆಕ್ಕಿಂಗ್ ಪದ್ಧತಿಯಲ್ಲಿ ಚೆಕ್ಕಿಂಗ್ ಸ್ಕ್ವಾಡ್ ಇವೆ, ನಾಲ್ಕು ಮಂದಿ ಜೀಪ್ ಹಾಕಿಕೊಂಡು ಹೋಗುತ್ತಾರೆ. ಅವರ ಅವಶ್ಯಕತೆ ಕಾಣುವುದಿಲ್ಲ. ಇನ್‌ಡಿವಿಜ್ಯೂವೆಲ್ ಚೆಕ್ಕಿಂಗ್ ಇನ್‌ಸ್ಪೆಕ್ಟರನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕಮಾಡಿ ಬಸುಗಳು ಓಡಾಡುವ ಜಾಗದಲ್ಲೇ ಚೆಕ್‌ಮಾಡುವ ಪದ್ಧತಿಯನ್ನು ಮಾಡಿದರೆ ಅನು

(ಶ್ರೀ ಬಿ. ಸತ್ಯನಾರಾಯಣ ಸಿಂಗ್)

ಕೂಲವಾಗುತ್ತದೆ. ಇವತ್ತಿನ ದಿವಸ ಪ್ರತಿಯೊಂದು ಸ್ಟೇಷನ್‌ನಲ್ಲಿ ತಮ್ಮ ಟ್ರಾಫಿಕ್ ಕಂಟ್ರೋಲರ್ ಹುದ್ದೆಯ ಅಧಿಕಾರಿ ಇರುತ್ತಾರೆ. ಅವರ ಕೆಲಸ ಕೂಡ ಸಮರ್ಪಕವಾಗಿ ನಡೆಯುತ್ತಿಲ್ಲ. ಅವರ ಬದಲಿ ಸ್ಟೇಷನ್ ಟ್ರಾಫಿಕ್ ಕಂಡಕ್ಟರ್ಸ್ ಎಂಬ ಹೊಸ ಹುದ್ದೆಯನ್ನು ನಿರ್ಮಾಣಮಾಡಿ ಅವರಿಗೆ ಫಿಕ್ಸೆಡ್ ಸಂಬಳ ಕಮ್ಮಿ ಇದ್ದು, ಎಷ್ಟು ಜಾಸ್ತಿ ಕಲೆಕ್ಷನ್ ಮಾಡುತ್ತಾರೋ ಅದರ ಮೇಲೆ ಬೋನಸ್ ಕೊಡಿ. ಈ ರೀತಿ ಮಾಡಿದರೆ ಸೋರಿಹೋಗುವ ಹಣ ಉಳಿಯುತ್ತದೆಂದು ನಾನು ಸೂಚಿಸುತ್ತೇನೆ. ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಸ್ಟೇಷನ್ ಟ್ರಾಫಿಕ್ ಕಂಡಕ್ಟರ್ಸ್ ನೇಮಕಮಾಡಿದರೆ ಕಂಡಕ್ಟರ್ಸ್ ಕೈಯಲ್ಲಿ ಹಣ ಬರುವುದು ತಪ್ಪಿಸಿದಂತಾಗುತ್ತದೆ. ತಮಗೆ ಬರುವ ಆದಾಯ ಸುಲಲಿತವಾಗಿ ಬರುವುದಕ್ಕೆ ಸಹಾಯವಾಗುತ್ತದೆ. ಇನ್ನು ಮೇನ್‌ಟನೆನ್ಸ್ ಬಗ್ಗೆ ಬಹಳ ದೋಷಗಳಿವೆ. ಏನಾದರೂ ತಪ್ಪು ಮಾಡಿದರೆ, ಯಾರಾದರೂ ತಪ್ಪು ಮಾಡಿದರೆ ಅವರ ಮೇಲೆ ಜವಾಬ್ದಾರಿ ನಿಗದಿ ಮಾಡುವ ವ್ಯವಸ್ಥೆ ಇಲ್ಲ. ಈಗ ಬಸ್ ಒಂದು ಕಡೆ ಏನಾದರೂ ನಿಂತರೆ ಯಾರ ತಪ್ಪಿನಿಂದ ನಿಂತಿತು ಎಂಬುದರ ಬಗ್ಗೆ ಜವಾಬ್ದಾರಿ ನಿಗದಿ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಬ್ಬ ಕಾರ್ಮಿಕ ಸರಿಯಾಗಿ ಕೆಲಸ ಮಾಡಬೇಕಾದರೆ ವೈಯುಕ್ತಿಕವಾಗಿ ಉತ್ತೇಜನ ಕೊಡುವ ಯೋಜನೆ ಹಾಕಬೇಕಾದುದು ಬಹಳ ಅವಶ್ಯ. ಇನ್ನು ವಾಹನಗಳನ್ನು ಸರಿಯಾದ ಸಂದರ್ಭದಲ್ಲಿ ರಿಪೇರಿ ಮಾಡುವ ವ್ಯವಸ್ಥೆಯಿಲ್ಲ. ಕೆಟ್ಟು ನಿಂತರೆ ಡಿವಿಜನ್ ವರ್ಕ್‌ಷಾಪಿಗೆ ಹೋಗಬೇಕು. ಅದಕ್ಕಾಗಿ ಕೆಟ್ಟು ಹೋದ ಬಸ್ಸು ರಿಪೇರಿಯಾಗಿ ಬರಲು ತಡವಾಗುತ್ತದೆ. ಸಣ್ಣ ಸಣ್ಣ ಭಾಗಗಳು ಇಲ್ಲದೆ ಹೋಗಿ ಬಸ್ ನಿಂತಿರುತ್ತದೆ. ಫ್ಯಾನ್ ಬೆಲ್ಟ್ ಇಲ್ಲದೆ ಅನೇಕ ಬಸ್‌ಗಳು ನಿಂತಿರುವುದನ್ನು ನೋಡಿದ್ದೇವೆ. ಕನಿಷ್ಟ ಪಕ್ಷ ಡಿಪೋ ಒಂದಕ್ಕೆ ಹತ್ತು ಸಾವಿರ ರೂಪಾಯಿಗಳ ಸ್ಪೇರ್‌ಪಾರ್ಟ್ಸ್‌ನ್ನು ಎಮರ್ಜನ್ಸಿ ಕಾಂಟ್ರಾಕ್ಟ್ ಮೇಲೆ ಖರೀದಿ ಮಾಡಲು ಒಂದು ವ್ಯವಸ್ಥೆ ಮಾಡಬೇಕಾದುದು ಅತ್ಯಾವಶ್ಯಕವೆಂದು ಈ ಸಂದರ್ಭದಲ್ಲ ಹೇಳಲಿಚ್ಛೆಪಡುತ್ತೇನೆ. ಮೇನ್‌ಟನೆನ್ಸ್ ಬಹಳ ಮುಖ್ಯವಾದುದು ಎಂದರೆ ಪ್ರತಿಯೊಂದು ಡಿಪೋ ಲೆವಲ್‌ನಲ್ಲಿ ಒಂದು ಇಂಡಸ್ಟ್ರಿಯಲ್ ಶೆಡ್ಸ್ ವ್ಯವಸ್ಥೆಮಾಡಿದರೆ ಈವತ್ತಿನ ದಿವಸ ವಿದ್ಯಾವಂತ ನಿರುದ್ಯೋಗಿಗಳು ನಮ್ಮ ದೇಶದಲ್ಲಿ ಬಹಳವಾಗಿರುವುದರಿಂದ ಅವರಿಗೆ ಉದ್ಯೋಗಾವಕಾಶ ಕಲ್ಪಿಸಿ ಕೊಟ್ಟಂತಾಗುತ್ತದೆ. ಮುಖ್ಯವಾಗಿ ವಾಹನಗಳ ರಿಪೇರಿ ದೃಷ್ಟಿಯಿಂದ ಕೆಲವು ಷೆಡ್‌ಗಳನ್ನು ತೆಗೆದು ಕೂಡಲೇ ಡಿಪೋ ಲೆವಲ್‌ನಲ್ಲಿ ರಿಪೇರಿಮಾಡುವ ವ್ಯವಸ್ಥೆ ಆದರೆ ಮೇಂಟನೆನ್ಸ್‌ನ ಅರ್ಧಭಾರ ಕಡಿಮೆಯಾಗುತ್ತದೆ. ಆದರಿಂದ ಸಾರಿಗೆ ಸಂಪರ್ಕದ ವ್ಯವಸ್ಥೆ ಸರಿಯಾಗಿ ನಡೆಯಲು ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇದೇ ರೀತಿಯಾಗಿ ಇವತ್ತಿನ ದಿವಸ ಇಂಡಿವಿಜ್ಯುಯಲ್ ಸ್ಕೀಮ್ ಮಾಡಬೇಕು. ಟೈರ್ ಮೇನ್‌ಟನೆನ್ಸ್ ಬೋನಸ್ ಸ್ಕೀಮ್ ಮಾಡಬೇಕು, ಡ್ರೈವರ್ ಸರಿಯಾಗಿ ಗಾಡಿ ನಡೆಸಿ ಒಂದು ಟೈರ್ ಎಷ್ಟು ಮೈಲಿ ಬರುತ್ತದೋ ಅದರ ಮೇಲೆ ಬೋನಸ್ ಕೊಡುವ ವ್ಯವಸ್ಥೆಯಾಗಬೇಕು. ಪೆಟ್ರೋಲ್ ಕನ್‌ಸಂಪ್ಷನ್, ಡೀಸಲ್ ಕನ್‌ಸಂಪ್ಷನ್ ಯಾವ ರೀತಿ ಡ್ರೈವರು ಬಸ್ಸು ನಡೆಸುತ್ತಾರೆ ಆದರಮೇಲೆ ಹೊಂದಿಕೊಂಡಿರುತ್ತದೆ. ಆದಕ್ಕೆ ಒಂದು ಬೋನಸ್ ಸ್ಕೀಮ್ ವ್ಯವಸ್ಥೆಮಾಡಬೇಕು. ಹಾಗೆ ಪಂಕ್ಚುಯಾಲಿಟಿ ಬೋನಸ್ ಸ್ಕೀಮ್ ಮಾಡಬೇಕು. ನನ್ನ ಮಟ್ಟಿಗೆ ಹೇಳುವುದಾದರೆ ಹೆಚ್ಚಿನ ಭಾಗ ಬೋನಸ್ ರೂಪದಲ್ಲೇ ಸಂಬಳ ಬಂದರೆ ಅವನು ತಾನಾಗಿಯೇ ಸರಿಯಾಗಿ ಕೆಲಸ ಮಾಡಲೇಬೇಕಾಗುತ್ತದೆ. ಇಷ್ಟು ಹೇಳಿ ಈವತ್ತಿನ ದಿವಸ ಈ ಸಭೆಯಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಸಾರಿಗೆ ಸಚಿವರು ಮಂಡಿಸಿರತಕ್ಕ ಸಾರಿಗೆ ಮತ್ತು ವಸತಿ ಸಂಬಂಧದ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಸಭೆಯ ಮುಂದಿಡುತ್ತೇನೆ. ಮೊದಲನೆದಾಗಿ ಸಾರಿಗೆ ಬಗ್ಗೆ ಹೇಳುತ್ತೇನೆ. ಸಾರಿಗೆಯಿಂದ ಬರತಕ್ಕ ಆದಾಯದಲ್ಲಿ ಶೇಕಡ 50 ಭಾಗ ಬೇರೆಯವರಿಗೆ ಹೋಗುತ್ತಾ ಇದೆ ಎನ್ನುವ ಸನ್ನಿವೇಶ ನನ್ನ ಗಮನಕ್ಕೆ ಬಂದಿದೆ. ನಾನು ಹೊಸದಾಗಿ ಮೈಸೂರು ಸಿಟಿಯಿಂದ ಸದಸ್ಯನಾಗಿ ಬೆಂಗಳೂರಿಗೆ ಬಂದು ಪ್ರಮಾಣ ವಚನ ಸ್ವೀಕಾರ ಮಾಡುವುದಕ್ಕೆ ಮೊದಲು ಇಲ್ಲಿ ಒಂದು ಪ್ರಕರಣ ನಡೆಯಿತೆಂದು ನನ್ನ ಗಮನಕ್ಕೆ ಬಂತು. ಅದರಮೇಲೆ ಬೆಂಗಳೂರಿನಲ್ಲಿ ಡ್ಯೂಪ್ಲಿಕೇಟ್ ಟಿಕೆಟ್‌ಗಳನ್ನು ಪ್ರಿಂಟ್ ಮಾಡಿ ಆದನ್ನು ಬಸ್ ಪ್ರಯಾಣಿಕರಿಗೆ ಕೊಟ್ಟು ಅದರ ಮೂಲಕ ಕಾರ್ಪೊರೇಷನ್‌ಗೆ ಬರುವ ಹಣದಲ್ಲಿ ಅರ್ಧಭಾಗ ಬಸ್ ಕಂಡಕ್ಟರಿಗೆ ಮತ್ತು ಇತರರ ಜೇಬಿಗೆ ಹೋಗುತ್ತದೆಯೆಂದು ಗೊತ್ತಾಯಿತು. 18-3-1974 ಸೋಮವಾರ ರಾತ್ರಿ 9

ಘಂಟೆಗೆ ಮೆಜೆಸ್ಟಿಕ್‌ನಿಂದ ಹೊಸಹಳ್ಳಿ ರೂಟ್ ನಂಬರ್ 30ಬಿ ಬಸ್ಸಿನಲ್ಲಿ ಟಿಕೆಟ್ ಇಷ್ಯು ಪ್ರಯಾಣ ಮಾಡಿದ್ದು. ಆ ಬಸ್ ನಂಬರ್ ಎಂ.ವೈ.ಎಫ್. 847, ಟಿಕೆಟ್ ನಂಬರ್ 73818 (ಎರಡು ಟಿಕೆಟ್‌ಗಳು)

ಶ್ರೀ ಎಂ. ಬಿ. ರಾಮಸ್ವಾಮಿ.—ಅದು ಬೋಗಸ್ ಟಿಕೆಟ್ ಆಗಿದ್ದರೆ ಅವನ್ನು ತರುವುದಕ್ಕೆ ಅವಕಾಶ ಇರುತ್ತಿರಲಿಲ್ಲ, It could have been seized by the Department.

ಶ್ರೀ ವೆಂಕಟಲಿಂಗಯ್ಯ.—ಬಸ್ಸಿನಲ್ಲಿ ನಾನು ಮೇಲೆ ಹೇಳಿದ ಟಿಕೆಟನ್ನು ಇಷ್ಯೂ ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡಿದ ಮೇಲೆ ಅದು ಡ್ಯೂಪ್ಲಿಕೇಟ್ ಟಿಕೆಟ್ ಎಂದು ಚೆನ್ನಾಗಿ ಗೊತ್ತಾಗುತ್ತದೆ. ಈ ರೀತಿ ಡೇರ್ ಡೆವಿಲ್ ಆಗಿ ಡ್ಯೂಪ್ಲಿಕೇಟ್ ಟಿಕೆಟ್‌ಗಳನ್ನು ಪ್ರಿಂಟ್ ಮಾಡಿ ಇಷ್ಯೂ ಮಾಡುವುದನ್ನು ನೋಡಿದರೆ ಸರ್ಕಾರದ ಹೆದರಿಕೆ ಇಲ್ಲವೆಂದು ಗೊತ್ತಾಗುತ್ತದೆ. ಇದರಲ್ಲಿ ಒಬ್ಬರ ಕೈವಾಡವೇ ಮಾತ್ರ ಅಲ್ಲ ಮೇಲ್ಪಟ್ಟ ಅಧಿಕಾರಿಗಳ ಕೈವಾಡವೂ ಇದೆಯೆಂದು ಅನುಮಾನ ಆಗುತ್ತದೆ. ಸರ್ಕಾರದ ಆಶೀರ್ವಾದವು ಕೂಡ ಇದೆಯೋ ಎಂದು ಅನುಮಾನ ಪಡಬೇಕಾಗಿದೆ. ಇದನ್ನು ವಿಜಿಲೆನ್ಸ್ ಕಮಿಷನ್‌ಗೆ ಹಾಕಿ ಇಂಪಾರ್ಷಿಯಲ್ ಎನ್‌ಕ್ವೈರಿ ಮಾಡಿಸಬೇಕು ಮತ್ತು ಆ ರಿಪೋರ್ಟನ್ನು ಈ ಸಭೆಯ ಮುಂದೆ ಇಡಬೇಕು ಎಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಬಸ್ ರಾಷ್ಟ್ರೀಕರಣ ಮಾಡಿರುವ ಉದ್ದೇಶ ಒಳ್ಳೆಯದು. ಪ್ರೈವೇಟ್ ಬಸ್ ಓಡಿಸುವುದರಿಂದ ಖಾಸಗಿ ಜನರು ಅನುಕೂಲ ಪಡೆಯುವುದಲ್ಲದೆ ಸಾಮಾನ್ಯ ಜನತೆಗೆ ಸಾಕಷ್ಟು ಸೌಕರ್ಯ ಸಿಗುವುದಿಲ್ಲ. ಆದುದರಿಂದ ಅವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಬಸ್‌ಗಳನ್ನು ರಾಷ್ಟ್ರೀಕರಣ ಮಾಡಿದ್ದು ಆಯಿತು. ಆದರೆ ನಿಜವಾಗಿ ಸರ್ಕಾರದ ಉದ್ದೇಶ ಸಫಲವಾಗಿಲ್ಲ. ಒಂದು ಕಡೆ ಬಸ್ ರಾಷ್ಟ್ರೀಕರಣ ಮಾಡಿ ಮತ್ತೊಂದು ಕಡೆ ಕಂಟ್ರಾಕ್ಟ್ ಕ್ಯಾರಿಯೆಜಸ್‌ಗಳಿಗೆ ಪರ್ಮಿಷನ್ ಕೊಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಿಂದ ಮೈಸೂರಿಗೆ ಮೈಸೂರಿನಿಂದ ಬೆಂಗಳೂರಿಗೆ ಮತ್ತು ಅನೇಕ ಕಡೆ ಹಲವಾರು ಕಂಟ್ರಾಕ್ ಕ್ಯಾರಿಯೇಜುಗಳು ಓಡಾಡುತ್ತಿವೆ. ಸರ್ಕಾರಿ ಬಸ್‌ಗಳು ಬಸ್ ನಿಲ್ದಾಣವನ್ನು ಬಿಡುವ 15 ನಿಮಿಷಗಳ ಮೊದಲು ಅನೇಕ ಖಾಸಗೀ ಬಸ್‌ಗಳು ರೆಗ್ಯುಲರ್‌ಲೈನ್ ಬಸ್ಸಿನಂತೆ ಇಲ್ಲಿಂದ ಹೊರಡುತ್ತವೆ. ಇದರಿಂದ ಕಾಂಪಿಟಿಷನ್ ಹೆಚ್ಚಾಗಿ ಸರ್ಕಾರಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ. ಆದುದರಿಂದ ಸರ್ಕಾರಿ ಬಸ್‌ಗಳನ್ನು ಹೆಚ್ಚಿಗೆ ಹಾಕಿ ಕಂಟ್ರಾಕ್ಟ್ ಕ್ಯಾರಿಯೇಜರ್‌ಗಳಿಗೆ ಪರ್ಮಿಟ್ ಕೊಡುವುದನ್ನು ತಪ್ಪಿಸಿ ಜನರಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು. ಇವತ್ತಿನ ದಿವಸ ನೋಡುವುದಾದರೆ ಖಾಸಗೀ ಬಸ್‌ಗಳಲ್ಲಿ ಇರತಕ್ಕ ಸೌಕರ್ಯಗಳು ಸರ್ಕಾರಿ ಬಸ್‌ಗಳಲ್ಲಿ ಇರುವುದಿಲ್ಲ. ಸರ್ಕಾರಿ ಬಸ್ಸಿನ ಕಂಡಕ್ಟರ್ ಮತ್ತು ಡ್ರೈವರ್‌ಗಳು ಎಲ್ಲಿ ಅಂದರೆ ಅಲ್ಲಿ ಬಸ್‌ಗಳನ್ನು ನಿಲ್ಲಿಸಿ ಸಮಯಕ್ಕೆ ಸರಿಯಾಗಿ ಊರುಗಳನ್ನು ಸೇರುವುದಿಲ್ಲ. ಒಂದೊಂದು ಸಲ ಬಸ್‌ಗಳು ಕೆಟ್ಟುಹೋಗಿ ದಾರಿ ಮಧ್ಯದಲ್ಲಿ ನಿಂತುಕೊಂಡಿರುತ್ತವೆ. ಉದಾಹರಣೆಗೆ ಹೇಳುವುದಾದರೆ ನಾವು ಮೊನ್ನೆ ಗುಲ್ಬರ್ಗದಲ್ಲಿ ಬೆಂಗಳೂರಿಗೆ ಬಂದಾಗ ಮಧ್ಯದಲ್ಲಿ ಬಸ್ ಕೆಟ್ಟು ಹೋಗಿ ತೊಂದರೆ ಆಯಿತು. ಅದು ಡ್ರೈವರ್‌ಗೆ ಗೊತ್ತಿದ್ದರೂ ಬಳ್ಳಾರಿಯಲ್ಲಿ ಡ್ರೈವರ್ ಚೇಂಜ್ ಆಗುವಾಗ ಮತ್ತೊಬ್ಬ ಡ್ರೈವರ್‌ಗೆ ತಿಳಿಸದೆ ಹೋದುದರಿಂದ ಬಸ್ ಸ್ವಲ್ಪ ದೂರ ಹೋಗಿ ಹಾಗೆಯೇ ನಿಂತುಬಿಟ್ಟಿತು. ನಾವು ಬಸ್ಸಿನಲ್ಲಿ ಬರಬೇಕಾಯಿತು. ಡ್ರೈವರ್‌ಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಇರುವುದರಿಂದ ಈ ರೀತಿ ಜನರಿಗೆ ಅನಾನುಕೂಲಗಳಾಗುತ್ತಿವೆ. ಇದನ್ನು ತಪ್ಪಿಸಬೇಕು. ಎಷ್ಟೋ ಬಸ್‌ಗಳು ಸಣ್ಣಪುಟ್ಟ ರಿಪೇರಿಗಳಿಲ್ಲದೆ ಗ್ಯಾರೇಜಿನಲ್ಲಿ ನಿಂತಿರುತ್ತವೆ. ಮೈಸೂರು ಸಿಟಿ ಬಸ್‌ಸ್ಟ್ಯಾಂಡ್‌ನಲ್ಲಿ ಎಷ್ಟೋ ಬಸ್‌ಗಳ ಎಂಜಿನ್ಸ್ ಆಫ್ ಮಾಡಿರುವುದಿಲ್ಲ. ಇದರಿಂದ ಎಷ್ಟೋ ಪೆಟ್ರೋಲ್ ಮತ್ತು ಡೀಸೆಲ್ ವೇಸ್ಟ್ ಆಗುತ್ತದೆ. ಇದನ್ನೆಲ್ಲಾ ಸರಿಯಾಗಿ ನೋಡಿಕೊಂಡರೆ ಖರ್ಚು ಉಳಿಸಬಹುದು. ಕಂಟ್ರಾಕ್ ಬಸ್ಸಿನ ಮೇಲೆ ಹಿಡಿತ ಇಡಲು ಎರಡು ಮೂರು ಸ್ಕ್ವೇಡ್ ಮಾಡಿದ್ದೀರಿ. ಅಂತಹ ಸ್ಕ್ವೇಡ್‌ಗಳನ್ನು ಮಾಡುವುದರಿಂದ ಏನೂ ಪ್ರಯೋಜನ ಇಲ್ಲ.

4-00 P.M.

ಅವರಿಗೆ ಪ್ರೋತ್ಸಾಹ ಕೊಟ್ಟುಕೊಂಡು ಅಂಡರ್‌ಸ್ಟ್ಯಾಂಡ್ ಮೇಲೆ ನಡೆಯುತ್ತಿರುವಾಗ 20 ಸ್ಕ್ವಾಡ್ ಮಾಡಿದರೂ ಇಂಪ್ರೂವ್‌ಮೆಂಟ್ ಆಗುವುದಿಲ್ಲ. ಕರೆಕ್ಟಾಗಿ ಮಾಡಬೇಕಾದರೆ ನಮಗೆ ಶಕ್ತಿ ಇದ್ದು ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡೋಣ. ಕಂಪ್ಲೀಟಾಗಿ ಕಾರ್ಯಗತ ಮಾಡುವುದಕ್ಕೆ ಏನೇನು ಸಲಕರಣೆಗಳು ಬೇಕೋ ಏರ್ಪಾಡುಗಳು ಬೇಕೋ ಅವನ್ನು ಮಾಡಿಕೊಂಡು ಅದನ್ನು

(ಶ್ರೀ ವೆಂಕಟಲಿಂಗಯ್ಯ)

ಮಾಡುವುದಕ್ಕೆ ಪೂರ್ಣವಾಗಿ ಅವಕಾಶವಿದ್ದರೆ ಅದನ್ನು ಮಾಡೋಣ. ನಮ್ಮ ಕೈಯಲ್ಲಿ ಆಗದೇ ಹೋದರೆ ಬೇರೆಯವರ ಕಂಟ್ರಾಕ್ಟ್ ಬಸ್ ಇದಕ್ಕಿಂತಲೂ ಅನುಕೂಲವಾಗುವುದಾದರೆ ಅದಕ್ಕೆ ಅವಕಾಶ ಕೊಡಿ. ಈ ಏರ್ಪಾಡು ಮಾಡುವತನಕ ಪೋಸ್ಟ್‌ಪೋನ್ ಮಾಡಿ. ಮಾಡಿದರೆ ಪರ್‌ಫೆಕ್ಟಾಗಿ ಮಾಡಿ. ಸ್ಟೇಟೆಲ್ಲಾ ಮಾಡುತ್ತೇವೆಂದು, ಎಲ್ಲಾ ಅವ್ಯವಸ್ಥೆ ಮಾಡಿಕೊಂಡು ಅರ್ಧಂಬರ್ಧ ಮಾಡುವುದು ಸರಿಯಿಲ್ಲ. ಒಂದು ಜಿಲ್ಲೆಯಲ್ಲಿ ಪರ್‌ಫೆಕ್ಟಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಳ್ಳುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಂತರ ಮತ್ತೊಂದು ಜಿಲ್ಲೆ ತೆಗೆದುಕೊಳ್ಳುವುದು ಒಳ್ಳೆಯದು. ಸರ್ಕಾರಿ ಮಿಷನರಿ ಏನಿದೆ, ಅದರ ಡಿಫೆಕ್ಟ್ ಸರಿಮಾಡಬೇಕಾದರೆ ಉಗ್ರಕ್ರಮ ತೆಗೆದುಕೊಳ್ಳಬೇಕು ಅದರ ಮೇಲೆ ಒಬ್ಬರನ್ನು ನೋಡುವುದಕ್ಕೆ ಇನ್ನೊಬ್ಬರು, ಇನ್ನೊಬ್ಬರನ್ನು ನೋಡಿಕೊಳ್ಳುವುದಕ್ಕೆ ಮತ್ತೊಬ್ಬರನ್ನು ಮಾಡಿದರೆ ಪ್ರಯೋಜನ ಇಲ್ಲ. ಅಮೆಂಡ್‌ಮೆಂಟ್ ತರಬೇಕು ಎಂದು ಮಾಡಿದ್ದೀರಿ. ಒಂದು ಸಾರಿ ಕಾಂಟ್ರಾಕ್ಟ್ ಕ್ಯಾರೇಜ್ ತಪ್ಪಿತಸ್ಥನಾದರೆ ಸಸ್ಪೆನ್‌ಷನ್ ಮಾಡುವುದು, ಮತ್ತೊಂದು ಸಾರಿ ತಪ್ಪು ಮಾಡಿದರೆ ಲೈನ್ ಕ್ಯಾನ್ಸಲ್ ಮಾಡುವುದು—ಇದಕ್ಕೆ ಕಾನೂನು ತರುತ್ತೀರಿ. ಆದರೆ ಕಾನೂನಿನಲ್ಲಿ ತಪ್ಪಿತಸ್ಥನಾಗುವವರೆಗೆ ನಿಮ್ಮ ಸಿಬ್ಬಂದಿ ಅವಕಾಶ ಕೊಡುವುದಿಲ್ಲ. ಕೇಸ್ ವೀಕಾಗಿ ಡಿಸ್‌ಮಿಸ್‌ಗೆ ಅವಕಾಶ ಮಾಡಿಕೊಂಡು ಬಸ್ ಮಾಲೀಕರು ಕೂತಿರುತ್ತಾರೆ. ಪ್ರತಿಯೊಂದು ಮಟ್ಟದಲ್ಲೂ ಅವರವರೇ ನಿಮ್ಮ ಸ್ಕ್ವಾಡ್ ಜೊತೆಸೇರಿ ಅಲ್ಲಲ್ಲೇ ಕೇಸ್‌ವೀಕ್ ಮಾಡುತ್ತಾರೆ. ಸರ್ಕಾರಿ ಅಧಿಕಾರಿಗಳಿಂದ, ಸರ್ಕಾರಿ ಸ್ಟಾಫಿನಿಂದ ಎಲ್ಲಾ ಕಡೆಯಿಂದಲೂ ಇವರಿಗೆ ರಕ್ಷಣೆ ಇದೆ. ನಿಮ್ಮ ಸ್ಟಾಫಿಗೆ ಮತ್ತು ಸರ್ಕಾರಕ್ಕೆ ಕಾರಣಾಂತರದಿಂದ ಕಾನೂನು ಬಿಕ್ಕಟ್ಟು ಇರುವುದಾದರೆ ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ, ಪಾಸ್ ಮಾಡೋಣ, ಕಾನೂನು ತಂದು ಸ್ಟ್ರಿಕ್ಟಾಗಿ ಜಾರಿಗೆ ಕೊಡುವವರು ನೀವೇ. ಕಾನೂನು ಬಿಕ್ಕಟ್ಟು ಬಂದರೆ ತಿದ್ದುಪಡಿ ಮಾಡಿ. ನಾವು ಮಾಡಿದಷ್ಟನ್ನೇ ಪರ್‌ಫೆಕ್ಟಾಗಿ ಮಾಡೋಣ. ಒಂದೊಂದಾಗಿ ನೀವು ಕಾರ್ಯಕ್ರಮ ಹಾಕಿಕೊಂಡು ಹೋಗಿ. ಇಲ್ಲದಿದ್ದರೆ ಸರಿಯಾದ ರೀತಿ ವ್ಯವಸ್ಥೆಯಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಹೌಸಿಂಗ್ ವಿಷಯದಲ್ಲಿ, ಮಿಡ್ಲ್ ಇನ್‌ಕಂ ಗ್ರೂಪ್‌ನವರಿಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ರಿಚ್ ಕ್ಲಾಸ್, ಎಲ್ಲಾ ಕ್ಲಾಸ್‌ಗೆ ಒಂದೊಂದು ರೀತಿ ಆಗುತ್ತದೆ. ಲೇಬರ್ ಕ್ಲಾಸ್‌ಗೆ, ತಮ್ಮ ಡಿಪಾರ್ಟ್‌ಮೆಂಟ್ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಂಡು ಹೋಗುವುದಕ್ಕೆ ಯೋಜನೆ ಹಾಕಿಕೊಂಡಿದ್ದೀರಿ. ಇದರಿಂದ ಗ್ರಾಜುಯಲ್ ಆಗಿ ಇತರೇಯವರಿಗೂ ಸಿಕ್ಕಬಹುದು. ಎಲ್ಲರಿಗೂ ಒಂದೊಂದು ಸ್ಕೀಂ ಇದೆ. ಪೂರ್ ಕ್ಲಾಸ್ ಸ್ಲಂ ಏರಿಯಾದಲ್ಲಿ, ಕಾರ್ಪೊರೇಷನ್ ಏರಿಯಾದಲ್ಲಿ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಎಷ್ಟೋ ಹಾಕಿಕೊಂಡಿರುವುದನ್ನು ನಾವು ನೋಡುತ್ತಾ ಇದ್ದೇವೆ ಒಂದು ಎಕ್ಸ್‌ಟೆನ್‌ಷನ್ ಮಾಡಬೇಕು ಎಂದು ಇಂಪ್ರೂವ್‌ಮೆಂಟ್ ಮಾಡಬೇಕು ಎಂದು ಅವರನ್ನು ಮುಂದೆ ಮುಂದೆ ಓಡಿಸುತ್ತಿದ್ದಾರೆ. ಅವರಿಗೆ ಶಾಶ್ವತವಾಗಿ ಏನು ಮಾಡಿದ್ದೀರಿ? ಅಲ್ಲಿ ಕಿತ್ತು ಇಲ್ಲಿ ಹಾಕುವುದು, ಇಲ್ಲಿ ಕಿತ್ತು ಅಲ್ಲಿ ಹಾಕುವುದು ಈ ರೀತಿ ಮಾಡುತ್ತಿದ್ದಾರೆ. ಮಿಡ್ಲ್ ಇನ್‌ಕಂ ಗ್ರೂಪ್‌ನವರಿಗೆ ಏನು ಯೋಜನೆ ಹಾಕಿದ್ದೀರೊ ಅದೇರೀತಿ ಇವರಿಗೂ ಒಂದು ಯೋಜನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಲೇಬರರ್ಸ್, ಕೂಲಿ ಮಾಡುವವರು ಏನಿದ್ದಾರೆ ಅವರಿಗೆ ಬಾಡಿಗೆ ಮನೆ ಸರಿಯಾಗಿ ಮನೆ ಸಿಕ್ಕುವುದಿಲ್ಲ. ಅವರಿಗೆ ಒಂದು ಕಾಲೋನಿ ಮಾಡಿ. ಅವರಿಗೆ ಎಕ್ಸ್‌ಟೆನ್‌ಷನ್‌ನಲ್ಲಿರುವುದಕ್ಕೆ ಅವಕಾಶವಿರುವುದಿಲ್ಲ. ಒಂದು ಏರಿಯಾ ಫಿಕ್ಸ್ ಮಾಡಿ. ಕನಿಷ್ಟಪಕ್ಷ ಒಂದು ಷೆಡ್ ಹಾಕಿ ಬಾಡಿಗೆಗೆ ಕೊಡಿ. ನಿಮ್ಮ ಯೋಜನೆ, ನಿಮ್ಮ ಕಾರ್ಯಕ್ರಮದ ಪ್ರಕಾರ ಪ್ರತಿಯೊಬ್ಬನನ್ನೂ ಮನೆಯುಳ್ಳವನನ್ನಾಗಿ ಮಾಡಿ. ಕೆಲವರಿಗೆ ನೂರಾರು ವರ್ಷಗಳಿಂದ ಮನೆ ಇರುವುದಿಲ್ಲ. ಅವನು ಕೊನೇವರೆಗೂ ಬಾಡಿಗೇ ಕೊಟ್ಟುಕೊಂಡೇ ಸಾಯಬೇಕು. ನೀವು ಒಂದು ಏರಿಯಾ ಫಿಕ್ಸ್ ಮಾಡಿ. ಸಣ್ಣಸಣ್ಣ '30 + 40' ಅಥವಾ '20 + 30' ಅಷ್ಟಾದರೂ ಜಾಗವನ್ನು ಅವರ ವಾಸಕ್ಕೆ, ಅವರ ಕುಟುಂಬದ ವಾಸಕ್ಕೆ ಕೊಡಿ. ಜಾಗ ಕೊಟ್ಟು ಷೆಡ್ ಕಟ್ಟಿಸಿಕೊಡಿ. ಷೆಡ್ ಕಾಸ್ಟ್ ಫ್ರೀಯಾಗಿ ಕಟ್ಟಿಸಿಕೊಡಿ. ಆಗಲಿಲ್ಲ ಅಂದರೆ, 100, 200, 500 ರೂಪಾಯಿನಲ್ಲಿ ಕಟ್ಟಿಸಿಕೊಡಿ. ಹೊರಗಡೆ 50,100 ರೂಪಾಯಿ ಬಾಡಿಗೆ ಕೊಡುವುದಕ್ಕೆ ಚೈತನ್ಯವಿರುವುದಿಲ್ಲ, ಅಗತ್ಯವಾದರೆ ಬಾಡಿಗೆ ರೂಪದಲ್ಲಿ ಹೆಡ್ ಕಾಸ್ಟ್, ಸ್ಟೇಟ್ ಕಾಸ್ಟ್ ವಸೂಲು ಮಾಡಿ. ಅವರು ಅಲ್ಲಿ ಸಾಯುವವರೆಗೂ ಇರುವುದಕ್ಕೆ ಅವಕಾಶವಾಗಲಿ. ಅವರು, ಸರ್ಕಾರದವರು ನನಗೊಂದು ಜೋಪಡಿ ಹಾಕಿಸಿಕೊಟ್ಟರು, ಎಂದು ಸಮಾಧಾನದಿಂದ ನಿರ್ಭಯವಾಗಿ ಇರುತ್ತಾರೆ. ಆದನ್ನಾದರೂ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಟ್ರಸ್ಟ್ ಬೋರ್ಡ್‌ನಲ್ಲೇ ಔಟ್ ಸ್ಕೀಮ್ಸ್‌ನಲ್ಲಿ ಅವಕಾಶ ಇಲ್ಲ, ಹೌಸಿಂಗ್ ಬೋರ್ಡ್ ಸ್ಕೀಮ್ಸ್‌ನಲ್ಲಿ ಅವಕಾಶ ಇದುವರೆಗೆ ಯಾರೂ ಏನು ಮಾಡಿಲ್ಲ: ಆದುದರಿಂದ ಅವರಿಗೆ ಒಂದು ಕಾಲೋನಿ ಫಿಕ್ಸ್ ಮಾಡಿ

ಬಾಡಿಗೆ ರೂಪದಲ್ಲಿ ಕಾಸ್ಟನ್ನು 5—10 ವರ್ಷಗಳಲ್ಲಿ ವಸೂಲಿಮಾಡಿ, ಅವರು ಪರ್ಮನೆಂಟಾಗಿ ಇರುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಸಲಹೆ ಕೊಟ್ಟು, ಇಷ್ಟು ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

[*The Deputy Speaker in the Chair*]

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಸನ್ಮಾನ್ಯ ಅಧ್ಯಕ್ಷರೇ, ಸಾರಿಗೆ ಮಂತ್ರಿಗಳು ಇವತ್ತು ನಮ್ಮಮುಂದೆ ಬೇಡಿಕೆಯನ್ನು ಇಟ್ಟಿದ್ದಾರೆ. ಈ ಬೇಡಿಕೆಗೆ ನನ್ನ ಸಂಪೂರ್ಣವಾದಂಥ ಬೆಂಬಲ ಇದೆ. ಆದರೂಕೂಡ ಈ ಬೇಡಿಕೆಯಲ್ಲಿರತಕ್ಕಂಥ ಅನೇಕ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ನನ್ನ ಆದ್ಯಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಮೊಟ್ಟಮೊದಲನೆಯದಾಗಿ, ಈ ಬೇಡಿಕೆಗಳ ಬಗ್ಗೆ ಹೇಳುವುದಾದರೆ, ಸರ್ಕಾರ ಪ್ರತಿವರ್ಷದಲ್ಲೂ ಟ್ಯಾಕ್ಸನ್ನು ವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಕಾನೂನಿನ ಹಿಡಿತದಿಂದ ಅದು ತಪ್ಪಿ ಹೋಗತಕ್ಕ ಸಂದರ್ಭಗಳು ನಮಗೆ ಕಂಡುಬರುತ್ತಿವೆ. ಟಿಪಿಜಿಯನ್ನು ಹೆಚ್ಚು ಮಾಡುವ ಬದಲು ಟಾಕ್ಸ್ ಜೊತೆಗೆ ಮರ್ಜ್‌ಮಾಡುವುದರಿಂದ ಟಿಪಿಜಿ ಕದಿಯುವುದು ಕಡಿಮೆಯಾಗುತ್ತದೆ ಎಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಟಿಪಿಜಿಯನ್ನು ಮೈಲೇಜ್ ಮೇಲೆ ಲೆಕ್ಕ ಹಾಕುತ್ತಾರೆ, ಆದುದರಿಂದ ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ವಶಪಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಡಿಪಾರ್ಟ್‌ಮೆಂಟಲ್ ವೆಹಿಕಲ್ಸ ಪ್ರಾಜೆಕ್ಟ್‌ನಲ್ಲಿ ಕೆಲಸಮಾಡತಕ್ಕ ಸಂದರ್ಭದಲ್ಲಿ, ಅನೇಕ ಕಡೆ ಟ್ಯಾಕ್ಸ್ ಕದಿಯುತಕ್ಕ ನಿದರ್ಶನಗಳು ಬಂದಿವೆ. ನಾನು ಎಸ್ಟಿಮೇಟ್ ಕಮಿಟಿಯಲ್ಲಿ ಹಿಂದೆ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಅನೇಕ ನಿದರ್ಶನಗಳು ರಾಯಚೂರು ಜಿಲ್ಲೆಯಲ್ಲಿ ಕಂಡು ಬಂದಿದೆ. ಈ ಸಂದರ್ಭದಲ್ಲಿ ತಮಗೆ ಸಲಹೆ ಕೊಡಲಿಕ್ಕೆ ಬಯಸುತ್ತೇನೆ. ಈ ಟಿ. ಪಿ. ಜಿ. ಯನ್ನು ಟ್ಯಾಕ್ಷನಲ್ಲಿಯೇ ಮರ್ಜ್ ಮಾಡುವುದರಿಂದ ಯಾವ ರೀತಿಯಲ್ಲೂ ಈ ಟ್ಯಾಕ್ಸ್‌ನ್ನು ಎವೇಡ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ಸ್ಟೇಟ್ ಕ್ಯಾರೇಜಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗೆ ಪರ್ಮಿಟ್ ಇಶ್ಯು ಮಾಡಿದ ಕಾಲದಲ್ಲಿ ರೀಜಿನಲ್‌ಟ್ರಾನ್ಸ್‌ಪೋರ್ಟ್ ಅಥಾರಿಟಿಗೆ ಸಂಪೂರ್ಣವಾದ ಅಧಿಕಾರವಿದೆ. ನಮ್ಮ ಹತೋಟಿಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ ಇದು ಸ್ವಾಗತಾರ್ಹವಾದ ವಿಚಾರ. ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗೆ ಪರವಾನೆ ಕೊಡುತ್ತಾರೆ, ಸ್ಟೇಟ್ ಕ್ಯಾರೇಜಸ್ ಓಡುತ್ತಾ ಇರತಕ್ಕದನ್ನು ನೋಡಿದ್ದೇನೆ. ನಿದರ್ಶನಕ್ಕೆ ಹೇಳಬೇಕು ಎಂದರೆ ಇವತ್ತು ಮೈಸೂರಿನಲ್ಲಿರತಕ್ಕ ಟಿ. ಎನ್. ಆರ್. ಟಿ. ಎಸ್. ಬಸ್ಸಸ್ ಎಷ್ಟೋ ಓಡುತ್ತಿವೆ. ಮೈಸೂರಿನಿಂದ ಚಿಕ್ಕಮಗಳೂರಿಗೆ ಎಷ್ಟೋ ಬಸಸ್ ಪರ್ಮಿಟ್ ಇಲ್ಲದೇ ಓಡುತ್ತಿರುವುದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಅದರಲ್ಲಿ ವಿಮಲ ಎಂಬತಕ್ಕಂಥ ಬಸ್ಸನ್ನು ಹಿಡಿದು ನಿಲ್ಲಿಸಿದ್ದರು. ಅದಕ್ಕೆ ಪರ್ಮಿಟ್ ಇಲ್ಲ ಎನ್ನತಕ್ಕಂಥದ್ದನ್ನು ಕೇಳಿದ್ದೇನೆ, ಅದು ಪ್ರತಿನಿತ್ಯ ರೂಟ್‌ನಲ್ಲಿ ಓಡಾಡುತ್ತಿದ್ದರೂ, ಯಾವ ಪೋಲೀಸ್ ಅಧಿಕಾರಿಯೂ ಚೆಕ್ ಮಾಡಿಲ್ಲ, ಅದರ ಮೇಲೆ ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎನ್ನತಕ್ಕಂಥ ಮಾತನ್ನು ಬಹಳ ವಿಷಾದದಿಂದ ಹೇಳುತ್ತೇನೆ. ಈ ರೀತಿ ಅವರು ಸರ್ಕಾರಿ ಬಸ್ಸಸ್ ಓಡಾಡುತ್ತಿರತಕ್ಕಂಥ ರೋಡ್‌ನಲ್ಲಿಯೇ ಅವರು ನೇರವಾಗಿ ಹಗಲಿನಲ್ಲಿಯೇ ದರೋಡೆ ನಡೆಸುತ್ತಿರತಕ್ಕಂಥ ಪ್ರಕರಣಗಳು ನಡೆಯುತ್ತಿವೆ ಎಂದು ಅನೇಕ ಜನರ ಬಾಯಿಯಲ್ಲಿ ಕೇಳಿ ಬರುತ್ತಿದೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಯಾವ ಯಾವ ಬಸ್ಸಸ್‌ಗೆ ಪರ್ಮಿಟ್ ಇಶ್ಯು ಮಾಡಿವೆ ಎನ್ನತಕ್ಕಂಥದ್ದನ್ನು ತಿಳಿಸಬೇಕಾಗುತ್ತದೆ. ಒಂದು ವೇಳೆ ಬಸ್ಸಸ್‌ಗೆ ಪರ್ಮಿಟ್ ಇಶ್ಯು ಮಾಡದೇ ಇದ್ದರೆ ಅಂಥ ಬಸ್ಸಸ ಗಳನ್ನು ಶೀಜ್ ಮಾಡತಕ್ಕಂಥ ಅವಶ್ಯಕತೆ ಇದೆ, ಹಾಗೂ ಆ ಅಧಿಕಾರವನ್ನು ಅಧಿಕಾರಿಗಳಿಗೆ ಕೊಡಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ.

ಎರಡನೆಯದಾಗಿ, ಟಾಕ್ಸಿ ಕ್ಯಾಬ್ ಬಗ್ಗೆ ಹೇಳಿದ್ದಾರೆ, ಪ್ರೈವೇಟ್ ಕಾರ್‌ಗಳನ್ನು ಟ್ಯಾಕ್ಸಿಯಾಗಿ ಕನ್‌ವರ್ಟ್ ಮಾಡಿಕೊಂಡು ಓಡಿಸುತ್ತಿದ್ದಾರೆ. ಅದಕ್ಕೆ ನನ್ನ ಸಲಹೆ ಏನು ಎಂದರೆ, ಪೋಲೀಸಿನವರು ಹಿಡಿದಲ್ಲಿ ಅಥವಾ ನಿಮ್ಮ ಡಿಪಾರ್ಟಮೆಂಟಿನವರು ವೆಹಿಕಲ್ಸ್‌ಗಳನ್ನು ಹಿಡಿದಾಗ ಅವುಗಳನ್ನು ಟ್ಯಾಕ್ಸಿಯಾಗಿ ಕನ್‌ವರ್ಟ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಆರ್. ಸಿ. ಮೇಲೆ ಎನ್‌ಡಾರ್ಸ್ ಮಾಡಿ ಅಲ್ಲಿಯೇ ವಿಚಾರಣೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಅಂಥ ಟ್ಯಾಕ್ಸಿ ಕ್ಯಾಬ್‌ಗಳಿಗೆ ಸಿಟ್ಟಿಂಗ್ ಕ್ಯಾಪಾಸಿಟಿ ಜಾಸ್ತಿ ಮಾಡುವುದರಿಂದ ಮತ್ತು ಟ್ಯಾಕ್ಸಿ, ಜಾಸ್ತಿ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಮಾಡುವುದರಿಂದ ಅಂಥ ಇಲ್‌ಸಿಟ್ ವೆಹಿಕಲ್ ಓಡಾಡುವುದು ಬಹಳ ಕಡಿಮೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ಅಂಥ ಸಂದರ್ಭದಲ್ಲಿ ಅವರಿಗೆ ಫೈನ್ ಹಾಕಿ, ಇದರಿಂದ ಪದೇ ಪದೇ ತಪ್ಪು ಮಾಡತಕ್ಕಂಥದ್ದು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಯಾರು ಇಲ್‌ಸಿಟ್ ಆಗಿ ವೆಹಿಕಲ್‌ನಲ್ಲಿ ಟ್ರಾವಲ್ ಮಾಡತಕ್ಕಂಥ ಸಂದರ್ಭದಲ್ಲಿ ಬಹುಶಃ ಹಿಡಿದಂಥ ಕಾಲದಲ್ಲಿ ಆ ಪ್ಯಾಸೆಂಜರ್‌ರಿಂದ ಸಂಪೂರ್ಣವಾದಂಥ ಒಂದು ಚಿತ್ರ ಸಿಗುತ್ತದೆ, ಅಂಥ ಸಂದರ್ಭದಲ್ಲಿ ಆರ್. ಸಿ. ಮೇಲೆ ಎಂಡಾರ್ಸ್ ಮಾಡುವುದರಿಂದ ಇಲ್‌ಸಿಟ್ ಟ್ರ್ಯಾಕ್ಸಿಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಸ್ವಾಮಿ, ಕೆ. ಎಸ್. ಆರ್. ಟಿ. ಸಿ. ಬಗ್ಗೆ ಕೆಲವು ಸಂದರ್ಭದಲ್ಲಿ ಟೀಕೆ ಮಾಡದೇ ವಿಧಿಯಿಲ್ಲ ಎಂದು ನನಗನ್ನಿಸುತ್ತದೆ. ಆದರೂ ಕೂಡ ಅದರ ಬಗ್ಗೆ ಸರಿ ಮಾಡತಕ್ಕಂಥ, ಅದನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಬರತಕ್ಕಂಥ ಸಲಹೆಯನ್ನು ಕೊಡದೇ ಇದ್ದರೆ ಅದು ತಪ್ಪಾಗುತ್ತದೆ ಇವತ್ತು ಸುಮಾರು 25 ಸಾವಿರ ಜನಗಳಿಗೆ ಉದ್ಯೋಗವನ್ನು ಒದಗಿಸಿದ್ದೀರಿ, ಆದರೆ ಉದ್ಯೋಗ ಒದಗಿಸುವುದರ ಜೊತೆಗೆ ನಾವು ಹಾಕಿದಂಥ ಬಂಡವಾಳಕ್ಕೆ ಸರಿಯಾದಂಥ ಆದಾಯ ಬರುತ್ತಾ ಇಲ್ಲ ಎನ್ನತಕ್ಕಂಥದ್ದನ್ನು ನಾವು ಈಗ ಕಾಣುತ್ತಾ ಇರತಕ್ಕಂಥ ದೃಶ್ಯ. ಒಂದೇ ಒಂದು ನಿದರ್ಶನ ಹೇಳಬೇಕು ಎಂದರೆ ಇವತ್ತು ಪ್ರೈವೇಟ್ ಬಸ್ಸಿನವರು ಒಂದು ವರ್ಷಕ್ಕೆ ಒಂದು ಒಂದೂವರೆ ಲಕ್ಷ ರೂಪಾಯಿಗಳನ್ನು ಮಾಡುವುದಾದರೆ, ನಮ್ಮಲ್ಲಿರುವ ಬಸ್ಸಸ್‌ನಿಂದ ನಾವು ಒಂದು ಲಕ್ಷ ರೂಪಾಯಿಗಳನ್ನು ಇವತ್ತು ಸಂಪಾದನೆ ಮಾಡುತ್ತಿದ್ದೇವೆ. ಆದರೆ ಅದು ಬಹಳ ಮಟ್ಟಿಗೆ ನಮ್ಮ ಖರ್ಚುಗಳನ್ನು ಹೋಲಿಸಿ ನೋಡಿದಾಗ ಅದು ಬಹಳ ಕಡಿಮೆಯಾಗಿದೆ ಎಂಬುದು ಮನವರಿಕೆಯಾಗುತ್ತದೆ. ಆ ದೃಷ್ಟಿಯಿಂದ ಡಿಪಾರ್ಟ್‌ಮೆಂಟಿನಲ್ಲಿರತಕ್ಕಂಥ ಪಿಲ್‌ಫರೇಜ್ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದರ ಜೊತೆಗೆ ಇವತ್ತು ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡತಕ್ಕಂಥ ಅನೇಕ ಅಧಿಕಾರಿಗಳು ಅವರು ಜವಾಬ್ದಾರಿಯಿಂದ ಕೆಲಸ ಮಾಡುತ್ತಾ ಇಲ್ಲ ಎನ್ನತಕ್ಕಂಥ ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇವತ್ತು ಒಂದು ಬಸ್ಸನ್ನು ತೆಗೆದುಕೊಂಡು ರೋಡಿನ ಮೇಲೆ ಹಾಕಿದರೆ ಆ ಬಸ್ಸಿನಲ್ಲಿ ಮೀಟರ್ ಇಲ್ಲದೇ ಓಡಿಸುತ್ತಿರತಕ್ಕಂಥದ್ದು ತಮ್ಮ ಗಮನಕ್ಕೂ ಬಂದಿರಬಹುದು. ಇದನ್ನು ನಾನು ಅನೇಕ ಸಾರಿ ಡಿವಿಜನಲ್ ಕಂಟ್ರೋಲರ್‌ರವರ ಹತ್ತಿರ ಪ್ರಸ್ತಾಪ ಮಾಡಿದ್ದೇನೆ. ಮೀಟರ್ ಇಲ್ಲದೇ ಓಡಿಸತಕ್ಕಂಥ ಸಂದರ್ಭದಲ್ಲಿ ಬಸ್ಸುಗಳು ಅಪಘಾತವಾಗತಕ್ಕಂಥ ಅನೇಕ ಸಂದರ್ಭಗಳು ಇರುವುದರಿಂದ, ಇದಕ್ಕೆ ಕಾರಣ ಬಸ್ಸಿಗೆ ಮೀಟರ್ ಇಲ್ಲದೇ ಇರುವುದರಿಂದ, ಇದು ಎಷ್ಟು ವೇಗದಲ್ಲಿ ಓಡುತ್ತಿದೆ ಎಂಬ ಪ್ರಜ್ಞೆ ಅವನಿಗೆ ಇರುವುದಿಲ್ಲ, ಇಂಥ ಸಣ್ಣ ಸಣ್ಣ ತೊಂದರೆಗಳು ಇದ್ದಾಗ್ಯೂ ಅವನ್ನು ಸರಿಪಡಿಸುವುದಿಲ್ಲ. ಇಂಥ ನಿದರ್ಶನಗಳನ್ನು ಬೇಕಾದಷ್ಟು ಕೊಡಬಹುದು. ಹಾಸನದಲ್ಲಿ ಟೈರ್‌ಗಳನ್ನು ಬಿಚ್ಚತಕ್ಕಂಥ ಪ್ರಕರಣಗಳು ನಡೆದಿವೆ. ಬಸ್ಸುಗಳನ್ನು ಹೊರಗಡೆ ತೆಗೆದುಕೊಂಡು ಹೋದಂಥ ಸಂದರ್ಭದಲ್ಲಿ ಕೆಟ್ಟು ಹೋಗಿವೆ ಎಂದು ರೋಡ್‌ನಲ್ಲಿ ನಿಲ್ಲಿಸಿ ಬಸ್ಸಿನ ಕ್ರ್ಯಾಂಕ್ ಶಾಫ್ಟ್ ಬಿಚ್ಚಿ ಮಾರಿರತಕ್ಕಂಥ ನಿದರ್ಶನಗಳು ಇವೆ ಮತ್ತು ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡತಕ್ಕಂಥವರು ಬಸ್ಸಿನ ಅನೇಕ ಬಿಡಿ ಭಾಗಗಳನ್ನು ಬಿಚ್ಚಿ, ಗುಜರಿಯಿಂದ ತಂದಂಥ ಬಿಡಿ ಭಾಗಗಳನ್ನು ಜೋಡಿಸತಕ್ಕಂಥ ಅನೇಕ ನಿದರ್ಶನಗಳು ಇವೆ. ಆದುದರಿಂದ ಇವತ್ತು ತಮಗೆ ಸಲಹೆ ಮಾಡುತ್ತಿದ್ದೇನೆ, ಡಿಪೋಗಳಲ್ಲಿ ಏನೇನು ಸಪ್ಲೈ ಮಾಡಿರುತ್ತೀರಿ, ಆ ಸ್ಪೇರ್ ಪಾರ್ಟ್ಸ್‌ಗಳ ಲೆಕ್ಕವನ್ನು ಪ್ರತಿ ತಿಂಗಳಲ್ಲೂ ಚೆಕ್ ಮಾಡತಕ್ಕಂಥ ಒಂದು ಅಧಿಕಾರವನ್ನು ಡಿವಿಜನಲ್ ಆಫೀಸರ್‌ರವರಿಗೆ ಕೊಡಬೇಕೆಂದು ಹೇಳುತ್ತೇನೆ. ಮತ್ತೆ ಮೆಕ್ಯಾನಿಕಲ್ ವರ್ಕ್‌ಶಾಪ್‌ನಲ್ಲಿ ನಿಂತಿರತಕ್ಕ ಗಾಡಿಗಳಿಗೆ ಯಾವ ಯಾವ ಸಾಮಾನುಗಳು ಹೋಗಿವೆ, ಯಾವ ಯಾವ ಸಾಮಾನುಗಳನ್ನು ಹಾಕಬೇಕಾಗಿದೆ ಎಂಬುದನ್ನೆಲ್ಲಾ ವೆರಿಫೈ ಮಾಡಿದ್ದರೆ ನಾವು ಅನೇಕ ಕಷ್ಟ ನಷ್ಟಗಳಿಗೆ ಒಳಗಾಗಬೇಕಾಗುತ್ತದೆ. ಮತ್ತು ಡಿಪಾರ್ಟ್‌ಮೆಂಟಿನಲ್ಲಿ ಹೇಳಿ ಮಂತಲಿ ಸೆಡ್ಯೂಲ್‌ನ್ನು ಅವರು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಅನೇಕ ಸಂದರ್ಭದಲ್ಲಿ ಬಸ್ಸಿನಲ್ಲಿ ಪ್ರಯಾಣ ಮಾಡತಕ್ಕಂಥ ಕಾಲದಲ್ಲಿ ಆಯಿಲ್ ಇಲ್ಲದೇ ಇಂಜಿನ್ ಹೀಟ್ ಆಗಿ ಸಂಪೂರ್ಣವಾಗಿ ಪ್ಯಾಸಂಜರ್ ಮೇಲೆ ನೀರು ಹಾರಿರತಕ್ಕಂಥ ನಿದರ್ಶನಗಳನ್ನು ನೋಡಿದ್ದೇನೆ. ಆದುದರಿಂದ ಮಂತ್ಲಿ ವೀಕಲಿ ಶೆಡ್ಯೂಲ್‌ನ್ನು ಸರಿಯಾಗಿ ಪಾಲನೆ ಮಾಡತಕ್ಕಂಥ ಸೂಚನೆಯನ್ನು ಕೊಡಬೇಕು ಅದನ್ನು ಸರಿಯಾಗಿ ಪಾಲನೆ ಮಾಡದೇ ಇದ್ದಂಥ ಸಂದರ್ಭದಲ್ಲಿ ಯಾರು ಅದಕ್ಕೆ ಜವಾಬ್ದಾರರು ಎನ್ನತಕ್ಕಂಥದ್ದನ್ನು ಕಂಡುಹಿಡಿಯಬೇಕು ಮತ್ತು ಅವರಿಗೆ ಸರಿಯಾದ ಶಿಕ್ಷೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ, ಹಿಂದೆ ಮಾನ್ಯ ಸದಸ್ಯರಾದ ಸತ್ಯನಾರಾಯಣರವರು ಮಾತನಾಡತಕ್ಕಂಥ ಕಾಲದಲ್ಲಿ ಒಂದು ಮಾತನ್ನು ಹೇಳಿದರು, ಅದು ಏನೆಂದರೆ ಕಂಡಕ್ಟರ್‌ಗಳಿಗೆ ದುಡ್ಡು ಕೈಗೆ ಸಿಕ್ಕದಹಾಗೆ ಮಾಡಬೇಕು ಎನ್ನುವ ಸಲಹೆಯನ್ನು ಮಾಡಿದರು, ಅದನ್ನು ಒತ್ತಿ ಹೇಳಬೇಕಾಗುತ್ತದೆ ಏತಕ್ಕೆ ಎಂದರೆ ನಿಜವಾಗಿಯೂ ಬಸ್ಸುಗಳು ಒಂದೊಂದ ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ಅನೇಕ ಹೋಬಳಿಗಳನ್ನು ದಾಟಿ ಹೋಗುತ್ತದೆ, ಅಂಥ ಸ್ಥಳಗಳಲ್ಲಿ ಪ್ರೈವೇಟ್ ಬಸ್ಸಿನವರು ಪರ್ಸೆಂಟೇಜ್ ಬೇಸಿಸ್‌ನ ಮೇಲೆ ಕಮೀಷನ್ ಕೊಟ್ಟುಕೊಂಡು ಯಾವ ರೀತಿ ಏಜೆನ್ಸಿಯನ್ನು ಅಪಾಯಿಂಟ್ ಮಾಡಿರುತ್ತಾರೋ ಆ ರೀತಿ ಮಾಡಿದರೆ ಇದರಿಂದ ಕಂಡಕ್ಟರ್ ಟಿಕೇಟಿನಿಂದ ಹಣವನ್ನು ಕಲೆಕ್ಟ್ ಮಾಡತಕ್ಕಂಥದ್ದನ್ನು ನಾವು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಬಯಸುತ್ತೇನೆ.

ಕೊನೆಯದಾಗಿ, ಹಾಸಿಂಗ್ ಬಗ್ಗೆ ಹೇಳುವುದಾದರೆ ತಾವು ಹಾಕಿರತಕ್ಕಂಥ ಸ್ಕೀಮ್‌ನ್ನು ನಾವು ಸಂಪೂರ್ಣವಾಗಿ ಒಪ್ಪುವುದಾದರೂ ಕೂಡ ಅದರಲ್ಲಿ ಅನೇಕ ಬದಲಾವಣೆಗಳು ಆಗಬೇಕಾಗುತ್ತದೆ. ನೀವು ಸೈಟ್‌ಗಳನ್ನು, ವಾಸಕ್ಕೆ ಮನೆಗಳನ್ನು ಹಂಚಿದ್ದೀರಿ, ಆದುದರಿಂದ ಎರಡು ಭಾಗಗಳಾಗಿ ಮಾಡಬೇಕಾಗುತ್ತದೆ. ನೀವು ವಾಸಕ್ಕೆ ಮನೆಗಳನ್ನು ಕೊಡುವಾಗ ಅವರಿಂದ 50 ಪರ್ಸೆಂಟ್ ಕಾಸ್ಟನ್ನು ತೆಗೆದುಕೊಂಡರೆ ಅದರಿಂದ ಸರ್ಕಾರಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಸರ್ಕಾರಕ್ಕೆ ದುಡ್ಡು ಕೂಡ ಬಹುಬೇಗ ಬರುತ್ತದೆಂದು ಈ ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಯಾರಿಗೆ ಸೈಟನ್ನು ಕೊಡುತ್ತೀರಿ ಅದು ಬೇರೆ ಸ್ಕೀಮ್ ಆಗಬೇಕು ಯಾರಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ ಅದು ಬೇರೆ ಸ್ಕೀಮ್ ಆಗಬೇಕು. ಈ ರೀತಿ ಎರಡು ಸ್ಕೀಮ್‌ಗಳನ್ನು ಮಾಡುವುದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ ಮತ್ತು ಖರ್ಚು ನೀವು ಮಾಡಿದಂಥ ಹಣ ಕೂಡ ಬಹುಬೇಗ ಸರ್ಕಾರಕ್ಕೆ ವಾಪಸ್ಸು ಬರುತ್ತದೆ. ಇವತ್ತು ಅನೇಕ ಜನ ಮನೆಗಳು ಇಲ್ಲದೇ ಇರತಕ್ಕಂಥವರು ಸಂಪೂರ್ಣವಾಗಿ ಹಣವನ್ನು ಕಟ್ಟಿಕೊಂಡು ಕೆಲಸ ಮಾಡುವುದಕ್ಕೆ ಆಗದೇ ಇರತಕ್ಕಂಥವರಿಗೆ, ಈ ಯೋಜನೆಯಂತೆ ಮಾಡಿದರೆ, ನಮ್ಮ ಯೋಜನೆಯೂ ಸಕ್ಸೆಸ್ ಆಗುತ್ತದೆ ಮತ್ತು ಅವರಿಗೂ ಮನೆ ಸಿಕ್ಕಿದ ಹಾಗೆ ಆಗುತ್ತದೆ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಸಾರಿಗೆ ಸಚಿವರು ಏನು ತಮ್ಮ ಬೇಡಿಕೆಯನ್ನು ಮಂಡಿಸಿದ್ದಾರೆ ಅದನ್ನು ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ.

ಮೊಟ್ಟಮೊದಲನೆಯದಾಗಿ ನಾನು ವಸತಿ ಯೋಜನೆ ಕುರಿತು ಮಾತನಾಡಲು ಅಪೇಕ್ಷೆ ಪಡುತ್ತೇನೆ. ಮೊದಲನೆಯದಾಗಿ ನಿವೇಶನ ಇಲ್ಲದೇ ಇರತಕ್ಕಂಥಾವರಿಗೆ ನಿವೇಶನವನ್ನು ಕೊಡತಕ್ಕಂಥಾದ್ದು, ಮನೆ ಇಲ್ಲದೇ ಇರತಕ್ಕಂಥವರಿಗೆ ಮನೆಯನ್ನು ಕಟ್ಟಿಸಿಕೊಡತಕ್ಕಂಥ ಯೋಜನೆಯನ್ನು ಕರ್ನಾಟಕದಲ್ಲಿ ಕಾರ್ಯಗತವಾಗುವ ಹಾಗೆ ಬಹುಪಾಲು ಶ್ರಮಿಸಿದಂಥ ಮಾಜಿ ಸಚಿವರಾದ ಶ್ರೀಮಾನ್ ಬಿ. ಬಸವಲಿಂಗಪ್ಪನವರನ್ನು ಅಭಿನಂದಿಸಬೇಕಾದುದು ನನ್ನ ಪ್ರಥಮ ಕರ್ತವ್ಯ. ಕಾರಣ ನನಗೆ ತಿಳಿದಂತೆ ಭಾರತದ ಯಾವ ರಾಜ್ಯದಲ್ಲೂ ಕೂಡ ಇಷ್ಟು ಯಶಸ್ವಿಯಾಗಿ ಕೆಲಸವನ್ನು ಮಾಡಿಲ್ಲ ಎಂದು ಕೇಳಿದ್ದೇನೆ. ಆದರೆ ಇದು ಸಂಪೂರ್ಣವಾಗಿ ಯಶಸ್ವಿಯಾಗುವಂತೆ ಈ ಸರ್ಕಾರ ಇನ್ನುಮುಂದಾದರೂ ನಡಿಸಿಕೊಂಡು ಹೋಗುವಂತೆ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಕೆಲವು ಕೆಲಸಗಳು ಅರ್ಧಕ್ಕೇ ನಿಂತು ಹೋಗಿದೆ. ಬಂದಂಥ ದುಡ್ಡನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳದೆ ಆ ಹಣ ಹಾಗೆಯೇ ಉಳಿಯುವುದಕ್ಕೆ ಯಾರು ಕಾರಣರು, ಯಾವುದು ಕಾರಣವೋ ಗೊತ್ತಿಲ್ಲ. ಆದರೆ ಇಂದಿನ ಸಾರಿಗೆ ಸಚಿವರಾದ ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರು ಇನ್ನು ಮುಂದಾದರೂ ಕೂಡ ಇದನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವಂತೆ ಮಾಡಬೇಕು ಎಂದು ಮೊದಲು ಪ್ರಾರ್ಥಿಸಿ ಮುಂದಿನ ಎರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ.

ಸ್ವಾಮಿ, ನಾವೆಲ್ಲಾ ಹಳ್ಳಿಗಳಿಂದ ಬಂದಿರತಕ್ಕಂಥಾವರು. ಆದರೆ ಹಳ್ಳಿಗಳಲ್ಲಿ ಈವೊತ್ತಿಗೂ ಕೂಡ ನೆಲ ಇಲ್ಲದೇ ಇರತಕ್ಕಂಥಾವರು ನೂರರಲ್ಲಿ 60ಕ್ಕೆ ಕಡಿಮೆ ಇಲ್ಲದೆ ಇರುವ ಜನ ಇದ್ದಾರೆ ಅವರಿಗೆ ನೆಲ ಇಲ್ಲ, ಹೇಳುವವರೂ ಇಲ್ಲ, ಕೇಳುವವರೂ ಇಲ್ಲ ಅಂಥಾವರು ಹಳ್ಳಿಗಳಲ್ಲಿ ಇದ್ದಾರೆ. ಅವರಿಗೆ ಒಂದು ನೆಲೆಯನ್ನು ಒದಗಿಸಬೇಕು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ನನಗೆ ಚೆನ್ನಾಗಿ ಗೊತ್ತಿರುವ

(ಶ್ರೀ ಕೋಣಂದೂರು ಲಿಂಗಪ್ಪ)

ಹಾಗೆ ಸರ್ಕಾರದವರು ಕೊಡತಕ್ಕಂಥ ಒಂದೊಂದು ನಿವೇಶನಕ್ಕೆ ಆ ನಿವೇಶನದಲ್ಲಿ ಇರತಕ್ಕಂಥ ಏರುಪೇರುಗಳನ್ನು ಸರಿಮಾಡುವುದಕ್ಕೆ 150 ರೂಪಾಯಿಗಳನ್ನು ಸರ್ಕಾರದವರೇ ಕೊಡುತ್ತಿದ್ದಾರೆ ಆದರೆ ಕೆಲವು ಕಡೆ ಅಧಿಕಾರಿಗಳು ಏನು ಮಾಡಿದ್ದಾರೆ ಎಂದರೆ ಸರ್ಕಾರದವರು ಈ ಒಂದೊಂದು ನಿವೇಶನಕ್ಕೆ ಕೊಡುವ 150 ರೂಪಾಯಿಗಳನ್ನು ಸಾದ್ವಿಯನ್ನು ಅವರಿಗೆ ತಿಳಿಸದೇ ಆ ನಿವೇಶನದವರಿಂದಲೇ ಸೈಟು ಕೊಡುತ್ತೇವೆ ಎಂದು 10—15—25 ರೂಪಾಯಿಗಳನ್ನು ತೆಗೆದುಕೊಂಡು ಅವರಿಗೆ ಕೊಟ್ಟಿದ್ದಾರೆ. ಇಂಥಾದ್ದೂ ಕೂಡ ಕೆಲವು ಇವೆ. ಆದುದರಿಂದ ನಾನು ಹೇಳುವುದು ಇಂಥಾ ಲೋಪದೋಷಗಳನ್ನು ಕೊಣಗಾಣಿಸಬೇಕು ಎಂದು ಮತ್ತು ಈ ನಿವೇಶನವನ್ನು ಕೊಡುವುದರ ಜೊತೆಗೆ ನೀವು ಯಾವ ಉದ್ದೇಶಕ್ಕೆ ಕೊಡುತ್ತೀರೋ, ಅದರ ಜೊತೆಗೆ ಅವರಿಗೆ ಮನೆಯನ್ನು ಕಟ್ಟಿಕೊಳ್ಳಲು ಹಣವನ್ನು ತಕ್ಷಣ ಕೊಟ್ಟು ಆ ಮನೆ ಬೇಗನೆ ನಿರ್ಮಾಣ ಮಾಡುವ ಹಾಗೆ ಮಾಡಬೇಕು. ಆದರೆ ಎಲ್ಲಾ ಕಡೆಯೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಇದರ ಬಗ್ಗೆ ಯಾರೂ ಹೇಳುವ ಹಾಗೆ ಇಲ್ಲ. ಈವೊತ್ತು ಬೆಂಗಳೂರು ಪಟ್ಟಣದಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸೈಟುಗಳನ್ನು ಕೊಡುವುದೇ ಆಗಲಿ ಅಥವಾ ಹಳ್ಳಿಯಲ್ಲಿ ಸೈಟುಗಳನ್ನು ಕೊಡುವುದೇ ಆಗಲಿ ಮಾಡಿದರೆ ಅವರು ಯಾವ ಉದ್ದೇಶಕ್ಕೆ ಕೊಟ್ಟಿರುತ್ತಾರೋ ಆ ಉದ್ದೇಶ ಸಫಲವಾಗದೆ ಅದರಲ್ಲಿ ದುರುಪಯೋಗ ನಡೆದಿದ್ದರೆ ಅವರ ಮೇಲೆ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ? ಉದಾಹರಣೆಗೆ ನಿಮ್ಮ ಸಹೋದ್ಯೋಗಿಗಳಾದ ಶ್ರೀಮಾನ್ ಚೆನ್ನಬಸಪ್ಪನವರಿಗೆ ಬೆಂಗಳೂರಿನ ಜಯನಗರದಲ್ಲಿ ಮನೆಕಟ್ಟಿಕೊಳ್ಳುವುದಕ್ಕೆ ಒಂದು ಜಾಗ ಕೊಟ್ಟಿದ್ದೀರಿ. ಅವರು ಅದರಲ್ಲಿ 4 ಮಹಡಿ ಮನೆ ಕಟ್ಟುತ್ತಿದ್ದಾರೆ. A building on site No. 55-J VIII Block, Jayanagar is being conrtructed by the Partnership firm Nandi Enterprises, registered on 24th July 1973. Sri H. M. Channabasappa is the Managing partner of the firm. ಹೀಗೆ ಅವರಿಗೆ ಕೊಟ್ಟ ಜಾಗವನ್ನು ಆ ಫರ್ಮ್‌ಗೆ ಪರಭಾರೆ ಮಾಡಿ ಇಂತಹ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಮತ್ತು ವಾಸಕ್ಕೆ ಕಟ್ಟತಕ್ಕಂಥ ಮನೆಯನ್ನು ಒಂದು ವ್ಯಾಪಾರೀ ಕೇಂದ್ರಕ್ಕೆ ಕೊಡುವುದಾದರೆ ಇಷ್ಟು ದುರುಪಯೋಗ ನಿಮ್ಮ ಸಚಿವ ಸಂಪುಟದಲ್ಲೇ ನಡೆದರೆ ಇನ್ನೂ ಕೇಳುವವರು ಯಾರು? ಮತ್ತು ಫರ್ಮಿನವರೇ ಹೇಳಿರುವ ಪ್ರಕಾರ The ground floor of the building is designed for the Syndicate Bank. First floor, second floor and third floor are designed for guest houses of industrial concerns ಇತ್ಯಾದಿ, ಇತ್ಯಾದಿ ಇವೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ, ಸಾರ್ವಜನಿಕರಿಗೂ ಇದು ಮನವರಿಕೆಯಾಗಿದೆ. ಆದುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅವರಿಗೆ ಯಾವ ಉದ್ದೇಶಕ್ಕೆ ಆ ನಿವೇಶನವನ್ನು ಕೊಟ್ಟಿದ್ದಾರೋ ಆ ಉದ್ದೇಶ ಸಫಲವಾಗದಿದ್ದರೆ, ಆ ಉದ್ದೇಶವನ್ನು ಈಡೇರಿಸದಿದ್ದರೆ ಅಂತಹ ಸೈಟುಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ತಮ್ಮ ಸಚಿವ ಸಂಪುಟದಲ್ಲೇ ಇರುವ ಒಬ್ಬ ಸಚಿವರು ಈ ಒಂದು ನಿಯಮವನ್ನು ಉಲ್ಲಂಘನೆ ಮಾಡಿರುವುದಕ್ಕೆ ತಾವು ಯಾವ ಕಾರ್ಯಕ್ರಮ ಕೈಗೊಳ್ಳುತ್ತೀರಿ ? ಇದರ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು ಎಂದು ನಾನು ಆಗ್ರಹಪೂರ್ವಕವಾಗಿ ಕೇಳುತ್ತೇನೆ.

ಇನ್ನು ನೇರವಾಗಿ ಮೋಟಾರ್ ವ್ಯವಹಾರದ ಬಗ್ಗೆ ಹೇಳಲಿಕ್ಕೆ ಬರುತ್ತೇನೆ. ಹಿಂದೆ ಸಾರಿಗೆ ಸಚಿವರಾಗಿದ್ದಂಥ ಶ್ರೀಮಾನ್ ಅಜೀಜ್‌ಸೇಟ್‌ರವರು ಎರಡು ವರ್ಷ ಮೋಟಾರ್ ಓಡಿಸಿದರು. ಹಿಂದೆ ಒಂದು ಸಾರಿ ನಾನು ಈ ಸಭೆಯಲ್ಲಿ ಹೇಳಿದ್ದೇನೆಂದರೆ ಅವರು ಮೋಟಾರ್‌ನಲ್ಲಿ ಕೂರುವವರ ಮೈಮೇಲೆ ಅವರು ಇಲ್ಲಿಂದ ಹೋಗಿ ಎಲ್ಲಿ ಇಳಿಯುತ್ತಾರೋ ಅಲ್ಲಿ ನೋಡಿದರೆ ಅವರ ಚರ್ಮ ಮಾತ್ರ ಉಳಿಯಲಿಕ್ಕೆ ಸಾಧ್ಯ ಇದೆ ಎಂದು. ಏತಕ್ಕೆಂದರೆ ಆ ಬಸ್ಸಿನಲ್ಲಿರತಕ್ಕಂಥ ತಿಗಣೆಗಳು ಕೂರುವವರ ಮೈಮೇಲೆ ಹೋಗಿ ಆ ಮನುಷ್ಯನ ರಕ್ತವನ್ನೆಲ್ಲಾ ಹೀರಿಬಿಡುತ್ತವೆ. ಬೆಂಗಳೂರಿನಿಂದ ಗುಲ್ಬರ್ಗಾಕ್ಕೇ ಹೋಗಲಿ, ರಾಯಚೂರಿಗೇ ಹೋಗಲಿ, ಬೀದರಿಗೆ ಹೋಗಲಿ ಅಥವಾ ಬೆಳಗಾಂಗೇ ಹೋಗಲಿ ಅಥವಾ ಆ ಭಾಗಗಳಿಂದ ಇಲ್ಲಿಗೆ ಬರಲಿ ರಕ್ತ ಮಾಂಸ ತುಂಬಿ ಕೊಂಡು ಬಸ್‌ನಲ್ಲಿ ಕೂತಿರತಕ್ಕಂಥ ಒಬ್ಬ ಮನುಷ್ಯ ಬಂದು ಇಳಿದಾಗ ನೋಡಿದರೆ ಅವನ ಮೈಮೇಲೆ ಅಸ್ತಿಪಂಜರ ಮಾತ್ರ ಇರುತ್ತದೆ. ಯಾವ ಕಾಲದಲ್ಲಿ ಆ ಬಸ್ಸಿಗೆ ಬಣ್ಣ ಹಚ್ಚಿರುತ್ತಾರೋ ಅದು ಹಾಗೆಯೇ ಉಳಿದುಕೊಂಡು ಬಂದಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಅವರು ರವಿ ಕಾಣದ್ದನ್ನು ಕವಿ ಕಂಡ ಅಂತ ಉತ್ಪ್ರೇಕ್ಷೆಮಾಡಿ ಹೇಳುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಆ ಬಸ್ಸುಗಳಿಗೆ ಹೊಸ ಹೊಸ ನಮೂನೆ ಬಣ್ಣ ಹಚ್ಚಿದ್ದಾರೆ. ಆದರೆ ನಾನು ಹಿಂದೆ ಒಂದು ಸಾರಿ ಎಷ್ಟು ಕಂಟ್ರಾಕ್ಟ್ ಬಸ್ಸುಗಳಿಗೆ ಪರ್ಮಿಟ್ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ 8 ಸಾವಿರ ಬಸ್ಸುಗಳಿಗೆ ಪರ್ಮಿಟ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ನಾನು ಹೇಳುವುದು ಪ್ರೈವೇಟ್‌ನವರಿಗೆ ಬೇಕಾದ್ದೆಲ್ಲಾ ಸಿಗುತ್ತದೆ ಆದರೆ ಸರ್ಕಾರದವರಿಗೇ ಏನೂ ಸಿಗುವುದಿಲ್ಲವೇ ? ಪ್ರೈವೇಟ್‌ನವರು 8 ಸಾವಿರ ಬಸ್ಸುಗಳನ್ನು ಏನು ಓಡಿಸುತ್ತಿದ್ದಾರೆ ಅವರಿಗೆ ಬೇಕಾದ್ದೆಲ್ಲಾ ಸಿಕ್ಕಿ ಲಾಭವನ್ನು ಗಳಿಸುವಾಗ ಸರ್ಕಾರದವರು ಓಡಿಸತಕ್ಕಂಥ ಬಸ್ಸುಗಳಿಗೆ ಏಕೆ ಲಾಭ ಸಿಗುವುದಿಲ್ಲ ? ಆದುದರಿಂದ ನಾನು ಹೇಳುವುದು ಸರ್ಕಾರದವರು ಈ ಇಲಾಖೆಯನ್ನು ದಕ್ಷತೆಯಿಂದ ನಡೆಸಬೇಕು ಮತ್ತು ಇದರಲ್ಲಿ ಲಾಭಗಳಿಸಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಕೆಲಸಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಈವೊತ್ತು ರಾಜ್ಯಕ್ಕೆ ವರಮಾನ ಬರತಕ್ಕ ಲಾರಿ ಟ್ರಾನ್ಸ್‌ಪೋರ್ಟ್ ಏನು ಇದೆ ಅದಕ್ಕೆ ಬೇಕಾದಂಥ ಖಾಸಿ ಇತರ ಸೌಲಭ್ಯಗಳು ಪ್ರೈವೇಟ್‌ನವರಿಗೇ ಸಿಗುವಾಗ ಸರ್ಕಾರದವರಿಗೆ ಸಿಗುವುದಿಲ್ಲವೇ ? ಪ್ರೈವೇಟ್‌ನವರು ಇದರಿಂದ ಹೆಚ್ಚು ಲಾಭ ಗಳಿಸುವಾಗ ಸರ್ಕಾರದವರೇ ಈ ಇಂಟರ್‌ಸ್ಟೇಟ್ ಟ್ರಾನ್ಸ್‌ಪೋರ್ಟ್‌ನ್ನು ಏತಕ್ಕೆ ಓಪನ್ ಮಾಡಬಾರದು. ಇದರಿಂದ ಲಕ್ಷಾಂತರ ರೂಪಾಯಿ ಅಲ್ಲ ಕೋಟ್ಯಾಂತರ ರೂಪಾಯಿ ಲಾಭ ಪ್ರೈವೇಟ್‌ನವರು ಮಾಡುವಾಗ ತಾವೇ ಇದನ್ನು ಏತಕ್ಕೆ ಮಾಡಬಾರದು ? ಇದನ್ನು ಪ್ರೈವೇಟ್‌ನವರಿಗೆ ಏತಕ್ಕೆ ಕೊಟ್ಟಿದ್ದೀರಿ ? ಪ್ರೈವೇಟ್ ಲಾರಿಗಳಲ್ಲಿ ಸಾಮಾನುಗಳನ್ನು ಸಾಗಿಸಿದರೆ ಏನಾಗುತ್ತದೆ ಎನ್ನುವುದನ್ನು ಶ್ರೀಮಾನ್ ಮಂಜುನಾಥ್‌ರವರು ಹೇಳಿದರು ; ಅವರು ಒಂದು ಸಾರಿಪ್ರೈವೇಟ್ ಲಾರಿಯಲ್ಲಿ ತೆಂಗಿನಕಾಯಿಯನ್ನು ಸಾಗಿಸುವಾಗ ಮಾರ್ಗ ಮಧ್ಯದಲ್ಲಿ ಕಂಡಕ್ಟರ್, ಡ್ರೈವರ್ ಮತ್ತು ಆ ಲಾರಿಯ ನಂಬರ್ ಪ್ಲೇಟ್ ಇವು ಮೂರನ್ನೂ ಛೇಂಜ್ ಮಾಡಿಬಿಟ್ಟು ಗುರುತು ಸಿಕ್ಕದೆ40 ಸಾವಿರ ರೂಪಾಯಿಯ ತೆಂಗಿನಕಾಯಿಯು ಪಾಲೇ ಹೋಯಿತು ಎಂದು. ಇವರಿಂದ ಪ್ರೈವೇಟ್ ಲಾರಿಯಲ್ಲಿ ಸಾಮಾನುಗಳನ್ನು ಸಾಗಿಸುವುದಕ್ಕೆ ಜನರಿಗೆ ನಂಬಿಕೆಯೇ ಇರುವುದಿಲ್ಲ. ಆದುದರಿಂದ ಸರ್ಕಾರದವರು ಈ ಬಗ್ಗೆ ಒಂದು ಯೋಜನೆಯನ್ನು ಹಾಕಿ ಈ ಲಾರಿ ಟ್ರಾನ್ಸ್‌ಪೋರ್ಟ್‌ನ್ನು ನೀವೇ ತೆಗೆದುಕೊಂಡರೆ ಒಂದು ಅತಿ ಹೆಚ್ಚಿನ ಲಾಭ ಬರಬಹುದು ಎಂದು ನಿರೀಕ್ಷಣೆ ಮಾಡಬಹುದು. ಅದನ್ನು ಸರ್ಕಾರದವರು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ರಾಷ್ಟ್ರೀಕರಣದ ಬಗ್ಗೆ ಒಂದು ಅಂಶ ಹೇಳುತ್ತೇನೆ. ನೀವು ರಾಷ್ಟ್ರೀಕರಣ ಮಾಡುತ್ತೇವೆ, ರಾಷ್ಟ್ರೀಕರಣ ಮಾಡುತ್ತೇವೆ ಎಂದು ಖಾಸಗೀ ಮಾಲೀಕರನ್ನು ಹೆದರಿಸುತ್ತಿದ್ದೀರಿ. ಅವರನ್ನು ಯಾವ ಸಮಯದಲ್ಲಿ ಹೆದರಿಸುತ್ತೀರಿ ಎನ್ನುವುದೂ ಕೂಡ ತಮಗೆ ಗೊತ್ತಿದೆ. ಕಾಂಗ್ರೆಸ್ಸಿನವರು ಏನು ಮಾಡುತ್ತಾರೆ ಎಂದರೆ ಚುನಾವಣೆ ಸಮಯದಲ್ಲಿ ಈ ರೀತಿ ಘೋಷಣೆ ಮಾಡುತ್ತಾರೆ. ಏತಕ್ಕೆಂದರೆ ಅವರಿಂದ ಒಂದು ಫಂಡ್ ಸಿಕ್ಕುತ್ತದೆ ಎಂದು. ಚುನಾವಣೆ 3 ತಿಂಗಳು 6 ತಿಂಗಳು ಇರುವಾಗ ಇವರು ಏನು ಮಾಡಿದರು ಎಂದರೆ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇದನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂದು ಆ ಬಸ್ಸಿನ ಖಾಸಗೀ ಮಾಲೀಕರನ್ನು ಹೆದರಿಸಿದರು.

4-30 P.M.

ಅಂದಕೂಡಲೇ ಅವರು ಎಲ್ಲರೂ ಸೇರಿ, ಒಟ್ಟು ಮಾಡಿಕೊಂಡು ಬೆಂಗಳೂರಿಗೆ ಬಂದುಬಿಡುತ್ತಾರೆ. 10 ಲಕ್ಷ ತಗೆದುಕೊಳ್ಳಿ, 50 ಲಕ್ಷ ತೆಗೆದುಕೊಳ್ಳಿ, ಎಂದರೆ ಇವರು ಇಲ್ಲ ಇಲ್ಲ ಆ ಲೈನನ್ನು ನಾವು ನ್ಯಾಷನಲೈಸ್ ಮಾಡುವುದೇ ಸರಿ ಎಂದು ಹೇಳುತ್ತಾರೆ. ಇದು ಇವರ ಒಂದು ಘೋಷಣೆಯಾಯಿತು. ಈ ಕಾಂಗ್ರೆಸ್ ಬಿಸಿನೆಸ ಏನು ಇದೆ, ಅದನ್ನು ಮಾನ್ಯ ರಂಗನಾಥ್ ಅವರಾದರೂ ಕೈಬಿಟ್ಟು ನ್ಯಾಯವಾಗಿ ನಿಜವಾಗಿಯೂ ಬಸ್ ಲೈನ್‌ಗಳನ್ನು ರಾಷ್ಟ್ರೀಕರಣ ಮಾಡಬೇಕು. ಈಗ ನಮ್ಮ ಬಸ್ಸುಗಳಲ್ಲಿರತಕ್ಕ ಡ್ರೈವರ್ಸ್‌ಗಳ ಮತ್ತು ಕಂಡಕ್ಟರ್ಸ್‌ಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಖಾಸಗಿ ಬಸ್ಸುಗಳಲ್ಲಿರತಕ್ಕ ಡ್ರೈವರ್ಸ್ ಮತ್ತು ಕಂಡಕ್ಟರ್ಸ್, ಕ್ಲೀನರ್ಸ್ ಇವರ ಒಂದು ದಾರುಣ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಬಿಚ್ಛಿಸುತ್ತೇನೆ. ಖಾಸಗೀ ಬಸ್ಸುಗಳಲ್ಲಿ ಕೆಲಸ ಮಾಡತಕ್ಕನೌಕರರು ಯಾರು ಯಾರು ಇದ್ದಾರೆ ಅವರನ್ನು ಹೇಳುವವರು ಇಲ್ಲ, ಕೇಳುವವರೂ ಇಲ್ಲ. ನನಗೆ ಗೊತ್ತಿರುವ ಒಂದು ಕಂಪನಿಯ ಹೆಸರನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆ ಕಂಪನಿಯಲ್ಲಿ ಕೆಲಸ ಮಾಡತಕ್ಕವರು, 30-40 ವರ್ಷಗಳ ಹಿಂದೆ ಕಂಪನಿ ಹುಟ್ಟು

(ಶ್ರೀ ಕೋಣಂದೂರು ಲಿಂಗಪ್ಪ)

ವುದಕ್ಕೆ ಮುಂಚೆ ಡ್ರೈವರ್ಸ್ ಆಗಿದ್ದವರು ಇವತ್ತೂ ಡ್ರೈವರ್ಸ್ ಆಗಿದ್ದಾರೆ, ಇವತ್ತು ಮಾಲೀಕರು ಇವರನ್ನು ಇಂಥ ಲೈನ್‌ಗೆ ಹೋಗಬೇಕು ಎಂದರೆ, ಅಂಥ ಲೈನ್‌ಗೆ ಹೋಗಬೇಕು, ಅವರು ಏನಾದರೂ 7-8 ದಿವಸ ರಜೆ ತೆಗೆದುಕೊಂಡರೆ, ಮೂರನೆಯ ದಿವಸ ಕೆಲಸಕ್ಕೆ ಬರಬೇಕು ಎಂದು ಹೇಳುತ್ತಾರೆ. ಅವರು ಹೀಗೆಯೇ ಸ್ಥಿತಿ ಬಂದಿದೆ. ಅವರನ್ನು ಟೆಂಪರರಿ ಬೇಸಿಸ್ ಮೇಲೆ ಇಟ್ಟು ಕೊಂಡು, ಅವರಿಗೆ ಯಾವರೀತಿಯ ಸೌಲಭ್ಯಗಳೂ ಇಲ್ಲದಿರುವ ಹಾಗೆ ಮಾಡಿ, ಇವತ್ತಿನವರಿಗೂ ಅವರು ತ್ರಿಶಂಕು ಸ್ವರ್ಗದಲ್ಲಿ ಬದುಕುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಖಾಸಗೀ ಬಸ್ಸು ಗಳಲ್ಲಿ ಕೆಲಸಮಾಡತಕ್ಕವರಿಗೆ ಏನಾದರೂ ಭರವಸೆ, ಗ್ಯಾರಂಟಿ ಸಿಕ್ಕುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು. ಬಸ್ಸುಗಳ ಮಾಲೀಕರು ಒಂದು ರಿಜಿಸ್ಟರನ್ನು ಮೇಂಟೇನ್ ಮಾಡುವ ಹಾಗೆ ಮಾಡಬೇಕು.

ಶ್ರೀ ಕೆ. ಎನ್. ವೀರಪ್ಪಗೌಡ.—ಅವರದೊಂದು ಟ್ರೇಡ್ ಯೂನಿಯನ್ ಅನ್ನು ಆರ್ಗನೈಸ್ ಮಾಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಡ್ರೈವರ್ಸ್ ಕಂಡಕ್ಟರ್ಸ್, ಯೂನಿಯನ್ ಮಾಡೋಣ ಅಂದಕೂಡಲೇ ತಕ್ಷಣ ಬಂದು ನೀವು ಕಾಂಗ್ರೆಸ್ ಮಾಡುತ್ತೀರಿ. ನಿಮ್ಮ ಊರಿನಲ್ಲಿಯೇ ಅದನ್ನು ಶುರು ಮಾಡಬೇಕು ಎಂದಿದ್ದೇವೆ, ಒಟ್ಟಿನಲ್ಲಿ ಖಾಸಗೀ ಬಸ್ಸುಗಳಲ್ಲಿ ಕೆಲಸ ಮಾಡತಕ್ಕವರಿಗೆ, ಅವರ ಕೆಲಸಕ್ಕೆ ಮತ್ತು ಮುಂದಿನ ಭವಿಷ್ಯಕ್ಕೆ ಏನಾದರೂ ಒಂದು ಸವಲತ್ತನ್ನು ಒದಗಿಸಿಕೊಡು ಬೇಕು ಎಂದು ಹೇಳುತ್ತೇನೆ. ಮುಖ್ಯವಾಗಿ, ಇವತ್ತು ಬಸ್‌ಸ್ಟಾಂಡಗಳು ಏನು ಇವೆ, ಇಲ್ಲ, ಎಲ್ಲಾ ಕಡೆಗಳಲ್ಲಿಯೂ ಶೌಚ ಗೃಹಗಳನ್ನು ತಾವು ಏರ್ಪಾಡು ಮಾಡಬೇಕು. ದೂರ ಪ್ರಯಾಣ ಮಾಡುವ ಹೆಂಗಸರು ಮಕ್ಕಳಿಗೆ ಶೌಚಗೃಹಗಳನ್ನು ಬೇಕಾಗುತ್ತದೆ. ಒಂದೊಂದು ಬಸ್‌ಸ್ಟಾಂಡಿ ನಲ್ಲಿ ಗಂಟೆಗಟ್ಟಲೆ ಕಾಯಬೇಕಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಕಾಯದ ಹಾಗೆ ಮಾಡಿವರೆ ?

ಶ್ರೀ ಕೋಣಂದೂರು ಲಿಂಗಪ್ಪ.—ಮಾಡಿದರೆ ಒಳ್ಳೆಯದು, ಏಕೆಂದರೆ, ದೂರ ಪ್ರಯಾಣ ಮಾಡುವವರು, ಮಧ್ಯದಲ್ಲಿ ಶೌಚ ಗೃಹಗಳನ್ನು ಉಪಯೋಗಿಸಬೇಕಾಗುತ್ತದೆ. ಅಲ್ಲದೆ ಬೆಳಿಗ್ಗೆ ಒಂದೊಂದು ಊರಿಗೆ ಪ್ರಯಾಣ ಹೊರಟರೆ, ತಲುಪುವುದು ಮೂರನೆಯದಿವಸವೇ. ಆದ್ದರಿಂದ ತಾವು ಈ ಶೌಚಗೃಹಗಳನ್ನು ಅವಶ್ಯವಿದ್ದ ಕಡೆಯಲ್ಲಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬಸ್ಸುಗಳಲ್ಲಿ ಓವರ್‌ಲೋಡ್ ಹಾಕುವ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಬರ ಗಾಲದ ಸಮಯದಲ್ಲಿ ನಾನು ಆ ಪ್ರದೇಶದಲ್ಲಿ ಪ್ರವಾಸ ಮಾಡಿದಾಗ, ಅಲ್ಲ ಬಸ್ಸುಗಳ ಮೇಲೆಯೂ ಜನಗಳನ್ನು ಹಾಕಿದ್ದು ಕಂಡು, ಬಂದಿದ್ದೇವೆ. ಒಂದು ರೀತಿಯ ತೇರುಗಳು ಬಂದ ಹಾಗೆ ಬಸ್ಸು ಬರುತ್ತಿರುತ್ತವೆ. ಬಸ್ಸಿನ ಒಳಗಡೆಯೂ ಜನ, ಮೇಲೂ ಜನ. ಅದನ್ನು ನೋಡಿದರೆ, ಲಾರಿಗಳ ಮೇಲೆ ಹೋಗುವ ಹಾಗೆ ಕಾಣುತ್ತಿರುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ತಾವು ಕವಿಗಳು ಆದ್ದರಿಂಧ ಈ ರೀತಿ ಹೇಳುತ್ತಿದ್ದೀರಿ.

ಶ್ರೀ ಕೋಣಂದೂರು ಲಿಂಗಪ್ಪ.—ಇದ್ದುದನ್ನು ಇದ್ದಹಾಗೆ ಹೇಳಿದರೆ, ಇವರಿಗೆ ಕೆಂಡಂಥ ಕೋಪ ಬರುತ್ತದೆ. ಆದ್ದರಿಂದ ಈ ಓವರ್ ಲೋಡನ್ನು ತಪ್ಪಿಸಿ, ಜನರಿಗೆ ಅನುಕೂಲವಾಗುವ ಹಾಗೆ, ಒಂದಲ್ಲ ಎರಡು ಬಸ್ಸುಗಳನ್ನು ಓಡಿಸಿ, ಅನುಕೂಲ ಮಾಡಿಕೊಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಇನ್ನು ಆರ್.ಟಿ.ಓ. ಆಫೀಸಿನ ಸುದ್ದಿಗೆ ಹೋಗದೆ ಇರುವುದು ಒಳ್ಳೆಯದು. ಕೈ ಇಟ್ಟರೆ ಎಲ್ಲಿ ಕಚ್ಚಿಕೊಳ್ಳುತ್ತದೆಯೋ ಎನ್ನುವ ಹಾಗೆ ಇದೆ. ಬೆಂಗಳೂರಿನ ಆರ್.ಟಿ.ಓ. ಆಫೀಸನದು ಒಂದು ಕಥೆ ಇದೆ. ಅದಕ್ಕೆ ಸಂಬಂಧಪಟ್ಟ ವಿವರಗಳನ್ನೆಲ್ಲಾ ತಂದುಕೊಂಡಿ ಎಂದು ಕೇಳಿದ್ದೇನೆ. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಈ ಆಫೀಸಿನಲ್ಲಿ ಭ್ರಷ್ಟಾಚಾರ ಇದೆ. ಎಷ್ಟು ಭಯಂಕರವಾದ ಸತ್ಯವಾದ ಕಥೆಗಳನ್ನು ಓದುವುದಕ್ಕೆ ಸಾಧ್ಯವಿದೆಯೋ ಅಂಥ ಭಯಂಕರವಾದ ಕಥೆಯಾಗಿದೆ ಎಂದು ಕೇಳಿದ್ದೇನೆ. ಎಲ್ಲಾ ಅಂಕಿ ಅಂಶಗಳು ನನ್ನ ಕೈಗೆ ಸಿಕ್ಕಮೇಲೆ ಅದನ್ನು ತಮ್ಮ ಮುಂದೆ ಮಂಡಿಸುತ್ತೇನೆ, ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ. ನನ್ನ ಮಾತನ್ನು ಮುಗಿಸುತ್ತೇನೆ.

4–30 P.M.

ಶ್ರೀ ಜೆ. ಎಸ್. ಅಮ್ಮಣ್ಣವರ್ (ಸದಲಗ)—ಮಾನ್ಯ ಅಧ್ಯಕ್ಷರೇ, ಸಾರಿಗೆ ಹಾಗೂ ವಸತಿ ಸಚಿವರು ಈಗಾಗಲೇ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವೊಂದು ಸೂಚನೆಗಳನ್ನು ಮಾಡಬಯಸುತ್ತೇನೆ. ಈ ಒಂದು ಇಲಾಖೆಯಿಂದ ರಾಜ್ಯಕ್ಕೆ ಸುಮಾರು 15 ಕೋಟಿ ರೂಪಾಯಿಗಳ ಆದಾಯ ಹೋದವರ್ಷ ಬಂದಿತ್ತು. ಇಷ್ಟು ಆದಾಯ ತರುವಂಥ ಬಾಬು ಏನು ಇದೆ, ಆದರ ಕಡೆ ಕಡಿಮೆ ಲಕ್ಷ್ಯ ಕೊಟ್ಟಿದ್ದಾರೆಂದು ನನಗನ್ನಿಸುತ್ತದೆ, ಏಕೆಂದರೆ, ಈಗಾಗಲೇ, ಮಾನ್ಯ ಸದಸ್ಯರು ಅನೇಕರು ಹೇಳಿದ ಹಾಗೆ, ಈ ಟ್ರಕ್ ಓನರ್ಸ್ ತೊಂದರೆಗಳ ಬಗ್ಗೆ ಸರ್ಕಾರದವರು ಹೆಚ್ಚು ವಿಚಾರಮಾಡಬೇಕಾಗಿದೆ. ಟ್ಯಾಕ್ಸ್ ರೂಪದಲ್ಲಿ ಕೋಟಿಗಟ್ಟಲೆ ಹಣವನ್ನು ತೆಗೆದುಕೊಂಡು ಅವರಿಗೆ ಒದಗಿಸತಕ್ಕ ಸೌಕರ್ಯ ಏನು ಇದೆಯೆಂದರೆ, ಏನೂ ಇಲ್ಲ ಎಂದು ನಾನು ಹೇಳಬಯಸುತ್ತೇನೆ. ಅವರಿಗೆ ಇರತಕ್ಕ ತೊಂದರೆ ಹಾಗೂ ಆಗಬೇಕಾದ, ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿ, ಅವರಿಗೆ ಆಗತಕ್ಕ ತೊಂದರೆಗಳನ್ನು ನಿವಾರಿಸಬೇಕಾಗಿರುತ್ತದೆ. ಇದು ಸರ್ಕಾರದ ಬೊಕ್ಕಸಕ್ಕೆ ಬಂಗಾರದ ತತ್ತಿಯನ್ನು ಕೊಡುವಂಥ ಉದ್ಯಮ, ಇದಕ್ಕೆ ಪ್ರತಿಯಾಗಿ ನಾವು ಅವರಿಗೆ ಏನನ್ನೂ ಮಾಡುತ್ತಿರುವುದಿಲ್ಲ. ಈ ಬಗ್ಗೆ ಸರ್ಕಾರದವರು ಪರಿಶೀಲಿಸಿ ಸೂಕ್ತ ಕಾನೂನನ್ನು ಮಾಡಬೇಕು, ಅಲ್ಲದೆ ಅವರ ಸಲುವಾಗಿ ಶೀಘ್ರವಾಗಿ ಅವರಿಗೆ ಆಗುತ್ತಿರುವ ತೊಂದರೆಗಳ ಪರಿಶೀಲನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಏನೆಂದರೆ ದಿನಾಲು ಎಷ್ಟೋ ಟ್ರಕ್‌ಗಳು ರಾಜಮಾರ್ಗದಲ್ಲಿ ಹಾದಾಡುತ್ತವೆ, ಆದರೆ ಅವರಿಗೆ ರಸ್ತೆಯ ಮಧ್ಯದಲ್ಲಿ, ಸ್ನಾನದ ಹಾಗೂ ತಿಂಡಿಯ ವ್ಯವಸ್ಥೆ ಇರುವುದಿಲ್ಲ, ಶೌಚದ ವ್ಯವಸ್ಥೆ ಇರುವುದಿಲ್ಲ, ಮತ್ತು ಅನೇಕ ಕಡೆ ತಿಂಡಿಯೂ ಸಿಕ್ಕುವುದಿಲ್ಲ. ಯಾವ ಸೌಕರ್ಯಗಳು ಸಿಕ್ಕುವುದಿಲ್ಲ. ಅದ್ದರಿಂದ ಡ್ರೈವರ ಹಾಗೂ ಇತರೇ ಸಿಬ್ಬಂದಿಯವರಿಗೆ ತಾವು ನೂರು ಮೈಲಿಗಾದರೂ ಒಂದೊಂದು ವಸತಿಗೃಹ, ಕಾವಲು ಮಾಡಲು ಸಿಬ್ಬಂದಿ, ವಾಹನಗಳನ್ನು ಬಿಡಲಿಕ್ಕೆ ಸ್ಥಳ ಮೊದಲಾದವುಗಳನ್ನು, ಮಾಡಿ, ವಸತಿ ಸೌಕರ್ಯವನ್ನು ಒದಗಿಸಿಕೊಡುವುದು ಅತ್ಯಂತ ಅವಶ್ಯ ಇದೆ. ಈಗಿರುವ ಕಾಯ್ದೆ ಹಾಗೂ ನಿಯಮಾವಳಿಗಳಲ್ಲಿ, ಈ ಬಗ್ಗೆ ದೋಷ ಇದೆ. ಮಹಾರಾಷ್ಟ್ರದ ಮೋಟಾರ್ ವಹಿಕಲ್ಸ್ ಡಿಪಾರ್ಟಮೆಂಟಿನಲ್ಲಿ ನಾವು ಟ್ಯಾಕ್ಸ್ ಕಟ್ಟಿದರೆ, ರಸೀತಿಯನ್ನು ಅಂದೇ ಕೊಡುತ್ತಾರೆ. ಆದರೆ ಇಲ್ಲಿ ಮಾತ್ರ ರಸೀತಿ ನಮಗೆ ಕೊಡುವುದಿಲ್ಲ. ಆರ್.ಟಿ.ಓ. ಆಫೀಸಿನಲ್ಲಿ ಕಾಗದದ ಅಭಾವ ಇದೆಯೆಂದು ನಾನು ತಿಳಿದಿದ್ದೇನೆ. ನಾನು ಮೊನ್ನೆ ಆರ್.ಟಿ.ಓ. ಆಫೀಸಿಗೆ ಹೋದಾಗ, ಅಲ್ಲಿ ಒಬ್ಬರು ಹೇಳಿದರು: ನಾವು ಕಾಗದವನ್ನು ಏನು ಬರೆಯುತ್ತಿದ್ದೇವೆ, ಅದು ನಿಮ್ಮ ದುಡ್ಡಿನಿಂದ ತಂದದ್ದು ಎಂದು ಸ್ವಚ್ಛವಾಗಿ ಹೇಳಿದರು. ಅಲ್ಲಿಗೆ ಸ್ಟೇಷನರಿಯನ್ನೂ ಕೂಡ ಸಪ್ಲೈ ಮಾಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರು. ಸುಮಾರು 15 ಕೋಟಿ ರೂಪಾಯಿಗಳ ಉತ್ಪನ್ನ ಬರತಕ್ಕ ಇಲಾಖೆಗೆ ಸ್ಟೇಷನರಿಯನ್ನು ಸರಿಯಾಗಿ ಒದಗಿಸಿಕೊಡಬೇಕು. ಯಾರು ಹಣ ಕೊಡುತ್ತಾರೆ, ಅವರಿಗೆ ರಸೀದಿ ಸಿಕ್ಕುವ ಏರ್ಪಾಡು ಮಾಡಬೇಕು. ಇಲ್ಲಿ ಆರ್.ಸಿ. ಬುಕ್ ಮತ್ತು ಟಿ.ಪಿ ಜಿ. ಬುಕ್ ಎಂದು ಎರಡು ಬುಕ್ ಮಾಡಿದ್ದಾರೆ. ಎರಡು ಬುಕ್ ಅನ್ನು ಇವರು ರಕ್ಷಣೆ ಮಾಡಬೇಕು. ಇದನ್ನು ಆರ್.ಟಿ.ಓ. ಆಫೀಸಿನವರು ತಕ್ಷಣ ತುಂಬಿಕೊಡುವುದಕ್ಕೆ ಸಾಧ್ಯವಿಲ್ಲ. 3-4 ದಿವಸ ಟೈಂ ತೆಗೆದುಕೊಳ್ಳುತ್ತಾರೆ. 80 ಸಾವಿರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ, ಟ್ರಕ್ಕನ್ನು 4-5 ದಿವಸದವರೆಗೆ ನಿಲ್ಲಿಸಿಕೊಂಡಿರಬೇಕು. ಈ ತರದ ತೊಂದರೆಗಳನ್ನು ಸರಿಪಡಿಸಲು ವ್ಯವಸ್ಥೆ ಮಾಡಬೇಕು. ಟಿ.ಪಿ.ಜಿ. ತುಂಬುವ ಸಲುವಾಗಿ ಕರ್ನಾಟಕದಲ್ಲಿ 15 ದಿವಸ ಮುಂಚಿತವಾಗಿಯೇ ಹಣವನ್ನು ಕೊಡಬೇಕಾಗುತ್ತದೆ. ಜನವರಿ, ಫೆಬ್ರವರಿ, ಮಾರ್ಚ್ ಕ್ವಾರ್ಟರ್‌ದ ಬಗ್ಗೆ ಕೊಡಬೇಕಾದ ಹಣವನ್ನು ಡಿಸೆಂಬರ್ 15ನೇ ತಾರೀಖಿನ ಒಳಗಾಗಿಯೇ ಕೊಡಬೇಕು. ಇಲ್ಲಿ ಗ್ರೇಸ್ ಡೇಸ್ ಇಲ್ಲ ಆದರೆ ಮಹಾರಾಷ್ಟ್ರದಲ್ಲಿ ಗ್ರೇಸ್‌ಡೇಸ್ ಕೊಟ್ಟಿದ್ದಾರೆ. ಅದೆಲ್ಲ ಅಲ್ಲಿ ಫೆಬ್ರವರಿವರೆಗೆ ಟಿ.ಪಿ.ಜಿ ಟ್ಯಾಕ್ಸ ತುಂಬಿದರೆ ನಡೆಯುತ್ತದೆ ಆದ್ದರಿಂದ ಇಲ್ಲಿಯೂ ಗ್ರೇಸ್‌ಡೇಸ್‌ನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲದೆ ಆರ್.ಸಿ. ಬುಕ್ ಮತ್ತು ಟಿ.ಪಿ ಜಿ. ಬುಕ್ ಒಂದೇ ಮಾಡಬೇಕು. ಇಷ್ಟೇ ಅಲ್ಲದೆ ಆರ್.ಟಿ.ಓ. ಆಫೀಸುಗಳಲ್ಲಿ ಸ್ಟಾಫ್ ಇನ್‌ಅಡಿಕ್ವೇಟ್ ಆಗಿದೆ ಇದಕ್ಕಾಗಿ 2.75 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚಿಗಾಗಿ ಇಟ್ಟಿದ್ದೇವೆಂದು ಹೇಳಿದ್ದಾರೆ. 1969ನೇ ಇಸವಿಯಿಂದ 1973ನೇ ಇಸವಿಯವರೆಗೆ 2.4 ಲಕ್ಷ ರೂಪಾಯಿಗಳನ್ನು ಸ್ಟಾಫ್‌ಗೆ ಕೊಟ್ಟಿದ್ದಾರೆ. ಇದಕ್ಕೆ ಎಕ್ಸ್‌ಪೆಂಡೀಚರ್ ಹೆಚ್ಚಾದರೂ ಅಡ್ಡಿಯಿಲ್ಲ; ಸ್ಟಾಫ್ ಅನ್ನು ಹೆಚ್ಚು ಮಾಡಬೇಕು, ಇದರಿಂದ ಹಣ ಖರ್ಚಾಗುವ ಹಣ ಆಫೀಸ್ ಎಫಿಸಿಯನ್ಸಿ ಮೂಲಕ ಹೆಚ್ಚು ಹಣ ಸರ್ಕಾರಕ್ಕೆ ಬರುತ್ತದೆ ಮತ್ತು ಅಲ್ಲಿಯ ಎಫೀಷಿಯನ್ಸಿಯೂ ಕೂಡ ಹೆಚ್ಚಾಗುತ್ತದೆ ಎಂದು ನನ್ನ ಭಾವನೆ. ಆದ್ದರಿಂದ ನಾನು ಈ ಸ್ಟಾಫ್‌ಗೆ ಈ ಸಾರಿಯಾದರೂ ಹೆಚ್ಚು ಹಣವನ್ನು ಒದಗಿಸಿ ಖರ್ಚು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ವೈ. ಎಸ್. ಅಮ್ಮಣ್ಣವರ್)

ಅಷ್ಟೇ ಅಲ್ಲದೆ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನಲ್ಲಿ ಯಾರು ಯಾರು ನೌಕರಿ ಮಾಡುತ್ತಿದ್ದಾರೆ, ಅವರನ್ನು 3 ವರ್ಷಗಳ ಮೇಲೆ ಒಂದು ಸ್ಥಳದಲ್ಲಿ ಎಂದೂ ಇಡಬಾರದೆಂಬ ನಿಯಮ ಮಾಡಿ ಕಡ್ಡಾಯವಾಗಿ ಜಾರಿಗೆ ತರಬೇಕು. ನನ್ನ ಕೆಟ್ಟ ಅನುಭವವನ್ನು ಹೇಳುತ್ತೇನೆ, ಟ್ರಾನ್ಸ್‌ಪೋರ್ಟ್ ಕಮಿಷನರ್‌ವರ ಆಫೀಸಿನಲ್ಲಿ ನಡೆಯುತಕ್ಕ ವ್ಯವಹಾರಗಳನ್ನು ನಾನು ನೋಡುವ ಸಲುವಾಗಿ ಖುದ್ದು ಹೋಗಿದ್ದೆ. ಅಲ್ಲಿ ಕೆಳಗೆ ವಿಜಿಲೆನ್ಸ್ ಕಮಿಷನರವರ ಆಫೀಸ್ ಇದೆ. ಅದರ ಮೇಲೆಯೇ ಟ್ರಾನ್ಸ್‌ಪೋರ್ಟ್ ಕಮಿಷನರವರ ಆಫೀಸ್ ಇರುತ್ತದೆ. ಈ ಆಫೀಸಿನಲ್ಲಿ ವ್ಯವಹಾರ ನೋಟಿನಲ್ಲಿ ಆಗುತ್ತದೆ. ನಾಣ್ಯ ಆಗಿದ್ದರೆ ತಪ್ಪಿಯಾದರು ವಿಜಿಲೆನ್ಸ್ ಕಮಿಷನರ್‌ರವರ ಟೇಬಲ್ ಮೇಲೆ ಝಣ್ ಅಂತಾ ಬೀಳಬಹುದಿತ್ತು. ಕಾಗದವಾದ್ದರಿಂದ ಅದು ಬೀಳುವುದಿಲ್ಲ, ಗಾಳಿಯಲ್ಲಿ ಕಿಡಕಿಗಳಿಂದ ಹಾರಿಹೋಗುತ್ತದೆ. ಅಲ್ಲಿ ಕಾಂಪೋಜಿಟ್ ಪರ್ಮಿಟ್ ಕೊಡುತ್ತಾರೆ, ಮತ್ತು ಪರ್ಮಿಟ್ ಟ್ರಾನ್ಸ್‌ಫರ್ ಮಾಡುತ್ತಾರೆ. ಚಿಕ್ಕೋಡಿಯಲ್ಲಿ ಒಬ್ಬ ಪಾರ್ಟಿ ಅಂದರೆ ಅಣ್ಣ ತಮ್ಮನ ಹೆಸರಿಗೆ ಪರ್ಮಿಟ್ ಟ್ರಾನ್ಸ್‌ಫರ್ ಮಾಡಬೇಕಾಗಿತ್ತು. ನಾನು ಮೂರು ಸಲ ಅಲ್ಲಿಯ ಸಂಬಂಧಿತ ಅಧಿಕಾರಿಗಳ ಆಫೀಸಿಗೆ ಹೋದೆ, ಆದರೂ ಏನೂ ಆಗಲಿಲ್ಲ. ಬೆಳಗಾಂನಲ್ಲಿ ಸದರೀ ಆಫೀಸ್‌ರರು ಹಿಂದಕ್ಕೆ ಇದ್ದಾಗ ಅಲ್ಲಿಯೂ ಕೂಡ ಒಂದು ಇತಿಹಾಸವನ್ನೇ ನಿರ್ಮಾಣ ಮಾಡುತ್ತಾರೆ. ಚಿಕ್ಕೋಡಿಯಿಂದ ಪಾರ್ಟಿ ಮೂರು ಸಲ ಬಂದರೂ ಪರ್ಮಿಟ್ ಟ್ರಾನ್ಸ್‌ಫರ್ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಕೊನೆಗೆ ಆ ಪಾರ್ಟಿ ಈ ಆಫೀಸ್‌ನ ಸಹವಾಸವೇ ಬೇಡವೆಂದು ಬಿಟ್ಟೇಬಿಟ್ಟ. ಅಲ್ಲಿ ಒಬ್ಬ ಕಾರಕೂನ ಫೈಲನ್ನು ಒಯ್ಯು ಸೆಕ್ರೆಟರಿ ಆರ್.ಟಿ.ಎ. ಅಥವಾ ಎಸ್.ಜಿ.ಎ. ಡಿಸಿಗ್ನೇಶನ್ ಸರಿಯಾಗಿ ನೆನಪಿಲ್ಲ ಆ ಆಫೀಸರರಿಗೆ ಒಯ್ಯಂದು ಕೊಡಬೇಕಾದರೆ 100 ರೂಪಾಯಿ ಕೊಡಬೇಕು. ಹಿಂದೆ ಕಾಪೋಜಿಟ್ ಪರ್ಮಿಟ್ ಟ್ರಾನ್ಸ್‌ಫರಿಗಾಗಿ ಇದ್ದ ಅನಧಿಕೃತ ಹಣದ ದರ 300 ರೂಪಾಯಿ ಇದ್ದುದು ಈಗ 3000 ರೂಪಾಯಿ ಆಗಿದೆ. ಇಂಥ ಅವ್ಯವಹಾರಗಳನ್ನು ತಪ್ಪಿಸಬೇಕೆಂದು ಕಳಕಳಿಯಿಂದ ಮಂತ್ರಿಯವರಿಗೆ ಹೇಳುತ್ತೇನೆ. ಉದಾಹರಣೆಗೆ ಹೇಳಬೇಕೆಂದರೆ ಕೆ. ಕೃಷ್ಣಮೂರ್ತಿ ಎನ್ನುವವರು ಆ ಆಫೀಸಿನಲ್ಲಿ 4 ವರ್ಷಗಳಿಂದ ಇದ್ದಾರೆ.

ಉಪಾಧ್ಯಕ್ಷರು.—ಅವರ ಡೆಸಿಗ್ನೆಷನ್ ಮಾತ್ರ ಹೇಳಬೇಕು. ಹೆಸರು ಹೇಳುವುದು ಬೇಡ

ಶ್ರೀ ಜೆ. ಎಸ್ ಅಮ್ಮಣ್ಣವರ್.—ಸೆಕ್ರೆಟರಿ ಎಸ್.ಟಿ.ಎ. ಇರಬಹುದು ಆ ಆಫೀಸ್‌ನಲ್ಲಿ ಪರ್ಮಿಟ್ ಟ್ರಾನ್ಸ್‌ಫರ್ ಮಾಡಬೇಕಾದರೆ ಎಲ್ಲಾ ಕಾಗದ ಇದ್ದರೂ ಪಾರ್ಟನರ್‌ಶಿಪ್ ಡೀಡ್ ಬೇಕು, ಅದು ಬೇಕು ಇದು ಬೇಕೆಂದು ಹೇಳಿ ಸತಾಯಿಸುತ್ತಾರೆ. ಅದು ಕೊಟ್ಟರೂ ಕೆಲಸ ಆಗುವುದಿಲ್ಲ ಆದರೆ ಕೆಲವರಿಗೆ ಸಂಜೆ ಹೊತ್ತಿಗೆ ಪರ್ಮಿಟ್ ಟ್ರಾನ್ಸ್‌ಫರ್ ಮಾಡಿಕೊಡುತ್ತಾರೆ. ಇದನ್ನೆಲ್ಲಾ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಪೋಲೀಸಿನವರು ಕೊಡುವಂತಹ ಕಿರುಕುಳಗಳನ್ನು ಹೇಳತೀರದು. ಡ್ರೈವರ್‌ಗಳ ಆರ್.ಸಿ. ಬುಕ್ ಮತ್ತು ಲೈಸನ್ಸ್‌ಗಳನ್ನು ಕಿತ್ತುಕೊಂಡು ಬಿಡುತ್ತಾರೆ. ಇವರು ಬೊಂಬಾಯಿ ಕಡೆ ಹೋಗಬೇಕಾದರೆ ಹಾದಿಯಲ್ಲಿ 5 ರೂಪಾಯಿ, 10 ರೂಪಾಯಿಯನ್ನು ಕೊನೆಯ ತನಕ ಕೊಟ್ಟು ಕೊಂಡು ಹೋಗಬೇಕಾಗುತ್ತದೆ. ಆದುದರಿಂದ ಪೋಲೀಸ್‌ನವರು ಈ ಡ್ರೈವರ್‌ಗಳ ಆರ್. ಸಿ. ಬುಕ್ ಮತ್ತು ಲೈಸೆನ್ಸ್‌ನ್ನು ಕಿತ್ತುಕೊಳ್ಳುವುದು ಸರಿಯಲ್ಲ. ಏನಾದರೂ ಇದ್ದರೆ ಕೇಸ್ ಹಾಕಬೇಕು ಈ ಬಗ್ಗೆ ಕೂಡಲೇ ಚೌಕಾಸಿ ನಡೆಸಬೇಕು. ಮತ್ತು ಸೂಕ್ತ ತಿಳವಳಿಕೆಯನ್ನು ಪೋಲೀಸಿನವರಿಗೆ ಕೊಡಬೇಕು.

ಇನ್ನು ಆರ್.ಟಿ.ಓ. ಆಫೀಸ್‌ನಲ್ಲಿ ಇನ್‌ಸ್ಪೆಕ್ಟರ್‌ಗಳ ವಿಷಯದಲ್ಲಿ ಹೇಳುತ್ತೇನೆ. ಅವರಿಗೆ ವೆಹಿಕಲ್ಸ್‌ನ್ನು ಕೊಟ್ಟಿಲ್ಲ. ಕೊಡದೇ ಇರುವುದರಿಂದ ಅಕ್ಸಿಡೆಂಟ್ ಆದರೆ ಪಾರ್ಟಿ ಬಂದು ವೆಹಿಕಲ್ ತಂದು ಕರೆದುಕೊಂಡು ಹೋಗಬೇಕಾಗುತ್ತದೆ. ಇನ್‌ಸ್ಪೆಕ್ಟರಿಗೆ ಹೋಗುವ ಮನಸ್ಸಿದ್ದರೂ ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಇನ್‌ಸ್ಪೆಕ್ಟರ್‌ಗಳಿಗೆ ವೆಹಿಕಲ್ಸ್ ಸಪ್ಲೈ ಮಾಡುವುದು ಅವಶ್ಯಕವೆಂದು ಹೇಳುತ್ತೇನೆ. 4 ಡಿವಿಜನಲ್ ಆಫೀಸ್‌ಗಳನ್ನು ತೆರೆದಿದ್ದೇವೆ ಎಂದು ಹೇಳಿದಿರಿ. ನಾನು ಬೆಳಗಾಂ ಆಫೀಸಿಗೆ ಹೋಗಿ ನೋಡಿದೆ. ಅಲ್ಲಿ ಕೆಲಸ ಏನೂ ಇಲ್ಲ ಅನ್ನಿಸಿತು. ಅವರು ಆರ್.ಟಿ.ಓ. ಆಫೀಸ್‌ಗಳ ಚೆಕ್ ಇಫೆಕ್ಟಿವ್ ಆಗಿಮಾಡಬೇಕಾದರೆ ಅವರಿಗೆ ಕೆಲವೊಂದು ವಿಶೇಷ ಅಧಿಕಾರ ಹಾಗೂ ನಿಯಮಗಳನ್ನು ಮಾಡಿಕೊಡಬೇಕು. ಆ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ಸ್ಟೇಟ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಹೇಳುವುದಾದರೆ ಅಲ್ಲಿ 324 ವೆಹಿಕಲ್ಸ್ ಇವೆ. ನಮ್ಮ ಡಿವಿಜನ್‌ನಲ್ಲಿ ಕೆಲಸ ಬಹಳ ಚೆನ್ನಾಗಿ ನಡೆದಿದೆ. ಇದು ಲಾಭಗಳಿಸುವ ಡಿವಿಜನ್ ನಮ್ಮ ತಾಲೂಕಿನಲ್ಲಿರುವ ನಿಪ್ಪಾಣಿ ಡಿಪೋ ಮತ್ತು ಚಿಕ್ಕೋಡಿ ಡಿಪೋಗಳ ವರಮಾನವನ್ನು ಕಂಪೇರ್

ಮಾಡಿದರೆ ಎಲ್ಲ ಡಿಪೋಗಳಿಗಿಂತ ಅಲ್ಲಿಯ ವರಮಾನ ಹೆಚ್ಚಾಗಿದೆ. ಆದರೆ ಸೌಕರ್ಯ ನೋಡಿದರೆ ಎಲ್ಲೂ ಇಲ್ಲದಷ್ಟು ಕಡಮೆ ಸೌಕರ್ಯ ಇದೆ. ಬೆಳಗಾಂ ಡಿವಿಜನ್‌ನಿಂದಲೇ ಹೆಚ್ಚು ಲಾಭ ಬರುತ್ತಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯಾವ ಡಿವಿಜನ್‌ನಿಂದ ಹೆಚ್ಚಿಗೆ ಲಾಭ ಬರುತ್ತದೋ ಆ ಡಿವಿಜನ್‌ಗೆ ಹೆಚ್ಚಾಗಿ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕು ಮಟ್ಟಿಗೆ ಹೇಳಬೇಕಾದರೆ ಸುಮಾರು 3 ಲಕ್ಷ 70 ಸಾವಿರ ಜನಸಂಖ್ಯೆ ಇದೆ. ಅಲ್ಲಿ ಬಸ್ ಸೆಲ್ಟರ್ಸ್ 3 ಮಾತ್ರ ಇವೆ. ಈ ಚಿಕ್ಕೋಡಿಯಲ್ಲಿ ಕೆಲವು ಹಿತಾಸಕ್ತಿಗಳು ಮನೆ ಮಾಡಿಕೊಂಡಿರುವುದು ಗೊತ್ತಿದೆ. ಉದಾಹರಣೆಗೆ ಹೇಳುತ್ತೇನೆ. ಬಸ್ ಸ್ಟ್ಯಾಂಡಿನ ಉದ್ಘಾಟನೆಯನ್ನು ಒಬ್ಬರು ಮಾಡಿದರೆ ಉದ್ಘಾಟನೆ ಮಾಡಿದವರ ಹೆಸರೇ ಇರುವುದಿಲ್ಲ. ಉದ್ಘಾಟಕರೆಂದು ಹೆಸರು ಹೆಚ್ಚುವುದು ಇನ್ನೊಬ್ಬರದು. ಅಲ್ಲಿ ಈ ರೀತಿ ಹಿತಾಸಕ್ತಿಗಳ ಪ್ರಭಾವ ಇದೆ ಎಂದು ಹೇಳಬಯಸುತ್ತೇನೆ. ಕೋಣಂದೂರು ಲಿಂಗಪ್ಪನವರು ಬಸ್ ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದರು. ಅಲ್ಲಿ ಕಾರ್ಮಿಕರ ಹಿತರಕ್ಷಣೆ ಆಗಬೇಕೆಂದು ಹೇಳುವುದನ್ನು ಹಾಗೂ ರಾಷ್ಟ್ರೀಕರಣದ ತತ್ವವನ್ನು ನಾನು ಪೂರ್ತಿಯಾಗಿ ಒಪ್ಪಿದರೂ ಕೂಡ ಅಲ್ಲಿ ನಡೆಯತಕ್ಕ ವಿದ್ಯಮಾನ ಸರಿಯಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅಲ್ಲಿಯ ಸ್ವಚ್ಛತೆ ಜೀರೋ. ಬಸ್‌ನಲ್ಲಿ ಗ್ಲಾಸ್ ಒರೆಸುವುದಿಲ್ಲ ಕಸ ಹೊಡೆಯುವುದಿಲ್ಲ. ಬೆಳಗಾವಿಯಿಂದ ನಾನು ಬಸ್‌ನಲ್ಲಿ ಚಿಕ್ಕೋಡಿಗೆ ಬರುವಾಗ ಮೂಗಿಗೆ ಧೂಳು ಹೋಗಿ ಫ್ಲೂ ಜ್ವರ ಬಂತು. ಅಲ್ಲಿ ಸ್ವಚ್ಛತೆ ಏನೂ ಇಲ್ಲ. ಬಸ್‌ನಲ್ಲಿ ನಾನು ಹೋಗಬೇಕಾದರೆ ಒಂದು ಟವಲನ್ನೇ ಈಗ ಇಟ್ಟುಕೊಂಡಿದ್ದು ಆ ಟವೆಲ್‌ನಿಂದ ಸೀಟನ್ನು ಒರೆಸಿ ಕೂತುಕೊಳ್ಳುತ್ತೇನೆ. ಇನ್ನೊಂದು ಏನೆಂದರೆ, ಬಸ್‌ನಲ್ಲಿ ಬೀಡಿ, ಸಿಗರೇಟ್ ಸೇದಕೂಡದೆಂದು ನಿಯಮವನ್ನು ಹಚ್ಚಿರುತ್ತಾರೆ. ಆದರೆ ಈ ನಿಯಮವನ್ನು ಯಾರೂ ಪಾಲನೆ ಮಾಡುವುದಿಲ್ಲ. ಡ್ರೈವರ್, ಕಂಡಕ್ಟರ್‌ರಿಂದ ಹಿಡಿದು ಎಲ್ಲರೂ ಬೀಡಿ, ಸಿಗರೇಟ್ ಸೇದುತ್ತಾರೆ. ಹೆಣ್ಣುಮಕ್ಕಳಿದ್ದರೆ ಸೇದುವವರ ಸಂಖ್ಯೆ ಇನ್ನೂ ಹೆಚ್ಚು. ಹೆಣ್ಣುಮಕ್ಕಳ ಮತ್ತು ಚಿಕ್ಕ ಬಾಲಕರ ಸಲುವಾಗಿ ಬೀಡಿ, ಸಿಗರೇಟ್‌ಗಳನ್ನು ಸೇದಕೂಡದೆಂದು ಕಡ್ಡಾಯವಾಗಿ ನಿಯಮವನ್ನು ಜಾರಿಗೆ ತರಬೇಕು. ಮಹಾರಾಷ್ಟ್ರ ರಾಜ್ಯದಲ್ಲಿ ಬಸ್‌ನಲ್ಲಿ ಬೀಡಿ, ಸಿಗರೇಟ್‌ಗಳನ್ನು ಯಾರೂ ಸೇದುವುದಕ್ಕೆ ಹೋಗುವುದಿಲ್ಲ. ಆದುದರಿಂದ ಇಲ್ಲಿಯೂ ಕೂಡ ಬಸ್‌ನಲ್ಲಿ ಬೀಡಿ, ಸಿಗರೇಟು ಸೇದುವುದನ್ನು ಕಡ್ಡಾಯವಾಗಿ ಬಂದ್ ಮಾಡಬೇಕೆಂದು ಕೇಳುತ್ತೇನೆ. ಆದಾಯ ಹೆಚ್ಚು ಬರುವ ನಮ್ಮ ಕಡೆ ಬಸ್ಸುಗಳ ಸಂಖ್ಯೆ ತೀರ ಕಡಿಮೆ ಇದೆ. ಆದುದರಿಂದ ನಮ್ಮ ಕಡೆ ಡಿವಿಜನ್‌ವೈಸ್ ಕಾರ್ಪೊರೇಷನ್ ಮಾಡಿ ಬೇಕಾದಂಥ ಅಮಿನಿಟೀಸ್ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತು ಈ ಡಿವಿಜನ್‌ಗಳಲ್ಲಿ 3 ವರ್ಷಕ್ಕೂ ಮೇಲ್ಪಟ್ಟು ಯಾರು ಯಾರು ಇದ್ದಾರೆ ಅಂತಹವರನ್ನು ಕೂಡಲೆ ವರ್ಗ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಓವರ್‌—ಲೋಡಿಂಗ್ ಬಗ್ಗೆ ಹೇಳಬೇಕೆಂದರೆ ಒಂದು ಬಸ್‌ನಲ್ಲಿ 70 ರಿಂದ 75 ಜನರನ್ನು ಕೂಡಿಸುವುದಾದರೆ, ರಾಷ್ಟ್ರೀಕರಣದಿಂದ ಯಾವ ಪ್ರಯೋಜನವೂ ಇಲ್ಲ ಎಂದು ಹೇಳಬಯಸುತ್ತೇನೆ. ಇದರ ಬದಲು ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಕುಡಿಯುತಕ್ಕಂಥ ಡ್ರೈವರ್‌ಗಳಿಗೆ ಯಾವ ರೀತಿಯಿಂದಲೂ ಕ್ಷಮೆ ಮಾಡಬಾರದು. ಮೊನ್ನೆ ನನ್ನ ಮತ ಕ್ಷೇತ್ರದಲ್ಲಿ ನಡೆದಂಥ ಒಂದು ಬಸ್ ಅಪಘಾತದ ಬಗ್ಗೆ ಇಂದು ಬೆಳಿಗ್ಗೆ ಮಾನ್ಯ ಮಂತ್ರಿಗಳು ವಿವರ ಕೊಡುತ್ತಾ ಅಂದು ಆ ಬಸ್‌ನಲ್ಲಿ 45 ಜನರು ಇದ್ದರು ಎಂದು ತಿಳಿಸಿದರು. ಆದರೆ ನನಗೆ ತಿಳಿದ ಪ್ರಕಾರ ಅಂದು ಆ ಬಸ್‌ನಲ್ಲಿ 75 ಜನರು ಇದ್ದರು ಎಂದು ಕೇಳಿದ್ದೇನೆ. ಈ ರೀತಿಯ ಅನಾಹುತವಾಗುವುದಾದರೆ, ಜೀವಕ್ಕೆ ರಕ್ಷಣೆ ಇಲ್ಲವಾದರೆ ನಾವು ಬಸ್‌ಗಳಲ್ಲಿ ಪ್ರಯಾಣ ಮಾಡುವುದೇ ಕಷ್ಟವಾಗುತ್ತದೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಇನ್ನು ಮುಂದೆ ಬಸ್‌ನಲ್ಲಿರುವ ಪ್ರತಿ ಸೀಟ್‌ಗೂ ಸಹ ಇನ್ಶೂರೆನ್ಸ್ ಮಾಡಿಸಬೇಕು. ಒಂದು ಕಾಸು ಅಥವಾ ಎರಡು ಕಾಸು ಹೆಚ್ಚು ಆದರೂ ಪ್ರತಿ ಸೀಟಿಗೆ ಇನ್ಶೂರೆನ್ಸ್ ಮಾಡಿಸಬೇಕು ಎಂದು ಹೇಳುತ್ತೇನೆ

ಇನ್ನು ಹೌಸಿಂಗ್ ಸ್ಕೀಮ್ ಬಗ್ಗೆ ಹೇಳಬೇಕೆಂದರೆ, ಈ ಸರ್ಕಾರದವರು ಹೌಸಿಂಗ್ ಪ್ರಾಬ್ಲಮ್‌ನ್ನು ಸಾಲ್ವ್ ಮಾಡಲಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ, ಇಂದು ಬ್ಲಾಕ್ ಮನಿ ಇಟ್ಟಿರುವವರು ಮನೆಗಳನ್ನು ಕಟ್ಟಿಸಿದರೆ, ಅವರಿಗೆ ಹಣ ಎಲ್ಲಿಂದ ಬಂತು ಎಲ್ಲಿಂದ ತಂದಿರಿ ಎಂದು ಕೇಳಬಾರದು ; ಇಂದು ಎಲ್ಲ ಪದಾರ್ಥಗಳ ಬೆಲೆಯೂ ಹೆಚ್ಚುತ್ತಿದೆ ಎಂಬ ಕೂಗು ಇದೆ. ಇದಕ್ಕೆ ಕಾರಣ ಬ್ಲಾಕ್ ಮನಿ. ಇಂತಹ ಹಣದಿಂದ ಮನೆಗಳನ್ನು ಕಟ್ಟಿಸಿದರೆ ಹಣ ಎಲ್ಲಿಂದ ಬಂತು ಎಂದು ಕೇಳಬಾರದು ; ಇದರಿಂದ ಇಕಾನಮಿ ಸ್ಟೆಬಿಲೈಜ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಸರ್ಕಾರದವರು ಇದನ್ನು ವಿಚಾರ ಮಾಡಿ ಅನುಷ್ಠಾನದಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಆ ರೀತಿ ಮನೆಗಳನ್ನು ಕಟ್ಟಿದ ನಂತರ ಹೌಸ್ ಸೀಲಿಂಗ್ ಆಕ್ಟ್ ಜಾರಿಗೆ ತರಬೇಕೆಂದು ಹೇಳುತ್ತೀರಾ ?

ಶ್ರೀ ಜೆ. ಎಸ್. ಅಮ್ಮಣ್ಣವರ್.—ಆ ಬಗ್ಗೆ ಈಗಾಗಲೇ ಏನನ್ನೂ ಹೇಳುವುದಿಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯಸಾರಿಗೆ ಮತ್ತು ವಸತಿ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಾವು ಒಳ್ಳೆಯ ಉದ್ದೇಶಗಳನ್ನು ಇಟ್ಟುಕೊಂಡು ಯೋಜನೆಗಳನ್ನು ಹಾಕುತ್ತೇವೆ. ಆದರೂ ಕೂಡ ಅವು ಕಾರ್ಯಗತವಾಗುವುದಕ್ಕೆ ಬಹಳ ತೊಂದರೆ ಇದೆ. ಇದಕ್ಕೆ ಕಾರಣವೇನೆಂದರೆ, ಅಧಿಕಾರದಾಶೆ, ಸ್ವಜನ ಪಕ್ಷಪಾತ, ಮತ್ತು ರಾಜಕೀಯದ ಒತ್ತಡದಿಂದ ಅನೇಕ ಯೋಜನೆಗಳು ತಡೆಕೆಳಕಾಗುತ್ತಿವೆ ಇವುಗಳು ಅನೇಕ ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಬರುತ್ತಿರಬಹುದು ? ಆದರೆ ಇದು ಬಹಳ ಕಡಿಮೆ ಎಂದರೆ ಆಶ್ಚರ್ಯವಾಗಲಾರದು ಈಗ ಬರುತ್ತಿರುವ 2—3ರಷ್ಟಾದರೂ ಉತ್ಪತ್ತಿ ಬರಬೇಕಾಗಿತ್ತು. ಆದರೆ ಏತಕ್ಕೆ ಬರುತ್ತಿಲ್ಲ ? ಇದು ಜನಸಾಮಾನ್ಯರಿಗೆ ಅರ್ಥವಾಗಿದೆ. ಈಗ ಈ ಇಲಾಖೆಗೆ ಹೊಸ ಮಂತ್ರಿಗಳು ಬಂದಿದ್ದಾರೆ. ಅವರು ದಕ್ಷರಾಗಿದ್ದಾರೆ. ಅವರ ಕಾಲದಲ್ಲಿ ಈಗ ಇರತಕ್ಕಂಥ ಅನೇಕ ಸಮಸ್ಯೆಗಳು ಬಗೆಹರೆಯುತ್ತವೆ ಎಂದು ಅನೇಕ ಜನರು ನಿರೀಕ್ಷೆ ಮಾಡಿದ್ದಾರೆ. ಆದರ ಪ್ರಕಾರ ಈಗ ಇರುವ ನ್ಯೂನತೆಗಳು ಎಷ್ಟರಮಟ್ಟಿಗೆ ನಿವಾರಣೆಯಾಗುತ್ತವೆ ಎಂಬುದನ್ನು ಕಾದು ನೋಡೋಣ. ಈಗ ನಾವು ಅನೇಕ ಶಾಸನಗಳನ್ನು ಮಾಡುತ್ತೇವೆ ? ಆದರೆ ಅವಕ್ಕೆ ಏನಾದರು ಬೆಲೆ ಇದೆಯೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ ? ಈಗ ಏನಾಗುತ್ತಿದೆ ಎಂದರೆ, ನಾವು ಏನಾದರು ಒಂದು ಶಾಸನ ಮಾಡಿದರೆ, ಅವಕ್ಕೆ ವಿರುದ್ಧವಾಗಿ ಕೆಲಸಗಳು ಆಗುತ್ತಿರುತ್ತವೆ. ಉದಾಹರಣೆಗೆ ಹೇಳುವುದಾದರೆ ಈಗ ಜಿಲ್ಲೆಯಿಂದ ಜಿಲ್ಲೆಗೆ ಅಕ್ಕಿಯನ್ನು ಸಾಗಿಸಬಾರದೆಂದು ಶಾಸನ ಮಾಡಿದ್ದರೂ ಸಹ ದಿನ ಬೆಳಗಾದರೆ ಲಾರಿಗಟ್ಟಲೆ ಅಕ್ಕಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಿರುವುದನ್ನು ನೋಡುತ್ತಿದ್ದೇವೆ. ಇದರಿಂದ ನಾವು ಮಾಡುವ ಶಾಸನಕ್ಕೆ ಏನಾದರು ಬೆಲೆ ಇದೆಯೇ ಎಂದು ಕೇಳುತ್ತೇನೆ ? ಅದೇ ರೀತಿ ನಾವು ಬಸ್‌ಗಳ ರಾಷ್ಟ್ರೀಕರಣ ಮಾಡಿದ ಉದ್ದೇಶವಾದರೂ ಏನು ? ಖಾಸಗೀ ಜನರಿಗೆ ಹೋಗುತ್ತಿರುವ ಹಣವನ್ನು ತಪ್ಪಿಸಿ ಆ ಹಣ ಸರ್ಕಾರದ ಬೊಕ್ಕಸಕ್ಕೆ ಬರಲಿ ಎಂಬ ಉದ್ದೇಶದಿಂದ. ಆದರೆ ನಾವು ಮಾಡಿದ ರಾಷ್ಟ್ರೀಕರಣದ ಉದ್ದೇಶ ಏನಾದರು ನೆರವೇರಿದೆಯೋ ಎಂಬುದನ್ನು ನೋಡಿದರೆ, ಅದು ನೆರವೇರಿಲ್ಲ; ಇಂದು ಅನೇಕ ಕಂಟ್ರಾಕ್ಟ್ ಬಸ್‌ಗಳು ಮತ್ತು ಟೂರಿಸ್ಟ್ ಬಸ್‌ಗಳು ರಾಷ್ಟ್ರೀಕರಣವಾದ ಮಾರ್ಗಗಳಲ್ಲಿಯೇ ಓಡಾಡುತ್ತಿವೆ: ಆದಕಾರಣ ನಾವು ಮಾಡಿದ ಶಾಸನಕ್ಕೆ ಏನಾದರೂ ಬೆಲೆ ಇದೆಯೋ ಎಂದು ಸರ್ಕಾರಕ್ಕೆ ಕೇಳಬೇಕಾಗಿದೆ ? ನಾವು ಯಾವುದೇ ಶಾಸನ ಮಾಡಿದರೂ ಸಹ ಅದಕ್ಕೆ ಬೆಲೆ ಇರಬೇಕು ; ಆದರೆ ಶಾಸನಕ್ಕೆ ಬೆಲೆ ಇಲ್ಲ ಎನ್ನುವುದಾದರೆ ಸರ್ಕಾರಕ್ಕೆ ದಕ್ಷತೆ ಇಲ್ಲ ಮತ್ತು ಅದಿಕಾರಿಗಳಲ್ಲಿ ಸ್ವಚ್ಛತೆ ಇಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಶಾಸನಗಳ ಉಲ್ಲಂಘನೆಯಾಗುತ್ತಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಅಧಿಕಾರದಲ್ಲಿರುವವರು ನಾವು ಮಾಡುವ ಶಾಸನಕ್ಕೆ ಬೆಲೆ ಕೊಡಬೇಕು ; ಬೆಲೆ ಕೊಡುವುದಕ್ಕಾಗದಿದ್ದರೆ ಅಂತಹವರು ತಕ್ಷಣವೇ ತಮ್ಮ ಅಧಿಕಾರಕ್ಕೆ ರಾಜೀನಾಮೆ ಕೊಡಬೇಕು. ಅದು ಬಿಟ್ಟು ಅಧಿಕಾರದಾಶೆಯಿಂದ ದಿನಬೆಳಗಾದರೆ ನಾವು ಮಾಡಿರುವ ಶಾಸನಕ್ಕೆ ಎತಕ್ಕೆ ಅವಮಾನ ಮಾಡಬೇಕು ಎಂದು ನಾನು ಕೇಳಬೇಕಾಗಿದೆ. ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ವಿಷಯಕ್ಕೆ ಬಂದರೆ, ಖಾಸಗಿ ಬಸ್ ಮತ್ತು ಸರ್ಕಾರಿ ಬಸ್ ಎರಡೂ ಸಹ ಒಂದು ಜಾಗದಿಂದ ಹೊರಟರೆ ಜನರು ಖಾಸಗೀ ಬಸ್ಸಿಗೆ ಆದ್ಯತೆ ಕೊಡುತ್ತಾರೆಯೇ ಹೊರತು, ಸರ್ಕಾರಿ ಬಸ್‌ಗೆ ಆದ್ಯತೆ ಕೊಡುವುದಿಲ್ಲ. ಇದಕ್ಕೆ ಕಾರಣ ಸರ್ಕಾರೀ ಬಸ್‌ಗಳು ಸರಿಯಾದ ಕಂಡೀಷನ್‌ನಲ್ಲಿ ಇರುವುದಿಲ್ಲ : ಮತ್ತು ಕಂಡಕ್ಟರ್‌ಗಳು ಪ್ರಯಾಣಿಕರೊಡನೆ ಸರಿಯಾಗಿ ವರ್ತನೆ ಮಾಡುವುದಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಡುತ್ತೇನೆ. ಏನೆಂದರೆ, ಇನ್ನು ಮುಂದೆ ಮಾನ್ಯ ಮಂತ್ರಿಗಳು ಪ್ರವಾಸ ಹೋಗುವಾಗ ದೊಡ್ಡ ದೊಡ್ಡ ಕಾರುಗಳಲ್ಲಿ ಹೋಗದೆ ಬಸ್‌ಗಳಲ್ಲಿಯೇ ಪ್ರಯಾಣ ಮಾಡಿದರೆ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಗಳು ಏನು ಎಂಬುದು ಗೊತ್ತಾಗುತ್ತದೆ. ಬಸ್‌ಗಳು ಯಾವ ಕಂಡೀಷನ್‌ನಲ್ಲಿವೆ ಎಂಬುದು ತಿಳಿಯುತ್ತದೆ. ಕಂಡಕ್ಟರ್‌ಗಳು ಯಾವ ರೀತಿಯಿಂದ ಪ್ರಯಾಣಿಕರೊಡನೆ ನಡೆದುಕೊಳ್ಳುತ್ತಾರೆಂಬುದು ತಿಳಿಯುತ್ತದೆ ಮತ್ತು ಅವು ಕಾಲಕ್ಕೆ ಸರಿಯಾಗಿ ಹೋಗುತ್ತವೆಯೋ ಎಂಬುದು ಸಹ ತಿಳಿಯುತ್ತದೆ. ಕೆಲವು ಸಲ ನಾವು ಪ್ರಯಾಣ ಮಾಡುವಾಗ ನಮ್ಮ ಗಡಿಯಾರದಲ್ಲಿ ಹತ್ತೂವರೆ ಗಂಟೆಯಾಗಿದ್ದರೆ, ಅವರ ಗಡಿಯಾರದಲ್ಲಿ ಇನ್ನೂ ಒಂಭತ್ತೂವರೆ ಗಂಟೆಯಾಗಿರುತ್ತದೆ. ಅದೇ ಖಾಸಗೀ ಬಸ್‌ನವರು ಕಾಲಕ್ಕೆ ಸರಿಯಾಗಿ ಮತ್ತು ಜನರಿಗೆ ಹೊಂದಿಕೊಂಡು ಬಸ್‌ಗಳನ್ನು ಓಡಿಸುತ್ತಾರೆ. ಅದಕ್ಕಾಗಿಯೇ ಜನರು ಖಾಸಗೀ

ಬಸ್‌ಗಳಲ್ಲಿ ಪ್ರಯಾಣ ಮಾಡಲು ಇಷ್ಟ ಪಡುತ್ತಾರೆ. ಕೆಲವು ಖಾಸಗೀ ಬಸ್‌ಗಳು ಇಂದು ಪರ್ಮಿಟ್ ಆಗಲೀ, ಲೈಸನ್ಸ್ ಆಗಲೀ ಇಲ್ಲದೇ ಓಡುತ್ತಿವೆ. ದುಡ್ಡು ಒಂದು ಇದ್ದರೆ ಯಾವ ಊರಿನಿಂದ ಯಾವ ಊರಿಗೆ ಬೇಕಾದರೂ ಬಸ್‌ಗಳನ್ನು ಓಡಿಸುವುದಕ್ಕೆ ಇಂದು ಅವಕಾಶವಿದೆ. ಇಂದು ಕೆಲವು ಖಾಸಗೀ ಬಸ್‌ಗಳು ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗಿ ಬರುತ್ತಿವೆ. ಇಲ್ಲಿಂದ ಅಲ್ಲಿಯವರೆಗೆ ಅನೇಕ ಪೋಲೀಸ್ ಸ್ಟೇಷನ್‌ಗಳು ಇದ್ದರೂ ಸಹ ಇಂತಹ ಬಸ್‌ಗಳ ಮೇಲೆ ಯಾವ ಪೋಲೀಸ್ ಅಧಿಕಾರಿಯೂ ಕ್ರಮ ತೆಗೆದುಕೊಳ್ಳುತ್ತಿಲ್ಲ ; ಇಂತಹ ಬಸ್‌ಗಳ ಮೇಲೆ ಪೋಲೀಸ್ ಅಧಿಕಾರಿಗಳು ಎಷ್ಟು ಕೇಸ್ ಹಾಕಿದ್ದಾರೆಂದು ನಾನು ಕೇಳುತ್ತೇನೆ ? ಮತ್ತು ಸರಿಯಾಗಿ ತಮ್ಮ ಕರ್ತವ್ಯ ನಿರ್ವಹಣೆ ಮಾಡದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳುತ್ತೇನೆ? ಇದಕ್ಕಾಗಿ ಸ್ಪೆಷಲ್ ಸ್ಕ್ವಾಡನ್ನು ಬೇರೆ ಇಟ್ಟಿದ್ದೀರಿ. ಅವರು ಎಷ್ಟು ಕೇಸ್‌ಗಳನ್ನು ಹಾಕಿದ್ದಾರೆಂಬುದನ್ನು ತಿಳಿಸಬೇಕು ? ದಿನಬೆಳಗಾದರೆ ಶಾಸನದ ಉಲ್ಲಂಘನೆಯಾಗುತ್ತಿದೆ. ನಿಮ್ಮ ಸ್ಪೆಷಲ್ ಸ್ಕ್ವಾಡ್‌ನವರು ಏನು ಮಾಡುತ್ತಿದ್ದಾರೆ ? ನಿದ್ರೆ ಮಾಡುತ್ತಿದ್ದಾರೆಯೇ ಸರಿಯಾಗಿ ಕಾರ್ಯ ನಿರ್ವಹಣೆ ಮಾಡದಿದ್ದವರನ್ನು ಕೂಡಲೆ ಸಸ್ಪೆಂಡ್ ಮಾಡಬೇಕು, ಇಲ್ಲವೇ ವರ್ಗ ಮಾಡಬೇಕು ? ಆದರೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ ; ನಾನು ಒಂದು ಸಲ ಒಂದು ಖಾಸಗೀ ಬಸ್‌ನಲ್ಲಿ ಪ್ರಯಾಣ ಮಾಡುವಾಗ ಸ್ಪೆಷಲ್ ಸ್ಕ್ವಾಡ್‌ನವರು ಅದನ್ನು ನಿಲ್ಲಿಸಿದರು. ನಂತರ ಬಸ್‌ನವರು ದಫೇದಾರನಿಗೆ 25 ರೂಪಾಯಿಗಳನ್ನು ಕೊಟ್ಟಾಗ ಆಗ ಅದು ನನಗಾಯಿತು, ಸಬ್-ಇನ್ಸ್‌ಪೆಕ್ಟರಿಗೆ ನೂರು ರೂಪಾಯಿ ಕೊಡಿ ಎಂದು ಕೇಳಿದ. ಇಂತಹದ್ದನ್ನು ನಾವು ನೋಡಿಕೊಂಡು ಸುಮ್ಮನಿರಬೇಕಾದ ಪ್ರಸಂಗ ಬಂದಿದೆ. ಸರ್ಕಾರದವರು ಇಂತಹ ಅಧಿಕಾರಿಗಳನ್ನು ಕೂಡಲೆ ಸಸ್ಪೆಂಡ್ ಮಾಡಬೇಕು, ಇಲ್ಲವೇ ವರ್ಗ ಮಾಡಬೇಕು; ಒಂದು ನಾಲ್ಕು ಪೋಲೀಸ್ ಸ್ಟೇಷನ್‌ಗಳ ಮೇಲೆ ಬಿಗಿಯಾದ ಕ್ರಮ ತೆಗೆದುಕೊಳ್ಳಿ ; ಆಗ ಉಳಿದವರು ಕೂಡಲೆ ಬಿಗಿಯಾಗುತ್ತಾರೆ ; ನಂತರ ನಿಮ್ಮ ಅಡ್ಮಿನಿಸ್ಟ್ರೇಷನ್ ಎಷ್ಟರಮಟ್ಟಿಗೆ ಚೆನ್ನಾಗಿ ನಡೆಯುತ್ತವೆ ಎಂಬುದನ್ನು ನೀವೇ ನೋಡಬಹುದು ; ಮುಖ್ಯವಾಗಿ ಕಂಡಕ್ಟರ್‌ಗಳಲ್ಲಿ ರಾಷ್ಟ್ರೀಯತೆ ಬರಬೇಕು :

ಶ್ರೀ ಕೆ. ಪ್ರಭಾಕರ್.—ತಾವು ಕಂಡ ಪ್ರಕರಣವನ್ನು ಸರ್ಕಾರದ ಗಮನಕ್ಕೆ ಏನಾದರೂ ತಂದಿದ್ದೀರಾ ?

ಶ್ರೀ ಎನ್. ಎಸ್. ಗುರುಸಿದ್ದಪ್ಪ —ನಾವು ಸರ್ಕಾರದ ಗಮನಕ್ಕೆ ತರಬೇಕು ಎಂದು ಮಾನ್ಯ ಸದಸ್ಯರು ಹೇಳುವುದಾದರೆ, ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಟ್ಟು ಅಧಿಕಾರಿಗಳನ್ನು ಏತಕ್ಕೆ ಇಡಬೇಕು ? ಈ ಕಾರ್ಪೊರೇಷನ್‌ನಲ್ಲಿ ಜನರಲ್ ಮೇನೇಜರ್ ಮತ್ತು ಡೆಪ್ಯೂಟಿ ಜನರಲ್ ಮೇನೇಜರ್ ಎಂದು ಏನಿದ್ದಾರೆ ಅವರು ಬಹಳ ಮಡಿವಂತಿಕೆಯಿಂದ ಕೂಡಿದವರಾಗಿದ್ದಾರೆ. ಇದಕ್ಕೆ ಕಾರಣ ಅವರು ಐ.ಎ.ಎಸ್ ಅಧಿಕಾರಿಗಳಾಗಿರುವುದು ; ಆದಕಾರಣ ಅವರು ಒಬ್ಬರ ಜೊತೆಯಲ್ಲಿ ಮಾತನಾಡುವುದು ಅಥವಾ ಚರ್ಚೆ ಮಾಡುವುದು ಅವಮಾನ ಎಂದು ತಿಳಿದುಕೊಂಡಿದ್ದಾರೆ. ಈ ಅಧಿಕಾರಿಗಳು ಎಷ್ಟು ದಿವಸ ಬಸ್‌ಸ್ಟಾಂಡ್‌ಗಳಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದಾರೆಂದು ಕೇಳಬೇಕಾಗಿದೆ ? ಕಛೇರಿಯಲ್ಲಿ ಕುಳಿತುಕೊಂಡು ಫೈಲ್‌ಗಳಲ್ಲಿ ರುಜು ಮಾಡಿಬಿಟ್ಟರೆ ತಮ್ಮ ಕೆಲಸ ಮುಗಿಯಿತು ಎಂದು ತಿಳಿದುಕೊಂಡುಬಿಟ್ಟಿದ್ದಾರೆ. ಜನಸಾಮಾನ್ಯರು ಬಸ್‌ಸ್ಟಾಂಡ್‌ಗಳಲ್ಲಿ ಯಾವ ರೀತಿ ತೊಂದರೆ ಅನುಭವಿಸುತ್ತಿದ್ದಾರೆಂಬುದನ್ನು ಹೋಗಿ ನೋಡುತ್ತಿಲ್ಲ ; ಬಸ್ ಕಾಲಕ್ಕೆ ಸರಿಯಾಗಿ ಏತಕ್ಕೆ ಹೊರಟಿಲ್ಲ ಎಂದು ಕೇಳಿದರೆ ಉತ್ತರ ಹೇಳುವವರು ಇರುವುದಿಲ್ಲ ; ಈ ಅಧಿಕಾರಿಗಳು ಪ್ರವಾಸ ಹೋದಾಗಲೆಲ್ಲಾ ಅಲ್ಲಿಯ ಬಸ್‌ಸ್ಟಾಂಡ್‌ಗಳಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದೇ ಆದರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ತಿಂಗಳಿಗೆ ಒಂದು ಸಲವಾದರೂ ಈ ರೀತಿ ಇನ್‌ಸ್ಪೆಕ್ಷನ್ ಮಾಡಬೇಕು. ಜನರಲ್ ಮೇನೇಜರ್ ಆದವರು ತಮ್ಮ ಮಡಿವಂತಿಕೆಯನ್ನು ಬಿಟ್ಟು ಆಗಾಗ್ಗೆ ಬಸ್‌ಸ್ಟಾಂಡ್‌ಗಳಿಗೆ ಹೋಗಿ ಚೆಕ್ ಮಾಡಿದರೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಸ್ಪೇರ್‌ಪಾರ್ಟ್ಸ್ ವಿಷಯ ಹೇಳುವುದಾದರೆ ಲೋಕಲ್ ಡಿಪೋಗಳಿಂದ ಸ್ಪೇರ್‌ಪಾರ್ಟ್ಸ್ ತರಿಸುತ್ತಾರೆ. ಸಿಟಿಗಳಲ್ಲಿರತಕ್ಕ ಲೋಕಲ್ ಅಂಗಡಿಗಳಿಂದ ಸ್ಪೇರ್‌ಪಾರ್ಟ್ಸ್ ತರಿಸಲು ಟೆಂಡರ್ ಕಾಲ್‌ಫಾರ್ ಮಾಡುತ್ತಾರೆ. ಆಗ ಅಂಗಡಿಗಳವರೆಲ್ಲರೂ ಮಾತನಾಡಿಕೊಂಡು ದುಬಾರಿ ರೇಟ್ ಕೊಡುತ್ತಾರೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಆದ್ದರಿಂದ ನಷ್ಟಕ್ಕೆ ಅವಕಾಶ ಕೊಡದೆ ಹೊರಗಡೆಯಿಂದ ಸ್ಪೇರ್‌ಪಾರ್ಟ್ಸ್ ತರಿಸುವುದು ಒಳ್ಳೆಯದು.

(ಶ್ರೀ ಎನ್. ಎಸ್. ಗುರುಸಿದ್ದಪ್ಪ)

5-00 P. M.

ಡ್ರೈವರ್ ಮತ್ತು ಕಂಡಕ್ಟರ್‌ಗಳು ಕುಡಿದು ಬಸ್ಸನ್ನು ನಡೆಸುವುದರಿಂದ ಅನೇಕ ಆಕ್ಸಿಡೆಂಟ್‌ಗಳು ಆಗುತ್ತವೆ. ಇಂಥಾ ವಿಷಯಗಳಲ್ಲಿ ಸಂಬಂಧಪಟ್ಟ ಡ್ರೈವರ್ ಮತ್ತು ಕಂಡಕ್ಟರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಡ್ರೈವರು ಮತ್ತು ಕಂಡಕ್ಟರುಗಳು ಬಸ್ಸು ನಡೆಸುವುದರಿಂದ ಪ್ರಯಾಣಿಕರಿಗೆ ಅಪಾಯ ಉಂಟಾಗುತ್ತದೆ. ಡ್ರೈವರ್ ಮತ್ತು ಕಂಡಕ್ಟರುಗಳು ಬಸ್ಸುಗಳನ್ನು ನಡೆಸುವಾಗ ಪ್ರಯಾಣಿಕರ ಜೊತೆಯಲ್ಲ ಯಾವರೀತಿ ನಡೆದುಕೊಳ್ಳುತ್ತಾರೆ ಎಂಬುವನ್ನು ನೋಡುವುದಕ್ಕೆ ಸರ್ಕಾರದವರು ಸ್ವಲ್ಪ ನಿಗಾ ಇಟ್ಟರೆ ಒಳ್ಳೆಯದು ಎಂದು ಹೇಳಬೇಕಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ದೇಶದಲ್ಲಿ ಪ್ರೊಹಿಬಿಷನ್ ತಂದರೆ ಒಳ್ಳೆಯದಲ್ಲವೇ ?

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಅದು ಒಳ್ಳೆಯದು. ಆ ಬಗ್ಗೆ ನಾನು ನನ್ನ ಸಪೋರ್ಟ್ ಕೊಡುತ್ತೇನೆ.

ವಸತಿ ವಿಷಯ ಹೇಳುವುದಾದರೆ ಈ ಗೃಹನಿರ್ಮಾಣ ಯೋಜನೆ ಬಹಳ ಒಳ್ಳೆಯ ಕಾರ್ಯಕ್ರಮ. ಹಳ್ಳಿಗಳಲ್ಲಿ ಅನೇಕ ಜನ ಬಡವರಿದ್ದಾರೆ. ಈಗ ಸರ್ಕಾರದವರು ಬಡವರಿಗೆ ಏನು ನಿವೇಶನಗಳನ್ನು ಹಂಚಿದ್ದಾರೆ ಆ ನಿವೇಶನಗಳಲ್ಲಿ ಮನೆ ಕಟ್ಟುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆಯೋ ಅಷ್ಟೇ ಹಣ ಆ ನಿವೇಶನಗಳನ್ನು ಮಟ್ಟ ಮಾಡುವುದಕ್ಕೆ ಖರ್ಚಾಗುತ್ತದೆ. ಯಾವುದೋ ಒಂದು ಕೊಂಪೆಯುಳ್ಳರತಕ್ಕ ಜಾಗದಲ್ಲಿ ಸೈಟುಗಳನ್ನು ಕೊಟ್ಟಿದ್ದಾರೆ. ಜನ ದನ ವಾಸಮಾಡದೇ ಇರತಕ್ಕಂಥಾ ಪ್ರದೇಶಗಳಲ್ಲಿ ಸೈಟುಗಳನ್ನು ಹಂಚಿದ್ದಾರೆ. ನಾವೂ ಸೈಟುಗಳನ್ನು ಹಂಚಿದ್ದೇವೆ ಎನ್ನುವ ಉದ್ದೇಶಕ್ಕೋಸ್ಕರ ಸೈಟುಗಳನ್ನು ಹಂಚಬಾರದು. ಒಳ್ಳೆಯ ಜಾಗದಲ್ಲಿ ಜನಗಳು ಆರೋಗ್ಯದಿಂದ ಬಾಳಬೇಕು ಎನ್ನುವ ದೃಷ್ಟಿಯಿಂದ ಮನೆಗಳನ್ನು ಕಟ್ಟಿಸುವುದಕ್ಕೆ ಯೋಗ್ಯವಾದ ಸ್ಥಳಗಳನ್ನು ನೋಡಿ ಸೈಟುಗಳನ್ನು ಹಂಚುವುದು ಒಳ್ಳೆಯದು. ಈಗ ಸರ್ಕಾರದವರು ಮನೆಗಳನ್ನು ಕಟ್ಟುವುದಕ್ಕೆ ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ. ಆದರೆ ಆ ಹಣ ಮಧ್ಯವರ್ತಿಗಳ ಕೈ ಸೇರಬಾರದು. ಕಟ್ಟತಕ್ಕಂಥಾ ಮನೆಗಳನ್ನು ಬಹಳ ಬಂದೋಬಸ್ತಾಗಿ ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಕಂಟ್ರಾಕ್ಟರು ಮನೆಗಳನ್ನು ಕಟ್ಟಿಸಿಕೊಟ್ಟು ಅವು ಬಂದೋಬಸ್ತಾಗಿಲ್ಲದೆ ಅವು ಬಿದ್ದು ಹೋಗಿ ಅದರಲ್ಲಿ ವಾಸ ಮಾಡತಕ್ಕ ಸಂಸಾರಗಳು ಸಾಯಬಾರದು. 2½ ಸಾವಿರ ರೂಪಾಯಿಗಳಲ್ಲಿ ಒಂದು ಮನೆ ಕಟ್ಟುವುದಕ್ಕೆ ಬದಲಾಗಿ 5 ಸಾವಿರ ರೂಪಾಯಿಗಳನ್ನು ಖರ್ಚ ಮಾಡಿ ಜನಗಳಿಗೆ ಒಳ್ಳೆಯ ಬಂದೋಬಸ್ತಾಗಿರತಕ್ಕ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಸಭಾಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರುವ ಸಾರಿಗೆ ಮತ್ತು ಗೃಹ ವಸತಿ ಡಿಮ್ಯಾಂಡ್ ನಂಬರ್ 9—30 ಇವುಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಪ್ರಗತಿಪರ ರಾಷ್ಟ್ರದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಬಹಳ ಮುಖ್ಯವಾದದ್ದು. ಅದರಲ್ಲೂ ಜನ ಸಂಖ್ಯೆ ಹೆಚ್ಚಾಗಿರತಕ್ಕ ದೇಶಗಳಲ್ಲಿ ಇದರ ಅವಶ್ಯಕತೆ ಬಹಳ ಹೆಚ್ಚು. ಆದ್ದರಿಂದ ಇದನ್ನು ಸುವ್ಯವಸ್ಥಿತವಾಗಿ ನಡೆಸಿದರೆ ಜನಗಳಿಗೆ ಎಷ್ಟೋ ಪ್ರಯೋಜನವಾಗುತ್ತದೆ. ಒಂದು ವಿಚಾರವನ್ನು ಹೇಳಬೇಕು ಎಂದರೆ ಇದರ ವ್ಯಾಪಕತೆ ಎಷ್ಟು ಹೆಚ್ಚಿದೆ ಎಂಬುದು ನಮ್ಮ ಕರ್ನಾಟಕರಾಜ್ಯದಲ್ಲಿ 1956-57ನೇ ಸಾಲಿನಲ್ಲಿ 26 ಸಾವಿರ ವಾಹನಗಳು ಇದ್ದುವು. ಈಗ 1,71,687 ವಾಹನಗಳು ಇವೆ. ಎಂದರೆ 7 ಪಟ್ಟು ಜಾಸ್ತಿಯಾಗಿವೆ. ಬೆಂಗಳೂರು ಜಿಲ್ಲೆಯಲ್ಲಿ ಸೇಕಡ 43 ರಷ್ಟು ವಾಹನಗಳು ಇವೆ ಎಂದರೆ ಇದರ ಪ್ರಗತಿ ಎಷ್ಟು ಹೆಚ್ಚಾಗಿವೆ ಎಂಬುದನ್ನು ನಾವು ಮನಗಾಣಬೇಕು. ಬಹುಮುಖ್ಯವಾಗಿ ಸಾರಿಗೆ ಸಂಪರ್ಕ ವಿಚಾರವನ್ನು ಹೇಳುವಾಗ ನಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದು ಏನೆಂದರೆ ಕೆ.ಆರ್.ಸಿ.ಟಿ. ಬಹಳ ದೊಡ್ಡ ಸಂಸ್ಥೆ. ಈಗಾಗಲೇ ಅಲ್ಲಿ ಸರ್ಕಾರದವರು 42 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಾರೆ. ಈ ಸಂಸ್ಥೆಯಲ್ಲಿ 26 ಸಾವಿರ ಜನ ಕೆಲಸಗಾರರು ಇದ್ದಾರೆ. ಇದರಲ್ಲಿ ಒಟ್ಟು 3732 ಬಸ್ಸುಗಳು ಇವೆ. 6.75 ಲಕ್ಷ ಕಿಲೋಮೀಟರ್ ದೂರ ಬಸ್ಸುಗಳನ್ನು

ಓಡಿಸುತ್ತಿದ್ದಾರೆ. ಇದು ಇಷ್ಟೊಂದು ದೊಡ್ಡ ಸಂಸ್ಥೆಯಾಗಿದ್ದು ಇಷ್ಟೊಂದು ಬಂಡವಾಳವನ್ನು ಅದರಲ್ಲಿ ಹಾಕಿ 26 ಸಾವಿರ ಜನ ನೌಕರರು ಇರುವ ಈ ಸಂಸ್ಥೆಯಲ್ಲಿ ಜನಗಳಿಗೆ ಒದಗಿಸುವ ಸೌಕರ್ಯವನ್ನು ಲೆಕ್ಕ ಹಾಕಿದರೆ ಅದು ಏನೂ ಸಮರ್ಪಕವಾಗಿಲ್ಲ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಕಾರಣ ಇದರಲ್ಲಿ ಲೋಪದೋಷಗಳು ಬಹಳ ಇವೆ. ಇದನ್ನು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಖಾಸಗೀ ಬಸ್ಸುಗಳು ಹೆಚ್ಚು ನಿಗಾವಹಿಸಿ ಬಸ್ಸುಗಳಲ್ಲಿ ಹೆಚ್ಚು ಲಾಭ ಪಡೆಯಬೇಕೆಂದು ಕೆಲಸ ಮಾಡುವಂತೆ ಈ ಕೆ. ಎಸ್. ಆರ್. ಟಿ. ಸಿ. ಸಂಸ್ಥೆಯಲ್ಲಿ ನೌಕರರು ಕೆಲಸವಾಡುವುದಿಲ್ಲ. ಏತಕ್ಕೆಂದರೆ ಯಾರೋ ಇದರಲ್ಲಿ ಬಂಡವಾಳವನ್ನು ಹಾಕಿರುತ್ತಾರೆ. ನಮಗೇನು ಎಂಬ ಮನೋಭಾವನೆ ನೌಕರರಲ್ಲಿ ಬೆಳೆದಿದೆ. ಸರ್ಕಾರದವರು ಇದರಲ್ಲಿ ಹಣವನ್ನು ತೊಡಗಿಸಿ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಇದು ಕಾರ್ಪೊರೇಷನ್ ಆಗಿರುವುದರಿಂದ ಇದರ ಮೇಲೆ ಈ ಸಭೆಗೂ ಹೆಚ್ಚು ಹತೋಟಿ ಇಲ್ಲ. ಸರ್ಕಾರಕ್ಕೂ ಇದರ ಮೇಲೆ ಹೆಚ್ಚು ಹತೋಟಿ ಇಲ್ಲ. ಸಾರಿಗೆ ಸಚಿವರು ಇದಕ್ಕೆ ಚೇರ್ಮನ್ ಆಗಿದ್ದರೆ ಚೆನ್ನಾಗಿತ್ತು. ಶ್ರೀಮಾನ್ ಸತ್ಯನಾರಾಯಣಸಿಂಗ್ ಅವರು ಈ ಬಗ್ಗೆ ಹೇಳಿರುವುದು ನಿಜ. ಇದು ಪೂರ್ಣವಾಗಿ ಸರಕಾರದವರ ಖಾಸಗಿಯವರ ಹತೋಟಿಯಲ್ಲಿದ್ದರೆ ನೌಕರರು ಹೆದರಿಕೊಳ್ಳುತ್ತಿದ್ದರು. ಇದು ಕಾರ್ಪೊರೇಷನ್ ಆಗಿರುವುದರಿಂದ ಇದರ ಮೇಲೆ ಸರ್ಕಾರಕ್ಕೆ ಸರಿಯಾದ ಹತೋಟಿ ಇಲ್ಲ. ಅಲ್ಲಿ ಏನಾದರೂ ಒಂದು ವಿವರಣೆಯನ್ನು ಕೇಳಿದರೆ ಅವರು ಒದಗಿಸುವುದಿಲ್ಲ. ಪ್ರತಿವರ್ಷ ಅದರ ಆಡಳಿತದ ಒಂದು ರಿಪೋರ್ಟನ್ನು ಈ ಸಭೆಯ ಮುಂದಿಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದರೆ ಚೆನ್ನಾಗಿತ್ತು. ಅದನ್ನೂ ಮಾಡಿಕೊಟ್ಟಿಲ್ಲ. ಈ ಒಂದು ದೃಷ್ಟಿಯಿಂದ ಮಾನ್ಯ ಸಾರಿಗೆ ಸಚಿವರು ಈ ಕೆ.ಎಸ್.ಆರ್, ಟಿ.ಸಿ. ಕಾರ್ಪೊರೇಷನ್ನಿಗೆ ಅಧ್ಯಕ್ಷರಾಗಿರುವ ಹಾಗೆ ಏರ್ಪಾಟು ಮಾಡಿದರೆ ಒಳ್ಳೆಯದು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಆ ಮೇಲೆ ಬಸ್ ಡಿಪೋಗಳು, ಕಾರ್ಯಾಗಾರ, ಆಡಳಿತದ ವ್ಯವಸ್ಥೆಯ ಕಟ್ಟಡ, ಬಸ್ ನಿಲ್ದಾಣ ಮತ್ತು ಬಸ್ ಶೆಲ್ಟರ್‌ಗಳನ್ನು ಕಟ್ಟುವುದಕ್ಕೆ ಕಾರ್ಪೊರೇಷನ್‌ನಲ್ಲಿ ಒಂದು ಇಂಜಿನಿಯರಿಂಗ್ ಶಾಖೆ ಇದರಲ್ಲಿ ಇದೆ. ಈ ಇಂಜಿನಿಯರಿಂಗ್ ಇಲಾಖೆಯವರು ಕಟ್ಟಿಸಿರುವ ಕಟ್ಟಡಗಳು, ಬಸ್ ನಿಲ್ದಾಣಗಳು ಬಸ್ ಷೆಲ್ಟರುಗಳು ಇವುಗಳನ್ನು ನೋಡಿದರೆ ಅವು ಏನೂ ಸಮರ್ಪಕವಾಗಿಲ್ಲ. ಬಹಳ ಕಳಪೆ ಕೆಲಸ ನಡೆದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕೆಲವು ಕಡೆ ಮಾನ್ಯ ಸಚಿವರು ಆಗಿಂದಾಗ್ಯೆ ಅಂಥಾ ಕಟ್ಟಡಗಳು, ಬಸ್ ಷೆಲ್ಟರುಗಳನ್ನು ಕಟ್ಟಿಸುವ ಕಡೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟು ಇನ್‌ಸ್ಪೆಕ್ಷನ್ ಮಾಡಿ ಅವರಿಗೆ ಎಚ್ಚರಿಕೆ ಕೊಟ್ಟು ಅವರ ಮೇಲೆ ಕೆಲವು ಸಂದರ್ಭಗಳಲ್ಲಿ ವಿಜಿಲೆನ್ಸ್ ಹಾಕಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಮಾಡಿದರೆ ಅವರಿಗೆ ಸ್ವಲ್ಪ ಹೆದರಿಕೆ ಇರುತ್ತದೆ. ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ.

ನಮ್ಮ ಮಲೆನಾಡು ಪ್ರದೇಶದಲ್ಲಿ ಬೇಸಿಗೆ ಕಾಲದಲ್ಲಿ ಬಿಸಿಲು ಮತ್ತು ಸೆಕೆ ಇರುತ್ತದೆ, ಮಳೆಗಾಲದಲ್ಲಿ ಸುಮಾರು 4—[illegible] ತಿಂಗಳು ಸೋನೆ ಮಳೆ ಇರುತ್ತದೆ. ಆದ್ದರಿಂದ ಅಲ್ಲಿ ಬಸ್ ಷೆಲ್ಟರ್ ಇಲ್ಲದಿದ್ದರೆ ಅಲ್ಲಿನ ಜನಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಮಲೆನಾಡು ಪ್ರದೇಶದಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ಬಸ್ ಷೆಲ್ಟರುಗಳನ್ನು ಒದಗಿಸಬೇಕು. ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಕೆ.ಎಸ್.ಆರ್.ಟಿ.ಸಿ.ಗೆ ತಿಳಿಸಿ ಆ ಕೆಲಸವನ್ನು ಅಲ್ಲಿ ತುರ್ತಾಗಿ ಮಾಡುವಂತೆ ಆದೇಶವನ್ನು ಕೊಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಸಾರಿಗೆ ಇಲಾಖೆಯಿಂದ ನಮ್ಮ ರಾಜ್ಯಕ್ಕೆ ಸುಮಾರು 14½ ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ಇದರಲ್ಲಿ 25—30 ಕೋಟಿ ರೂಪಾಯಿಗಳ ವರಮಾನಕ್ಕೆ ಅವಕಾಶ ಇದೆ. ಖಾಸಗಿಯವರು ಒಂದು ಬಸ್ಸನ್ನು ಇಟ್ಟರೆ ಅವರು ಕೆಲವು ಸಮಯದಲ್ಲಿ ಕೆಲವರಿಗೆ ಲಂಚಕೊಡಬೇಕಾಗುತ್ತದೆ. ಅದನ್ನು ಕೊಟ್ಟು ಸಿಬ್ಬಂದಿವರ್ಗಕ್ಕೂ ಹೆಚ್ಚು ಸಂಬಳ ಕೊಟ್ಟು ಬಸ್ಸನ್ನು ಚೆನ್ನಾಗಿ ನಡೆಸುತ್ತಾರೆ, ಲಾಭವನ್ನೂ ಗಳಿಸುತ್ತಾರೆ. ಹೀಗಿರುವಾಗ ಕೆ.ಎಸ್.ಆರ್.ಟಿ.ಸಿ.ಯವರು ಏತಕ್ಕೆ ಲಾಭ ಸಂಪಾದನೆ ಮಾಡುವುದಕ್ಕಾಗುವುದಿಲ್ಲ ? ಇದರಲ್ಲಿ 35—40 ಪರ್ಸೆಂಟ್ ಹಣ ಸೋರಿಹೋಗುತ್ತದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಲ್ಲ.

ಇನ್ನೊಂದು ವಿಚಾರ ಏನೆಂದರೆ ಬಸ್ಸುಗಳಲ್ಲಿ ಕಂಡಕ್ಟರು ಪ್ರಯಾಣಿಕರಿಗೆ ಏನು ಟಿಕೆಟ್‌ಗಳನ್ನು ಕೊಡುತ್ತಾರೆಯೋ ಅದನ್ನು ಮತ್ತೆ ಪ್ರಯಾಣಿಕರಿಂದ ವಾಪಸ್ಸು ಪಡೆಯುತ್ತಾರೆ. ಆ ರೀತಿ ಕಂಡಕ್ಟರು ಪ್ರಯಾಣಿಕರಿಂದ ಟಿಕೆಟ್ಟನ್ನು ವಾಪಸ್ಸು ಪಡೆಯಬಾರದು. ಕಂಡಕ್ಟರು ಪ್ರಯಾಣಿಕರಿಂದ ಟಿಕೆಟ್ಟನ್ನು ವಾಪಸ್ಸು ಪಡೆದು ಅದನ್ನೇ ಇತರೇ ಪ್ರಯಾಣಿಕರಿಗೆ ಕೊಟ್ಟ ನಿದರ್ಶನಗಳು ಅನೇಕ ಇವೆ. ಅದನ್ನು ತಪ್ಪಿಸಬೇಕು. ಅದನು ತಪ್ಪಿಸುವುದಕ್ಕೆ ಯಾವುದಾದರೂ ಒಂದು ಉಪಾಯವನ್ನು

(ಶ್ರೀ ಕೆ. ಎಂ. ರುದ್ರಪ್ಪ)

ಕಂಡುಹಿಡಿದು ಪ್ರತಿಯೊಬ್ಬ ಪ್ರಯಾಣಿಕರಿಗೂ ಟಿಕೇಟ್ ಕೊಡುವಂತೆ ಮಾಡಬೇಕು. ಮತ್ತೆ ಅವರಿಂದ ಅದನ್ನು ವಾಪಸ್ಸು ಪಡೆಯದಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅನೇಕ ಕಡೆ ಆಕ್ಸಿಡೆಂಟ್‌ಗಳು ಜಾಸ್ತಿಯಾಗುತ್ತಿವೆ. ಇದಕ್ಕೆ ಮುಖ್ಯವಾಗಿ ಚೆನ್ನಾಗಿಲ್ಲದೆ ಇರತಕ್ಕ ವಾಹನವನ್ನು ಕಂಡೆಮ್ ಮಾಡಿ ಅವು ಓಡಾಡದಂತೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಆ ರೀತಿ ಮಾಡಿದರೆ ಆಕ್ಸಿಡೆಂಟ್ ಬಹಳ ಕಡಿಮೆ ಆಗುತ್ತದೆ.

ವಸತಿ ಸೌಕರ್ಯದ ಬಗ್ಗೆ ಹೇಳಬೇಕಾದರೆ ಈ ಬಾಬಿಗೆ ಸರ್ಕಾರದವರು 3.38 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ಇದು ಬಹಳ ಕಡಿಮೆ. ಇದು ಬಡವರ ದೇಶ. ಎಲ್ಲಾ ಜನಗಳಿಗೂ ಸ್ವಂತವಾದ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಬಾಬಿಗೆ 3.38 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಬಹಳ ಕಡಿಮೆ. ಇದಕ್ಕೆ 7—8 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಚೆನ್ನಾಗಿತ್ತು ಎಂದು ನಾನು ಸಲಹೆ ಕೊಡುತ್ತೇನೆ. ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಖರ್ಚು ಮಾಡುವಾಗ ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು. ಮತ್ತು ಮನೆಗಳನ್ನು ಬಹಳ ಚೆನ್ನಾಗಿ ಸುಭದ್ರವಾಗಿರುವಂತೆ ಕಟ್ಟಿಕೊಡಬೇಕು. ಏತಕ್ಕೆಂದರೆ ಸರಿಯಾಗಿ ಮನೆಗಳನ್ನು ಕಟ್ಟದಿದ್ದರೆ ಅವು ಬಿದ್ದು ಹೋಗುತ್ತವೆ. ಅಲ್ಲಿ ಗೋಡೆಗಳು ಬಿದ್ದು ಹೋಗುತ್ತಿವೆ, ರೂಫಿಂಗ್ ಬಿದ್ದು ಹೋಗುತ್ತಿವೆ. ಇಂಥ ಕೀಳುಮಟ್ಟದ ಕೆಲಸ ಮಾಡಿರುವುದಕ್ಕೆ ಯಾರು ಕಾರಣ ಕರ್ತರೆಂಬುದನ್ನು ಕಂಡುಹಿಡಿದು ಅವರ ಬಗ್ಗೆ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಈ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಪೋಲೀಸ್ ಇಲಾಖೆಯ ವಿಚಾರದಲ್ಲಿ ಶ್ರೀ ಅಮ್ಮಣ್ಣನವರ್ ಏನು ಹೇಳಿದ್ದಾರೆ ಅದೆಲ್ಲಾ ಅಕ್ಷರಸಹಾ ನಿಜ. ನಾವು ಯಾವಾಗ ಈ ಲಾರಿ ಮತ್ತು ಬಸ್ ಡ್ರೈವರುಗಳು ಮತ್ತು ಕಂಡಕ್ಟರ ವಿಚಾರವನ್ನು ಹೇಳಿದ ಮೇಲೆ ಅದಕ್ಕೆ ಸಂಬಂಧಪಟ್ಟ ಪೋಲೀಸರ ವಿಚಾರವನ್ನೂ ಕೂಡ ಹೇಳಬೇಕಾದ್ದು ಅಷ್ಟೇ ಸಮಂಜಸವಾದದ್ದು. ಅನೇಕ ಸಂದರ್ಭಗಳಲ್ಲಿ ಪೋಲೀಸಿನವರು ಡ್ರೈವರುಗಳಿಂದ ಟಿ.ಸಿ. ಮತ್ತು ಡ್ರೈವಿಂಗ್ ಲೈಸೆನ್ಸ್‌ಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಅದರಿಂದ ಅವರಿಗೆ ಬಹಳ ತೊಂದರೆ ಆಗುತ್ತಿದೆ. ಪೋಲೀಸಿನವರು ಅವರ ಮೇಲೆ ಕೇಸನ್ನು ಹಾಕಬೇಕಾಗಿದ್ದರೆ ಆ ಲಾರಿಯ ಅಥವಾ ಬಸ್ಸಿನ ನಂಬರನ್ನು ಡ್ರೈವಿಂಗ್ ಲೈಸೆನ್ಸ್ ವಗೈರೆ ನೋಡಿಕೊಂಡು ಅದರ ಮೇಲೆ ಕೇಸನ್ನು ಹಾಕುವುದಕ್ಕೆ ಬರುತ್ತದೆ. ಹಾಗೇಕೆ ಮಾಡಬಾರದು ? ನಾವು ಕಂಡಕ್ಟರುಗಳು ಮತ್ತು ಡ್ರೈವರುಗಳಿಂದ ಪ್ರಯಾಣಿಕರಿಗೆ ಏನು ತೊಂದರೆಯಾಗುತ್ತಿದೆ ಎಂಬುದನ್ನು ಹೇಳುತ್ತಿದ್ದಾಗ ಪೋಲೀಸಿನವರಿಂದೇನು ತೊಂದರೆಯಾಗುತ್ತಿದೆ ಎಂಬುದನ್ನೂ ಹೇಳಲೇಬೇಕು.

ಇನ್ನು ಟ್ಯಾಕ್ಸನ್ನು ಕಟ್ಟತಕ್ಕ ಬಗ್ಗೆ ಹಿಂದೆ ಚಲನ್ ಮೂಲಕ ಅದನ್ನು ಕಟ್ಟಲು ಬಹಳ ಸರಳವಾದ ಪ್ರೊಸೀಜರನ್ನು ಮಾಡಿತ್ತು. ಈಗ ಹಾಗಿಲ್ಲ. ಇದರಿಂದ ಅನೇಕ ಅಡಚಣೆಗಳಾಗುತ್ತಿದೆ. ಆದುದರಿಂದ ಇದನ್ನು ಸರಳಗೊಳಿಸಬೇಕೆಂದೂ ಮತ್ತು ಇಲಾಖೆಯವರು ಇದರ ಬಗ್ಗೆ ಜನಕ್ಕೆ ಸೂಕ್ತ ತಿಳುವಳಿಕೆಯನ್ನೂ ಕೂಡ ಕೊಡುವಂತೆ ಅವರಿಗೆ ಸೂಚನೆ ಕೊಡಬೇಕೆಂದೂ, ಈ ಪೋಲೀಸಿನವರಿಂದ ಡ್ರೈವರ್—ಕಂಡಕ್ಟರುಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸಿ ನನಗೆ ಈ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಮಾನ್ಯ ಸಭಾಪತಿಯವರೇ, ಮಾನ್ಯ ಸಾರಿಗೆ ಸಚಿವರು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಎಲ್ಲ ಡಿಮ್ಯಾಂಡುಗಳನ್ನೂ ನಾನು ಸಂಪೂರ್ಣವಾಗಿ ಬೆಂಬಲಿಸುತ್ತ ಹಾಗೂ ಅವುಗಳನ್ನು ಅನುಮೋದಿಸುತ್ತ ಕೆಲವು ವಿಷಯಗಳನ್ನು ತಿಳಿಸಬೇಕೆಂದು ಇಚ್ಛೆಪಡುತ್ತೇನೆ.

ನಾನು ಮೊಟ್ಟಮೊದಲನೆಯದಾಗಿ ಈ ಕೆ.ಎಸ್.ಆರ್.ಟಿ.ಸಿ. ಯ ಬಗ್ಗೆ ಹೇಳುವುದಾದರೆ ಅಲ್ಲಿ ಕನಿಷ್ಟಪಕ್ಷ ದಿನಕ್ಕೆ 30 ಬಸ್ಸುಗಳಾದರೂ ಓಡಾಡಬೇಕಾಗಿತ್ತು. ಆದರೆ ಈಗ ಅಲ್ಲಿ ದಿನಕ್ಕೆ 25 ಬಸ್ಸುಗಳು ಮಾತ್ರ ಓಡುತ್ತಿವೆ. ಈ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಓವರ್‌ಲೋಡಿನಿಂದ ಆಗುತ್ತಿರುವ ತೊಂದರೆ ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಮೊನ್ನೆ ತಾನೆ 2—3 ದಿನಗಳ ಕೆಳಗೆ

6—7 ಜನರಿಗೆ ಜಖಂ ಆಗಿ ಆಸ್ಪತ್ರೆಗೆ ಸೇರಿದ್ದಾರೆ. ಈ ಇಲಾಖೆಯಲ್ಲಿ ಇರತಕ್ಕ ದಕ್ಷತೆ ಸಾಲದು. ಇದಿನ್ನೂ ಹೆಚ್ಚಬೇಕು. ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಇದರ ಬಗ್ಗೆ ಶ್ರದ್ಧೆಯಿಲ್ಲ. ನನ್ನ ಕ್ಷೇತ್ರದಲ್ಲೇ 7—8 ವರ್ಷಗಳಿಂದ ಬ್ರೇಕ್‌ಡೌನಾದ ಬಸ್ಸುಗಳು ರಿಪೇರಿಯನ್ನು ಕಾಣದೆ ಅಲ್ಲಿ ಹಾಗೇ ಬಿದ್ದಿರುತ್ತವೆ. ನಮ್ಮ ಆನೇಕಲ್ಲಿನ ಡಿಪೋ ಬಹಳ ದೊಡ್ಡ ಡಿಪೋ. ಅಲ್ಲಿ ಕೆಲಸಮಾಡ ತಕ್ಕ ಶಿಬ್ಬಂದಿವರ್ಗಕ್ಕೆ ಅಲ್ಲಿ ವಸತಿ ಸೌಕರ್ಯಗಳನ್ನು ಸರ್ಕಾರದವರು ಕಲ್ಪಿಸಿಲ್ಲ. ಅಲ್ಲಿ ಬೇಗ ಆ ಶಿಬ್ಬಂದಿವರ್ಗಕ್ಕೆ ವಸತಿಸೌಕರ್ಯಗಳನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಅಲ್ಲಿನ ಮ್ಯಾನೇಜರಿಗೂ ಕೂಡ ವಸತಿಸೌಕರ್ಯವಿಲ್ಲ. ಅವರಿಗೂ ಕೂಡ ವಸತಿಸೌಕರ್ಯವನ್ನು ಕಲ್ಪಿಸಬೇಕು ಇನ್ನು ಬಸ್ಸು ಗಳನ್ನು ಚೆಕ್ ಮಾಡತಕ್ಕ ವಿಚಾರದಲ್ಲಿ ಇಲ್ಲಿ ಮೂರು ಇಲಾಖೆಯವರಿಗೆ ಅಂದರೆ ಕೆ.ಎಸ್.ಆರ್. ಟಿ.ಸಿ. ಅವರು ಮತ್ತು ಮೋಟಾರ್‌ವೆಹಿಕಲ್ಸ್ ಇಲಾಖೆಯವರು ಮತ್ತು ಪೋಲೀಸ್ ಇಲಾಖೆ ಯವರು ಹೀಗೆ ಮೂರು ಏಜನ್ಸಿಯವರು ಚೆಕ್‌ಮಾಡುತ್ತಿದ್ದರೂ ಅದು ಸಕ್ರಮವಾಗಿ ನಡೆಯುತ್ತಿಲ್ಲ. ನನ್ನ ಕ್ಷೇತ್ರದಲ್ಲಿ 7ನೇ ನ್ಯಾಷನಲ್ ಹೈವೇ ಇದೆ. ಅದರ ಮೇಲೆ ಬೆಂಗಳೂರಿಂದ ಸೇಲಂ ಕಡೆಗೆ ಹೋಗತಕ್ಕ ಬಸ್ಸುಗಳೇನಿವೆ ಅವುಗಳಿಗೆ ನಮ್ಮ ಸಾರಿಗೆ ಬಸ್‌ಗಳ ವಿನಾ ಬೇರೆ ಬಸ್ಸುಗಳಿಗೆ ಬೆಂಗಳೂರಿಗೆ ಮತ್ತು ಸೇಲಂಗೂ ನಡುವೆ ಪ್ಯಾಸೆಂಜರುಗಳನ್ನು ಪಿಕಪ್ ಮಾಡುವುದಕ್ಕೆ ಅವಕಾಶ ವಿಲ್ಲ. ಆದಾಗ್ಯೂ ಈ ಚೆಕಿಂಗ್ ಏಜನ್ಸಿಯವರ ಅಧ್ಯಕ್ಷತೆಯಿಂದ ಖಾಸಗೀ ಬಸ್ ಮಾಲೀಕರುಗಳಿಗೆ ಲೈಸೆನ್ಸ್ ಕೊಟ್ಟಿರುವುದರಿಂದ ಅವರು ಎಲ್ಲಿ ಪ್ಯಾಸೆಂಜರ್ ಸಿಕ್ಕರೆ ಅಲ್ಲಿ ಅವರನ್ನು ಪಿಕಪ್ ಮಾಡಿ ಕೊಂಡು ಹೋಗುತ್ತಿದ್ದಾರೆ. ನನ್ನ ಅನುಭವಕ್ಕೆ ಬಂದಿರತಕ್ಕ ಪ್ರಕಾರ ಇದಕ್ಕೆ ಪೋಲೀಸಿನವರೇ ಕಾರಣರು ಅವರೇ ಇದಕ್ಕೆ ಕುಮ್ಮಕ್ಕನ್ನು ಕೊಡುತ್ತಿದ್ದಾರೆಂದು ತಿಳಿದುಬಂದಿದೆ. ಫ್ಲೈಯಿಂಗ್ ಸ್ಕ್ವಾಡಿನವರು ಇವಕ್ಕೆ ಮಧ್ಯೆ ಪ್ಯಾಸೆಂಜರನ್ನು ಪಿಕಪ್‌ಮಾಡುವುದಕ್ಕೆ ಅವಕಾಶ ಕೊಡಬಾರದು. ಇದನ್ನು ಸ್ಟ್ರಿಕ್ಟಾಗಿ ಮಾಡಿದರೆ ನಮ್ಮ ರಾಜ್ಯದ ಸಾರಿಗೆ ಇಲಾಖೆಗೆ ಹೆಚ್ಚು ಆದಾಯ ಬರುತ್ತದೆ. ಇದನ್ನು ಮಾಡದಿದ್ದರೆ ಮುಂದೆ ಈ ಕೆ.ಎಸ್.ಆರ್.ಟಿ.ಸಿ.ಗೆ ಇನ್ನೂ ಹೆಚ್ಚಿನ ಅಪಾಯ ಇರುತ್ತದೆ ಎಂಬುದನ್ನು ಮಾನ್ಯ ಸಚಿವರು ಮರೆಯಬಾರದು. ಇತ್ತೀಚೆಗೆ ಅಲ್ಲಿ ಈ ಕಳ್ಳ ವೆಹಿಕಲ್‌ಗಳ ಸಸ್‌ಪೆನ್‌ಷನ್‌ಗಳು ಜಾಸ್ತಿಯಾಗುತ್ತಿದೆ. ಬಹುಶಃ ಇವುಗಳಲ್ಲಿ ಅನೇಕ ಕೇಸುಗಳು ಓವರ್ ಲೋಡಿಂಗಿಗೆ ಇಲ್ಲವೆ ಕಳ್ಳ ಪರ್ಮಿಟ್ಟುಗಳಿಗೆ ಸಂಬಂಧಪಟ್ಟವುಗಳಾಗಿರಬೇಕೆಂದು ಕಾಣುತ್ತದೆ. ಈಗ ಅಲ್ಲಿಗೆ ಬಂದಿರುವ ಅಧಿಕಾರಿಗಳು ಬಹಳ ಸ್ಟ್ರಿಕ್ಟಾಗಿ ಇವುಗಳನ್ನು ಚೆಕ್ ಮಾಡುತ್ತಿದ್ದಾರೆ. ಜನರೂ ಕೂಡ ಬಹಳ ಹೆದರಿದ್ದಾರೆ ಅಲ್ಲಿಗೆ ಹೊಸದಾಗಿ ಬಂದಿರತಕ್ಕ ಈ ಚೆಕಿಂಗ್ ಅಧಿಕಾರಿಗಳು ಬಹಳ ಸ್ಟ್ರಿಕ್ಟಾಗಿರುವುದರಿಂದಲೂ ಇವರು ಈ ಜನರ ಒಳಸಂಚಿಗೆ ಬೀಳದಿರುವುದರಿಂದಲೂ ಇವರ ಬಗ್ಗೆ ಅನೇಕರು ಅಲ್ಲಿ ಸುಳ್ಳು ಅರ್ಜಿಗಳನ್ನು ಬರೆದು ಮಂತ್ರಿಗಳಿಗೆ, ಇವರನ್ನು ಅಲ್ಲಿಂದ ವರ್ಗಮಾಡ ಬೇಕೆಂದು ಒತ್ತಾಯ ಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಅವಕಾಶ ಕೊಡಬಾರದು.

ಇನ್ನು ಹಿಂದೆಲ್ಲಾ ಈ ಕೆ.ಎಸ್.ಆರ್.ಟಿ.ಸಿ.ಗೆ ಟ್ರಾನ್ಸ್‌ಪೋರ್ಟ್ ಸಚಿವರೇ ಅಧ್ಯಕ್ಷರಾಗಿ ಇರುತ್ತಿದ್ದರು. ಮಾನ್ಯ ರಂಗನಾಥರಾದರೋ ಬಹಳ ದಕ್ಷರೂ ಮತ್ತು ಸೀದಾವಂತರೂ ಆಗಿರು ವುದರಿಂದ ಇವರೇ ಇದರ ಅಧ್ಯಕ್ಷರಾದರೆ ಇದರಲ್ಲಿ ನಡೆಯುತ್ತಿರುವ ಫಿಲ್ಪರೇಜ್ ಬಹಳಮಟ್ಟಿಗೆ ಕಡಿಮೆಯಾಗುವುದೆಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹೌಸಿಂಗ್ ಬೋರ್ಡಿನ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಇದರಲ್ಲಿ ಒಂದು ಏನು ವಿಶೇಷ ಪರಿಸ್ಥಿತಿಯುಂಟಾಗಿದೆ ಎಂದರೆ—ನನ್ನ ಕ್ಷೇತ್ರದಲ್ಲೇ ಬಡವರಿಗೆ 150 ನಿವೇಶನ ಗಳನ್ನೂ ಮತ್ತು ಸುಮಾರು 50 ಕಟ್ಟಿದ ಮನೆಗಳನ್ನೂ ಹಂಚುವುದಕ್ಕೆ ಏರ್ಪಾಡಾಗಿತ್ತು. ಆದರೆ ಅಲ್ಲಿ ಹಾಲಿ ಸೈಟುಗಳೇನು ವಿಲೇವಾರಿ ಆಗಿವೆ ಅವು ಬಡವರಿಗೆ ಸಿಕ್ಕಿಲ್ಲ. ಅದೇ ರೀತಿ ಮನೆಗಳ ವಿಚಾರ ಕೂಡ. ಇನ್ನು ಅಲ್ಲಿ ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ಈ ಕೆಲವು ತೊಂದರೆಗಳಿಂದ ಕಟ್ಟಡದ ಕೆಲಸ ಸ್ಟೇ ಆಗಿತ್ತು. ಆದಾಗ್ಯೂ ಯಾರೋ ಕಂಟ್ರಾಕ್ಟರು ಏನೋ ಸಂಧಾನ ಮಾಡಿ ಅಲ್ಲಿ 40 ಮನೆಗಳನ್ನು ಕಟ್ಟುವುದಕ್ಕೆ ಲೈಸೆನ್ಸನ್ನು ಪಡೆದಿದ್ದಾನೆ. ಇದು ನನಗೆ ಬಹಳ ದುಃಖ ವನ್ನುಂಟು ಮಾಡಿದೆ. ಈ 40 ಮನೆಗಳನ್ನು ಕಟ್ಟಲು ಏನೊಂದು ಅನುಮತಿ ಕೊಡಲಾಗಿದೆ ಆ ಮನೆಗಳೆಲ್ಲಾ ಹಣವಂತರಿಗೂ ಮತ್ತು ಯಾರಿಗೆ ಮನೆಗಳಿವೆಯೋ ಅಂಥವರಿಗೆ ಮನೆಗಳನ್ನು ಕಟ್ಟಲು ಅವಕಾಶ ಕೊಡಲಾಗಿದೆ. ಅಷ್ಟೇ ಅಲ್ಲದೆ ನನ್ನ ಕ್ಷೇತ್ರಕ್ಕೆ ಸೇರಿದ ಹುಸ್ಕೂರು ಎಂಬ ಗ್ರಾಮದಲ್ಲಿ ಈ ಮನೆಗಳನ್ನು ಕಟ್ಟಿಸತಕ್ಕ ವ್ಯವಹಾರದಲ್ಲಿ ಸುಮಾರು 18 ಸಾವಿರದ ತನಕ ದುರ್ವ್ಯವಹಾರ ನಡೆದಿದೆ. ಹರಿಜನರಿಗೆ ಇಲ್ಲಿ ತುಂಬಾ ಅನ್ಯಾಯವಾಗಿದೆ. ಇದನ್ನು ಮಾನ್ಯ ಸಚಿವರು ವಿಚಾರಣೆ ಮಾಡಿಸಿ ತಪ್ಪಿತಸ್ಥರ ಬಗ್ಗೆ ಉಗ್ರ ಕ್ರಮ ಕೈಗೊಳ್ಳಬೇಕಾಗಿ ಪ್ರಾರ್ಥಿಸು ತ್ತೇನೆ. ಇನ್ನು ಜನತಾ ಹೌಸಿಂಗ್ ಸ್ಕೀಮಿಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆಯಾದರೂ

(ಶ್ರೀ ಎಂ. ಟಿ. ರಾಮಸ್ವಾಮಿ)

ಇದನ್ನು ಲ್ಯಾಪ್ಸಾಗುವುದಕ್ಕೆ ಅವಕಾಶ ಕೊಡದಂತೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ ಈ ಯೋಜನೆಯಲ್ಲಿ ಯಾರು ಬಡವರಾಗಿದ್ದಾರೋ ಅವರಿಗೆ ಈ ಅನುಕೂಲ ಸಿಕ್ಕುವಂತೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ. ನವರು ಪ್ರೈವೇಟ್ ಆಪರೇಟರುಗಳಿಗೆ ಲೈಸೆನ್ಸ್ ಕೊಟ್ಟಿರತಕ್ಕ ವಿಚಾರದಲ್ಲಿ ಇದೇ ಸಭೆಯಲ್ಲಿ ಕಳೆದ ಕೆಲವು ದಿನಗಳ ಹಿಂದೆ ನನ್ನ ಪ್ರಶ್ನೆಯೊಂದಕ್ಕೆ ಸರ್ಕಾರದವರು ಉತ್ತರ ಕೊಡುತ್ತ ಇದ್ದ ವೇಳೆಯಲ್ಲಿ ಈ ಇಲಾಖೆಯ ಕೆಲವು ಅಧಿಕಾರಿಗಳು ಈ ಪ್ರೈವೇಟ್ ಓನರುಗಳಿಂದ 8—10 ಸಾವಿರ ಲಂಚ ತೆಗೆದುಕೊಂಡು ಪರ್ಮಿಟ್ಟುಗಳನ್ನು ಕೊಡುತ್ತಿದ್ದಾರೆಂದೂ ಅದನ್ನು ಪತ್ತೆ ಹಚ್ಚುವುದಕ್ಕೆ ಈ ಅಧಿಕಾರಿಗಳು ಅವಕಾಶ ಕೊಡುತ್ತಿಲ್ಲವೆಂದು ಕೆಲವು ಸದಸ್ಯರು ಇಲ್ಲಿ ತಿಳಿಸಿದರು. ಆದರೆ ಅಂಥ ದುರ್ವ್ಯವಹಾರಕ್ಕೆ ಅವಕಾಶ ಕೊಡಬಾರದು. ಅವಕ್ಕೆ ಎಷ್ಟು ಹೆಚ್ಚಿನ ಅವಕಾಶ ಕೊಟ್ಟರೆ ನಮ್ಮ ಸರ್ಕಾರದ ಬಸ್ಸುಗಳಿಗೆ ಅಷ್ಟು ನಷ್ಟ ಜಾಸ್ತಿಯಾಗುತ್ತದೆ ಎಂಬುದನ್ನು ದಯವಾಡಿ ಮಾನ್ಯ ಸಚಿವರು ಮರೆಯಬಾರದು ನನ್ನ ಕ್ಷೇತ್ರದಲ್ಲಿ ರನ್ನಾಗುತ್ತಿರುವ ನಂಬರ್ 7ನೇ ನ್ಯಾಷನಲ್ ಹೈವೇನಲ್ಲಿ ಪ್ರೈವೇಟ್ ಬಸ್ಸಿನವರಿಗೆ ಕರ್ನಾಟಕದಿಂದ—ತಮಿಳುನಾಡಿಗೆ ಹೋಗತಕ್ಕ ಬಸ್ಸುಗಳು ಈ ರೂಟಿನಲ್ಲಿ ಮಧ್ಯೆ ಪ್ಯಾಸೆಂಜರುಗಳನ್ನು ಪಿಕಪ್ ಮಾಡುವುದಕ್ಕೆ ಖಂಡಿತ ಅವಕಾಶ ಕೊಡಬಾರದೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

† ಶ್ರೀ ಕೆ. ಎಚ್. ರಂಗನಾಥ್ (ಸಾರಿಗೆ ಮತ್ತು ವಸತಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಒಂದು ಬೇಡಿಕೆಗಳ ಮೇಲೆ ಈ ಮಾನ್ಯ ಸಭೆಯ ಸದಸ್ಯರು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ವಂದನೆಗಳನ್ನರ್ಪಿಸುತ್ತಿದ್ದೇನೆ. ಇನ್ನು ಈ ಡಿಮ್ಯಾಂಡುಗಳ ಬಗ್ಗೆ ಯಾವ ಒಂದು ಕಟ್‌ಮೋಷನ್ ಕೂಡ ಬಂದಿಲ್ಲ. ಆದುದರಿಂದ ಸಭೆಯವರಿಗೆ ಈ ಡಿಮ್ಯಾಂಡುಗಳಿಗೆ ತಮ್ಮ ಒಪ್ಪಿಗೆ ಕೊಡುವುದಕ್ಕೆ ಸಮ್ಮತಿ ಇದೆಯೆಂದು ಗೊತ್ತಾಗುತ್ತದೆ. ಇನ್ನು ಕೆಲವು ಮಾನ್ಯ ಸದಸ್ಯರುಗಳೇನು ಕೆಲವೊಂದು ಟೀಕೆಗಳನ್ನು ಮತ್ತು ಸಲಹೆಗಳನ್ನು ಮಾಡಿದ್ದಾರೆ ಅವುಗಳನ್ನು ಸರ್ಕಾರ ತನ್ನ ಗಮನದಲ್ಲಿ ಇಟ್ಟುಕೊಂಡು ಅವುಗಳನ್ನು ಸರಿಯಾದ ರೀತಿಯಲ್ಲಿ ಮುಂದುವರಿಸುವ ಬಗ್ಗೆ ಮಾನ್ಯ ಸಭೆಗೆ ನಾನು ಭರವಸೆಕೊಡುತ್ತೇನೆ.

ಈ ಹೌಸಿಂಗ್ ಖಾತೆ ಏನಿದೆ ಇದು ಸೋಷಿಯಲ್ ಸರ್ವಿಸ್ ಮಾಡುವ ಖಾತೆ. ಆದುದರಿಂದ ಯಾವುದೇ ದುಡಿಮೆ ಮಾಡದಿದ್ದರು ಕೂಡ ಸಮಾಜದಲ್ಲಿ ಮನೆ ಇಲ್ಲದವರಿಗೆ ಅವರು ಮೇಲು ವರ್ಗದವರಾಗಬಹುದು, ಮಧ್ಯಮ ವರ್ಗದವರಿರಬಹುದು ಅಥವ ಕೆಳ ವರ್ಗದವರಿರಬಹುದು, ಅವರಿಗೆ ವಸತಿ ವ್ಯವಸ್ಥೆ ಮಾಡಿಕೊಡುವ ಕಾರ್ಯಕ್ರಮ ಸರಕಾರ ಹಾಗೂ ಹೌಸಿಂಗ್ ಬೋರ್ಡ್ ಮೂಲಕ ಮತ್ತು ಜನತಾ ವಸತಿ ಸ್ಕೀಂ ಮೇರೆಗೆ ತಾಲ್ಲೂಕು ಬೋರ್ಡ್ ಬಿ. ಡಿ. ಓ. ಮೂಲಕ ಮಾಡಿಕೊಡುವ ಕ್ರಮ ಕೈಗೊಂಡಿದ್ದೇವೆ. ಇವತ್ತು ಹೌಸಿಂಗಿಗೆ ಸರಕಾರ ಸುಮಾರು 3 ಕೋಟಿ 38 ಲಕ್ಷ ರೂಪಾಯಿಗಳನ್ನು ತೊಡಗಿಸಿದೆ. ಹೌಸಿಂಗ್ ಬೋರ್ಡ್ ವಸತಿಯಿಂದ ಕೆಲವು ಕಾರ್ಯಕ್ರಮ ನಾವು ತೆಗೆದುಕೊಂಡಿದ್ದೇವೆ. ಇದರಲ್ಲಿ ಸಭೆಯ ಗಮನಕ್ಕೆ ತರುವುದಾದರೆ 1972—73, 73—74 ಮತ್ತು 74—75ರಲ್ಲಿ ಸಬ್ಸಿಡೈಜ್ಡ್ ಹೌಸಿಂಗ್ ಸ್ಕೀಮಿನಂತೆ 580 ಮನೆಗಳನ್ನು ನಿರ್ಮಿಸಲ ಸುಮಾರು 55 ಲಕ್ಷ ರೂಪಾಯಿ ಖರ್ಚಾಗಿದೆ. 1973—74 ರಲ್ಲಿ 878 ಮನೆಗಳಾಗಿವೆ, ಅದಕ್ಕೆ ಸುಮಾರು 2[illegible] ಲಕ್ಷ ರೂಪಾಯಿ ಖರ್ಚಾಗಿದೆ. 1974—75ಕ್ಕೆ 2500 ಮನೆಗಳನ್ನು ಕಟ್ಟುವ ಅಂದಾಜಿದೆ. ಸಬ್ಸಿಡೈಸ್ಡ್ ರೂರಲ್ ಹೌಸಿಂಗ್ ಸ್ಕೀಂ ಮತ್ತು ಸಬ್ಸಿಡೈಜ್ಡ್ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂ ಮತ್ತು ಲೋ ಇನ್‌ಕಂ ಹೌಸಿಂಗ್ ಸ್ಕೀಂ, ಈ ಮೂರೂ ಸೇರಿ 1972—73 ರಲ್ಲಿ 1300 ಮನೆಗಳಿಗೆ 2 ಕೋಟಿ 3 ಲಕ್ಷ 78 ಸಾವಿರ ರೂಪಾಯಿ ಖರ್ಚಾಗಿದೆ, 1973—74ರಲ್ಲಿ 1092 ಮನೆಗಳಿಗೆ 1 ಕೋಟಿ 50 ಲಕ್ಷ ರೂಪಾಯಿ ಖರ್ಚಾಗಿದೆ. ಮಿಡ್ಲ್ ಇನ್‌ಕಂ ಹೌಸಿಂಗ್ ಸ್ಕೀಂನಲ್ಲಿ 1974—75ನೆಯ ಸಾಲಿಗೆ 1350 ಮನೆಗಳಿಗೆ 2 ಕೋಟಿ 50 ಲಕ್ಷ ರೂಪಾಯಿಗಳ ಅಂದಾಜಾಗಿದೆ. ಮಿಡ್ಲ್ ಇನ್‌ಕಂ ಹೌಸಿಂಗ್ ಸ್ಕೀಂನಲ್ಲಿ 1972—73ಕ್ಕೆ 470 ಮನೆಗಳಿಗೆ 1 ಕೋಟಿ 42 ಲಕ್ಷ ಖರ್ಚಾಗಿದೆ. 1973—74ಕ್ಕೆ 401 ಮನೆಗಳಿಗೆ 85 ಲಕ್ಷ ರೂಪಾಯಿ ಖರ್ಚಾಗಿದೆ. ರೂರಲ್ ಹೌಸಿಂಗ್ ಸ್ಕೀಂನಲ್ಲಿ 1972—73 ಕ್ಕೆ 1065 ಮನೆಗಳಿಗೆ 76 ಲಕ್ಷದ 49 ರೂಪಾಯಿ ಖರ್ಚಾಗಿದೆ. 1973—74ಕ್ಕೆ 514 ಮನೆಗೆ 35 ಲಕ್ಷ ರೂಪಾಯಿ ಖರ್ಚಾಗಿದೆ 4 ಕೋಟಿ ರೂಪಾಯಿಗಳ ಸಾಲ ಕೊಟ್ಟು 20 ಕಂತುಗಳಲ್ಲಿ ವಸೂಲು ಮಾಡುವ ಕಾರ್ಯಕ್ರಮವಿದೆ ಇದು ಬಹಳವಾಗಿ ಹಳ್ಳಿಗಾಡಿನಲ್ಲಿರುವ ವೀಕರ್ ಸೆಕ್ಷನ್ ಸಣ್ಣ ಸಣ್ಣ ರೈತರಿಗೆ ಸಹಾಯಮಾಡುವ

ಕಾರ್ಯಕ್ರಮ. ಇದರಂತೆ 1683 ಮನೆಗಳಾಗಿವೆ. 1973—74ರಲ್ಲಿ 3079 ಮನೆಗಳನ್ನು ನಿರ್ಮಿಸುವ ಕಾರ್ಯಕ್ರಮವಿತ್ತು. ಅದಕ್ಕೆ ಬೇಕಾದ ಹಣ 90 ಲಕ್ಷ ರೂಪಾಯಿ. ಇದಲ್ಲದೆ ಸೆಂಟ್ರಲ್ ಹೌಸಿಂಗ್ ಸ್ಕೀಂ ಮತ್ತು ಪ್ಲಾಂಟೇಷನ್ ಲೇಬರ್ ಹೌಸಿಂಗ್ ಸ್ಕೀಂ ಬೇರೆ ಇದೆ. ಇದರ ಕೆಳಗೆ ಸಹ ಕೆಲಸವಾಗಿದೆ. 1973—74 ರಲ್ಲಿ 300 ಮನೆಗಳ ಕೆಲಸವಾಗಿದೆ. ಇದರ ಜೊತೆಗೆ ಕೇಂದ್ರದ ಒಂದು ಕಾರ್ಯಕ್ರಮವೇನಿತ್ತು, ವಸತಿ ಹೀನರಿಗೆ ವಸತಿ ಒದಗಿಸುವುದು ಅದಕ್ಕೆ ಆಗುವ ಖರ್ಚನ್ನು ಮಾಫತಾಗಿ ಸರಕಾರ ಕೊಡಬೇಕು, ಆ ಕಾರ್ಯಕ್ರಮ 1971 ರಲ್ಲಿ ಜಾರಿಗೆ ಬಂದಿದೆ. ಆ ಕಾರ್ಯಕ್ರಮದಂತೆ ಸರಕಾರಿ ಭೂಮಿಯನ್ನು ಮೊದಲು ಕೊಡಲಾಗುವುದು. ಅದಿಲ್ಲದಿರುವ ಕಡೆ ಅಕ್ವೈರ್ ಮಾಡಿ ಕೊಡಲಾಗುವುದು. ಇದರ ಜೊತೆಗೆ ಅಕ್ವೈರ್ ಮಾಡಲು ತಗಲುವ ಖರ್ಚನ್ನು ಕೇಂದ್ರ ಸಂಪೂರ್ಣವಾಗಿ ಕೊಡುವುದು ಒಂದು ಸೈಟಿಗೆ 150 ರೂಪಾಯಿ ಡೆವಲಪ್‌ಮೆಂಟ್ ಛಾರ್ಜಿಗೆ ಖರ್ಚು ಮಾಡುವುದು. ಇದನ್ನು ಕೇಂದ್ರ ಸರಕಾರ ಕೊಡುವುದು. ಈ ಕಾರ್ಯಕ್ರಮದ ಪ್ರಕಾರ ಈಗಾಗಲೆ ಈ ಸಭೆಗೆ ಗೊತ್ತಾಗಿರುವಂತೆ 2 ಲಕ್ಷ ಚಿಲ್ಲರೆ ಸೈಟುಗಳನ್ನು ರಾಜ್ಯ ಸರಕಾರ ಕೊಟ್ಟಿದೆ. ಇದು ಒಳ್ಳೆಯ ಕೆಲಸವೆಂದು ಮಾನ್ಯ ಸದಸ್ಯರು ಒಪ್ಪುವರೆಂದು ನಂಬಿದ್ದೇನೆ. ನಮ್ಮ ಪಕ್ಷವು ಅಧಿಕಾರಕ್ಕೆ ಬಂದವೇಳೆ ಜಾರಿಗೆ ಕೊಟ್ಟ ಕಾರ್ಯಕ್ರಮವಿದು. ಇದರ ಅಂಗವಾಗಿ 2 ಲಕ್ಷ ಚಿಲ್ಲರೆ ನಿವೇಶನಗಳನ್ನು ಕೊಡಲಾಗಿದೆ. ಇದನ್ನು ಕೇಂದ್ರದಿಂದ ಬಂದ ಹಣದಲ್ಲಿ ಮಾಡಲಾಗಿದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯ ಸರಕಾರವೇ ಈ ಖರ್ಚನ್ನು ವಹಿಸಬೇಕು ಎಂದು ಕೇಂದ್ರ ಸರಕಾರ ಹೇಳಿರುವುದರಿಂದ ಇದನ್ನು ಮುಂದುವರೆಸಲು ರಾಜ್ಯ ಸರಕಾರ ಕಾರ್ಯಕ್ರಮ ಹಾಕಿದೆ. ಇದರ ಜೊತೆಗೆ ರೂರಲ್ ಹೌಸಿಂಗ್ ಅಲ್ಲದೆ ಅದಕ್ಕಿಂತ ಕಡಿಮೆ ದರ್ಜೆಯ ಮನೆಗಳನ್ನು 2500 ರೂಪಾಯಿ ಬೆಲೆಯೊಳಗೆ ಜನತಾ ಸ್ಕೀಂ ಪ್ರಕಾರ ನಿರ್ಮಿಸಬೇಕು. 5 ಕೋಟಿ ರೂಪಾಯಿಗಳಲ್ಲಿ 26 ಸಾವಿರ ಮನೆಗಳನ್ನು ಕಟ್ಟಬೇಕು ಎಂದು ಯೋಚನೆ ಮಾಡಲಾಗಿತ್ತು. ಆದರೆ ಹಣದ ಕೊರತೆಯಿಂದ ಪೂರ್ಣವಾಗಿ ಕೆಲಸವಾಗಲಿಲ್ಲ. ಆದರೆ ಒಂದು ಸಂತೋಷದ ವಿಚಾರ, ಸೇಕಡ 50 ರಷ್ಟಾಗಿದೆ, ಒಂದೇ ವರ್ಷದಲ್ಲಿ 14 ಸಾವಿರ ಮನೆಗಳನ್ನು ಕಟ್ಟಲು ಪ್ರಾರಂಭಿಸಿ ಅವು ಬೇರೆ ಬೇರೆ ಹಂತಗಳಲ್ಲಿವೆ. ಮತ್ತು ಈ ಮನೆಗಳ ಕೆಲಸವನ್ನು ಪೂರ್ಣ ಮಾಡಬೇಕು ಮುಂಗಾರು ಮಳೆ ಪ್ರಾರಂಭವಾಗುವುದರೊಳಗೆ ಪೂರ್ಣಮಾಡಬೇಕು ಎಂದು ಕಾರ್ಯಕ್ರಮ ಹಾಕಲಾಗಿದೆ ಮತ್ತು ಇದಕ್ಕೆ ಹಣ ಸಹ ಕೊಡಲಾಗಿದೆ. ಹಣಕಾಸಿನ ಮಂತ್ರಿಗಳು ಕೂಡ ಈ ಕೆಲಸವನ್ನು ಮುಂದುವರಿಸಬೇಕೆಂದು ಹೇಳಿದರು. ಇದಲ್ಲದೆ 10 ಸಾವಿರ ಮನೆಗಳನ್ನು ನಿರ್ಮಿಸುವ ಕೆಲಸ ಕೂಡ ಕೈಗೊಳ್ಳುತ್ತೇವೆಂದೂ ಹೇಳಿದ್ದಾರೆ. ಇಂದು ಸಮಾಜದಲ್ಲಿ ಅಶಕ್ತರೇನಿದ್ದಾರೆ ಅವರಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಸಬ್ಸಿಡೈಜ್ಡ್ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂ, ರೆಂಟಲ್ ಹೌಸಿಂಗ್ ಸ್ಕೀಂ, ಲೋ ಇನ್‌ಕಂ ರೆಂಟಲ್ ಹೌಸಿಂಗ್ ಸ್ಕೀಂ, ರೂರಲ್ ಹೌಸಿಂಗ್ ಸ್ಕೀಂ, ಜನತಾ ಹೌಸಿಂಗ್ ಸ್ಕೀಂ ಮುಂತಾದ ಯೋಜನೆಗಳನ್ನು ಕೈಗೊಂಡಿದ್ದೇವೆ. ಅಶಕ್ತರಿಗೆ, ದುರ್ಬಲರಿಗೆ, ಅತ್ಯಗತ್ಯವಾಗಿರುವವರಿಗೆ ಮನೆಗಳ ಅವಕಾಶ ಮಾಡಿಕೊಡುವ ಈ ಕಾರ್ಯಕ್ರಮವನ್ನು ಈ ಸಭೆ ಮೆಚ್ಚುವುದೆಂದು ನಾನು ನಂಬಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅಶಕ್ತರಿಗೆ ಹಂಚುವಾಗ ಇದನ್ನು ಕೆಲವರು ಸಶಕ್ತರು ದುರುಪಯೋಗ ಮಾಡಿಕೊಂಡಿದ್ದಾರೆ, ಬಡವರ ಹೆಸರಿನಲ್ಲಿ ಮೋಸವಾಗುತ್ತಿದೆ. ಉದಾಹರಣೆಗೆ ನನ್ನ ಬಳಿ ಪಟ್ಟಿ ಇದೆ. ಬೆಂಗಳೂರು ಉತ್ತರ ತಾಲ್ಲೂಕು ಮಾಲತ್ತನ ಹಳ್ಳಿಯ ಒಂದೇ ಕುಟುಂಬದ 8 ಜನರು, ಹಾಗೆಯೇ ಮತ್ತೊಂದು ಕುಟುಂಬದವರು ಜಾತಿಯ ಹೆಸರನ್ನು ಬದಲಾಯಿಸಿಕೊಂಡು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಕಾರ್ಯಕ್ರಮ ಬೇರೆ, ಅಲ್ಲಲ್ಲಿ ಆಗುವ ಲೋಪದ ವಿಚಾರ ಬೇರೆ. ಲೋಪವಾಗಿರುವುದನ್ನು ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳೋಣ, ನನಗೆ ಅದು ಗೊತ್ತಿದೆ. 15 ದಿವಸಗಳ ಕೆಳಗೆ ಒಬ್ಬರು ಮಾನ್ಯ ಸದಸ್ಯರ ಬಳಿ ಇರುವಂಥ ಒಂದು ಫೈಲನ್ನು ಕೊಟ್ಟಿದ್ದಾರೆ. ಅದು ಟ್ರಸ್ಟ್ ಬೋರ್ಡಿನಲ್ಲಾಗುವ ವ್ಯವಹಾರ, ಅದನ್ನು ಶ್ರೀಮಾನ್ ಲಿಂಗಪ್ಪನವರು ಪ್ರಸ್ತಾಪಿಸಿದ್ದಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಬರುವುದಿಲ್ಲ.

ಟ್ರಸ್ಟ್ ಬೋರ್ಡಿನಲ್ಲಿ ಹಂಚಿಕೆ ಯಾವ ರೀತಿ ಮಾಡುತ್ತಾರೆ, ಅಲ್ಲಿ ಏನಾಗುತ್ತದೆ ಎನ್ನುವುದಕ್ಕೆ ಸ್ಪಷ್ಟವಾದ ರೂಲ್ಸ್ ಇವೆ. ಆದುದರಿಂದ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಅದನ್ನು ಕಾರ್ಯಗತ ಮಾಡುವುದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವನ್ನು ಸರ್ಕಾರದ ಗಮನಕ್ಕೆ ತಂದರೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳುತ್ತೇನೆ.

(ಶ್ರೀ ಕೆ. ಎಚ್. ರಂಗನಾಥ್)

5-30 P. M.

ಹೌಸಿಂಗ್ ಪ್ರೋಗ್ರಾಂ ಏನಿದೆ ಅದರಲ್ಲಿ ಸರ್ಕಾರದ ಈಗಿನ ಉದ್ದೇಶವಾದರೂ ಇನ್ನು ಮುಂದೆ ಹೆಚ್ಚು ಹೆಚ್ಚು ಮಿಡಲ್ ಇನ್‌ಕಂ ಗ್ರೂಪ್ ಹೌಸಿಂಗ್ ಕಾರ್ಯಕ್ರಮವಿದ್ದಿತ್ತು, ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡದೆ ಲೋ ಇನ್‌ಕಂ ಗ್ರೂಪ್ ಮತ್ತು ಸಬ್ಸಿಡೈಸ್ಡ್ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂ ಮತ್ತು ಜನತಾ ಹೌಸಿಂಗ್ ಸ್ಕೀಂ ಈ ತರಹ ಮನೆಗಳನ್ನು ಕಟ್ಟತಕ್ಕ ಕೆಲಸವನ್ನು ಹೆಚ್ಚು ಮಾಡಬೇಕು ಎಂದು ಇದೆ. ಹೆಚ್ಚು ಮನೆಗಳನ್ನು ಕಟ್ಟಿಸಿ, ಮನೆ ಇಲ್ಲದವರಿಗೆ ಮನೆಗಳನ್ನು ಒದಗಿಸಿಕೊಡುವ ಕೆಲಸವನ್ನು ಮಾಡಬೇಕು ಎನ್ನುವುದು ಸರ್ಕಾರದ ನೀತಿ. ಅದರಲ್ಲಿಯೂ ರೂರಲ್ ಹೌಸಿಂಗ್ ಸ್ಕೀಂ ಹೆಚ್ಚು ಹೆಚ್ಚಾಗಿ ತೆಗೆದುಕೊಂಡು ಹಳ್ಳಿಗಾಡಿನಲ್ಲಿ ಮನೆಗಳಿಲ್ಲದೆ ಇರುವವರಿಗೆ ಮನೆಗಳನ್ನು ಕಟ್ಟಿಕೊಡಬೇಕು, ಅದಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ಒಂದೊಂದು ಸಾರಿ ನಮ್ಮ ಆಸೆ ಎಷ್ಟು ಹೆಚ್ಚಾಗಿದ್ದರೂ ಹಣದ ಅಭಾವದಿಂದ ತೊಂದರೆಯಾಗತಕ್ಕ ಪರಿಸ್ಥಿತಿ ಬರುತ್ತದೆ. ಅದನ್ನೇ ದೊಡ್ಡದು ಮಾಡಿ ಮಾನ್ಯ ತಿಮ್ಮಪ್ಪನವರು, ಬಂಗಾರಪ್ಪನವರು, ಲಿಂಗಪ್ಪನವರು ಅವರ ದೃಷ್ಟಿಯಲ್ಲಿಯೇ ನೋಡುವುದನ್ನು ಬಿಟ್ಟು ಸ್ವಲ್ಪ ಸರ್ಕಾರದ ದೃಷ್ಟಿಯಲ್ಲಿಯೂ ನೋಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನ ಬಗ್ಗೆ ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ಸತ್ಯನಾರಾಯಣ ಸಿಂಗ್, ಶ್ರೀ ಅಮ್ಮಣ್ಣವರ್, ಶ್ರೀ ಬಂಗಾರಪ್ಪ ಮತ್ತು ಕೆಲವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಎಂದ ತಕ್ಷಣ ಜನರಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ವಿಚಾರವನ್ನು ತೆಗೆದುಕೊಂಡು ಅಲ್ಲಿ ಏನು ನಡೆದಿದೆ ಎನ್ನುವುದನ್ನು ನೋಡುತ್ತಾರೆ. ಅವರಿಗೆ ಮೊದಲು ಕಾಣುವುದು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್. ಎಲ್ಲರೂ ರೋಡ್ ಟ್ರಾನ್ಸ್‌ಪೋರ್ಟ್ ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ನ್ಯೂನತೆಗಳಿವೆ, ಅವುಗಳನ್ನು ಸರಿ ಮಾಡಬೇಕಾಗಿದೆ ಒಂದು ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನ ವಾರ್ಷಿಕ ವರದಿ ಸಭೆಯ ಮುಂದೆ ಬರುತ್ತಿಲ್ಲವೆಂದೂ ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದೂ ಪ್ರಸ್ತಾಪ ಮಾಡಿದ್ದಾರೆ. ನನ್ನ ಅಭಿಪ್ರಾಯವೂ ಕೂಡ ಅದೇ ಆಗಿದೆ. ಪ್ರತಿ ವರ್ಷದ ವರದಿ ಸಭೆಯ ಮುಂದೆ ಬಂದು ಅದರ ಬಗ್ಗೆ ಚರ್ಚೆ ನಡೆದು ಮಾನ್ಯ ಸದಸ್ಯರು ಏನು ಅಭಿಪ್ರಾಯ ಕೊಡುತ್ತಾರೆ ಅದರ ತಳಹದಿಯ ಮೇಲೆ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು ಎಂದು ಸರ್ಕಾರದ ಅಭಿಪ್ರಾಯವಿದೆ- ಅದಕ್ಕೆ ನಾನು ವ್ಯವಸ್ಥೆ ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಕೇವಲ 40 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ 15 ಕೋಟಿ ರೂಪಾಯಿ ಸರ್ಕಾರಕ್ಕೆ ಆದಾಯ ತರತಕ್ಕ ಖಾತೆ. ಇದರಲ್ಲಿ ಸ್ವಲ್ಪ ಲೋಪಗಳಿರುತ್ತವೆ. ಏಕೆಂದರೆ ನಾವೆಲ್ಲರೂ ಕೂಡ ಇದಕ್ಕೆ ಭಾಗಿಗಳು ಎಂದರೆ ತಪ್ಪಾಗಲಾರದು. ಸಮಾಜ ಹೇಗಿರುತ್ತದೆಯೋ, ಆ ಸಮಾಜದಿಂದ ಬಂದಿರತಕ್ಕ ಜನರೇ ಬೇರೆ ಬೇರೆ ಕ್ಯಾಪಾಸಿಟಿಯಲ್ಲಿ ಬೇರೆ ಬೇರೆ ಕಡೆ ಕೆಲಸಮಾಡುವುದರಿಂದ ಆ ಮನೋಭಾವ ಬರುತ್ತದೆ ಎನ್ನುವ ಮಾತನ್ನು ಹೇಳಿದರೆ ತಪ್ಪಾಗಲಾರದು. ತಪ್ಪು ಮಾಡಬಾರದು. ಆದರೆ ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು ಎನ್ನುವುದು ಸರ್ಕಾರದನೀತಿ. ಅದನ್ನು ಕಡ್ಡಾಯವಾಗಿ ಜಾರಿಗೆ ಕೊಡುವುದರಲ್ಲಿ ನಾನು ಹಿಂದೆ ಮುಂದೆ ನೋಡುವುದಿಲ್ಲವೆನ್ನುವ ಮಾತನ್ನು ಈ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ಬಗ್ಗೆ ಜನರು ಗೌರವದಿಂದ ಇರತಕ್ಕದ್ದು ಅವರ ಕರ್ತವ್ಯವಾಗಿರುತ್ತದೆ. ಈ ಮನೆಯ ಸದಸ್ಯರ ಕರ್ತವ್ಯವಾಗಿರುತ್ತದೆ. ಆ ರೀತಿ ಜನಾಭಿಪ್ರಾಯವನ್ನು ರೂಪಿಸತಕ್ಕದ್ದಾದರೂ ನಮ್ಮ ಕರ್ತವ್ಯವಾಗಿರುತ್ತದೆ ಎನ್ನುವುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಸರ್ಕಾರ ಜನತೆಗೆ ಹೆದರಬೇಕು, ಜನ ಸರ್ಕಾರಕ್ಕೆ ಹೆದರಬೇಕು. ಸರ್ಕಾರಕ್ಕೆ ಜನತೆಯ ಬಗ್ಗೆ ಗೌರವವಿರಬೇಕು, ಸರ್ಕಾರ ಜನಭಿಪ್ರಾಯಕ್ಕೆ ಮನ್ನಣೆ ಕೊಡಬೇಕು. ಅದೇ ಸಮಯದಲ್ಲಿ ಜನ ಕೂಡ ಸರ್ಕಾರದ ಬಗ್ಗೆ ಗೌರವದಿಂದ ಇರಬೇಕು. ಕಾನೂನಿಗೆ ಎಷ್ಟು ಮಾನ್ಯತೆ ಕೊಡಬೇಕಾಗುತ್ತದೆಯೋ ಅಷ್ಟು ಕೊಡಬೇಕಾಗುತ್ತದೆ.

ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಆಗುವ ಖರ್ಚು ಆದಾಯಕ್ಕೆ ಹೋಲಿಸಿದರೆ ಕೇವಲ 25 ಪರ್ಸೆಂಟ್. ಈ ಇಲಾಖೆಯನ್ನು ವ್ಯವಸ್ಥಿತವಾಗಿ ವಿಸ್ತಾರ ಮಾಡತಕ್ಕ ಕಾಲ ಸನ್ನಿಹಿತವಾಗಿದೆ. ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಹೆಚ್ಚು ವಿಸ್ತಾರವಾಗಬೇಕೆಂದು ಇನ್‌ಅಡಿಕ್ವೇಟ್ ಸ್ಟಾಫ್ ಇವೆ ಎಂದೂ ಶ್ರೀ ಅಮ್ಮಣ್ಣವರ್ ಹೇಳುತ್ತಿದ್ದರು. ಒಂದೇ ಮಾತಿನಲ್ಲಿ ಕೋಣಂದೂರು ಲಿಂಗಪ್ಪನವರು ಹೇಳಿದರು, ಆರ್. ಟಿ. ಓ. ಆಫೀಸಿಗೆ ಹೋಗುವುದೇ ಬೇಡ, ಕೈ ಹಿಡಿದುಕೊಳ್ಳುತ್ತದೆ ಎಂದು ಹೇಳಿದರು. ಈ ಮಾತು ನೂರಕ್ಕೆ ನೂರರಷ್ಟು ಸತ್ಯವಿಲ್ಲದೆ ಇದ್ದರೂ ಕೂಡ ಸ್ವಲ್ಪ ಸತ್ಯವಿದೆ ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಈ ಆಫೀಸುಗಳಿಗೆಲ್ಲ ಓಡಾಡಿರುವವನು. ಶೀಘ್ರವಾಗಿ ಅಲ್ಲಿ ಏನು ಅವ್ಯವಸ್ಥೆ ಇದೆ ಅದನ್ನು ಸರಿ ಮಾಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ ಅನ್ನುವ ಮಾತನ್ನು ಹೇಳುತ್ತೇನೆ.

ಕೆಲವಾರು ಕಾನೂನುಗಳನ್ನು ಮಾರ್ಪಾಟು ಮಾಡಬೇಕೆಂದು ಸರ್ಕಾರದ ಇಚ್ಛೆ ಇದೆ. ನಾನಾ ವಾಹನಗಳ ಟ್ಯಾಕ್ಸನ್ನು ಕಟ್ಟುವಾಗ ಒಂದೇ ಸಾರಿ ರಷ್ ಆಗುತ್ತದೆ. ಅದನ್ನು ತಪ್ಪಿಸಿ ಸೂಕ್ತವಾಗಿ ತಿದ್ದುಪಡಿ ಮಾಡಿ, ಯಾವಾಗ ಒಂದು ವಾಹನದ ರಿಜಿಸ್ಟ್ರೇಷನ್ ಆಗುತ್ತದೆ ಅಲ್ಲಿಂದ ಒಂದು ವರ್ಷ ಎಂದು ಮಾಡುವುದು ಈ ರೀತಿಯಲ್ಲಿ ಮಾಡಿದರೆ ವರ್ಷದಲ್ಲಿ 365 ದಿವಸವೂ ಟ್ಯಾಕ್ಸ್ ಕಟ್ಟಲು ಅವಕಾಶವಾಗುವಂತೆ ಕಂಡೀಶನ್ ಎನ್‌ಫೋರ್ಸ್ ಮಾಡುವುದು. ಹಾಗೆಯೇ 300 ರೂಪಾಯಿ ಮತ್ತು ಅದಕ್ಕಿಂತ ಕೆಳಗೆ ಕಟ್ಟತಕ್ಕ ವಾಹನಗಳೇನಿವೆ ಅದನ್ನು ವರ್ಷಕ್ಕೆ ಒಂದೇ ಸಲ ಕಟ್ಟುವ ರೀತಿಯಲ್ಲಿ ಮಾಡುವುದು. ಹಾಗೆಯೇ ಫ್ಲೀಟ್ ಓನರ್ಸ್ ಏನಿದ್ದಾರೆ ಅವರು ಲಂಪ್‌ಸಂ ಆಗಿ ಒಂದೇ ಸಾರಿ ಟ್ಯಾಕ್ಸ್ ಕೊಡಬೇಕೆಂದು ಕಾನೂನು ಇದೆ. ಅದನ್ನು ತಿದ್ದುಪಡಿ ಮಾಡಿ ಕಂತುಗಳಲ್ಲಿ ಕೊಡುವ ವ್ಯವಸ್ಥೆ ಮಾಡಬೇಕು ಎನ್ನುವ ವಿಚಾರವಿದೆ. ಈಗ ಟ್ಯಾಕ್ಸ್ ಕೊಡದೆ ಓಡಿಸತಕ್ಕ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಾದರೆ ಈ ಹೊತ್ತು ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಸುಮಾರು 1 ಲಕ್ಷ 71 ಸಾವಿರ ವಾಹನಗಳಿವೆ. ಅದೇ ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು ಕಡಮೆ ಟ್ಯಾಕ್ಸ್ ಕೊಡದೆ ಓಡಿಸುವ ವಾಹನಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಎಷ್ಟೇ ಫ್ಲೈಯಿಂಗ್ ಸ್ಕ್ವಾಡ್ ಇಟ್ಟರೂ ಕೂಡ ಕಾನೂನನ್ನು ತಪ್ಪಿಸತಕ್ಕ ಪ್ರವೃತ್ತಿ ಆಗಿದೆಯೋ ಏನೋ ಎಂದರೆ ತಪ್ಪಾಗಲಾರದು. ಕಾನೂನಿಗೆ ವಿರುದ್ಧವಾಗಿ ನಡೆಯುವ ಪ್ರವೃತ್ತಿ ಬೆಳೆಯುತ್ತಿದೆ ಎಂದರೆ ತಪ್ಪಾಗಲಾರದು. ಟ್ಯಾಕ್ಸ್ ಕೊಡದೆ ಇರುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅದಕ್ಕೋಸ್ಕರ ಈಗಿರತಕ್ಕ ಕಾನೂನಿನಲ್ಲಿ ವಾಹನಗಳನ್ನು ಸೀಜ್ ಮಾಡಲು ಸಾಧ್ಯವಿಲ್ಲ. ಹಾಗೆ ಸೀಜ್ ಮಾಡಲು ಅನುಕೂಲವಾಗುವ ಹಾಗೆ ತಿದ್ದುಪಡಿ ಮಾಡಬೇಕು ಎಂದು ಇದ್ದೇವೆ. ಶ್ರೀ ಪುಟ್ಟರಂಗನಾಥ್ ಅವರು ಮಾತನಾಡುವಾಗ ಟಿ ಪಿ. ಜಿ. ಮತ್ತು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಲ್ಲಿ ಮರ್ಜ್ ಮಾಡಿ ಅಥವಾ ಏನಾದರೂ ಬೇರೆ ರೀತಿ ಮಾಡಬೇಕು ಎಂದು ಹೇಳಿದರು. ಭೂತಲಿಂಗಂ ಕಮಿಟಿ ಸಿಫಾರಸಿನಲ್ಲಿ ಕೂಡ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಆ ರೀತಿಯಲ್ಲಿ ಸೂಕ್ತವಾದ ತಿದ್ದುಪಡಿ ಮಾಡಬೇಕೆನ್ನುವ ವಿಚಾರ ಕೂಡ ಸರ್ಕಾರದ ಗಮನದಲ್ಲಿದೆ.

ಕಾಂಟ್ರಾಕ್ಟ್ ಕ್ಯಾರೇಜಸ್ ಬಗ್ಗೆ ಹೆಚ್ಚಿನ ಟೀಕೆ ಈ ಸದನದಲ್ಲಿ ಬಂದಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಗ್ರಹಿಸಿದ್ದೇನೆ. ನಾನು ಈಗಾಗಲೇ ಇದರ ಬಗ್ಗೆ ಆಸಕ್ತಿ ವಹಿಸಿ ಎಷ್ಟು ಕಡಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಕಡಮೆ ಮಾಡುವುದಕ್ಕೆ ಆ ದಿಸೆಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ನಾವು ಎಷ್ಟು ವೇಗವಾಗಿ ಯೋಚನೆ ಮಾಡುತ್ತೇವೆಯೋ ಅಷ್ಟೇ ವೇಗದಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆಯತಕ್ಕ ಪ್ರವೃತ್ತಿ ಜನರಲ್ಲಿ ಬೆಳೆದಿದೆ. ರಾಜ್ಯದ ಎಲ್ಲ ಕ್ಷೇತ್ರಗಳೂ ಅಭಿವೃದ್ಧಿಯಾಗುತ್ತಿರುವಂತೆ ಆಡಳಿತ ಕ್ಷೇತ್ರವೂ ಬೆಳೆಯುತ್ತಿದೆ. ಇದರಲ್ಲಿ ಲೋಪ ದೋಷಗಳೂ ಇರಬಹುದು. ಇವುಗಳನ್ನು ಯಾವ ರೀತಿ ಕಡಿಮೆ ಮಾಡಬಹುದು ಎಂಬುದನ್ನೂ ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ಎಲ್ಲ ಅಭಿಪ್ರಾಯಗಳೂ ಸರಕಾರದ ಗಮನದಲ್ಲಿವೆ. ಇಷ್ಟು ಮಾತುಗಳನ್ನು ಹೇಳಿ ಸಭೆಯ ಮುಂದಿಟ್ಟಿರುವ ಎರಡು ಬೇಡಿಕೆಗಳನ್ನೂ ಒಪ್ಪಿ ಪಾಸು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮ ಮೇಲೆ ಖಾಸಗಿಯಾಗಿ ಪ್ರೈವೇಟು ಬಸ್ಸುಗಳನ್ನು ಇಟ್ಟುಕೊಂಡು ಓಡಾಡುತ್ತಿರುವ ಜನ ಕಣ್ಣಿಟ್ಟಿದ್ದಾರೆ. ನೀವೇನೋ ದಿಟ್ಟತನದಿಂದ ಇವರನ್ನು ತಡೆಯಬೇಕೆಂದು ಮಾಡಲು ಹೋದರೆ ಅವರು ನಿಮ್ಮ ಕಾಲನ್ನು ಮುರಿಯುತ್ತಾರೆ. ಆಗ ಏನು ಮಾಡುತ್ತೀರಿ ಎನ್ನುವುದನ್ನೂ ತಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ರಾಷ್ಟ್ರೀಕರಣ ಏಕೆ ಮಾಡಿದೆವು ಎನ್ನುವುದು ತಮಗೇಗೊತ್ತಿದೆ. ನಮಗೆ ಬೊಂಬಾಯಿ ಕಡೆಯಿಂದ ಬಂದ ನಾಲ್ಕು ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಬೇಕೆಂದು ಮಾಡಿ ಈಗ ನಾಲ್ಕು ಜಿಲ್ಲೆಗಳಲ್ಲೂ ಪೂರ್ಣವಾಗಿದೆ. ಇದೇರೀತಿ ಹೈದರಾಬಾದು ಕರ್ಣಾಟಕದಿಂದ ಬಂದ ಮೂರು ಜಿಲ್ಲೆಗಳಲ್ಲಿ ಗುಲ್ಬರ್ಗಾದಲ್ಲಿ ರಾಷ್ಟ್ರೀಕರಣವಾಗಿದೆ. ಇದರಲ್ಲಿ ಹುಮನಾಬಾದ್‌ನಿಂದ ಬೀದರ್‌ವರೆಗಿನ ಕೆಲವು ಪಾಕೆಟ್ಸ್‌ಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿ ರಾಷ್ಟ್ರೀಕರಣ ಪೂರ್ತಿಯಾಗಿದೆ. ನಮ್ಮ ಹಳೆಯ ಮೈಸೂರು ಭಾಗದಲ್ಲಿ ಕೆಲ ಕೆಲವು ಭಾಗಗಳಲ್ಲಿ ರಾಷ್ಟ್ರೀಕರಣ ಪೂರ್ತಿಯಾಗಿದೆ. ಇನ್ನೂ ಕೆಲವು ಭಾಗಗಳನ್ನು ಪೂರ್ಣವಾಗಿಡಬೇಕಾಗಿದೆ. ನಮ್ಮ ದೇಶದ ಎಲ್ಲಾ ಕಡೆಗಳಲ್ಲೂ ಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕಾದರೆ ಸುಮಾರು 46 ಕೋಟಿ ರೂಪಾಯಿಗಳು ಬೇಕು ಮತ್ತು ನಮಗೆ ನಾಲ್ಕುಸಾವಿರ ಮೋಟಾರು ವೆಹಿಕಲ್ಸ್‌ಗಳು ಬೇಕಾಗುತ್ತವೆ. ಇದರ ಜೊತೆಗೆ ಈಗಿರುವ ಸಾವಿರದ ಮುನ್ನೂರು ಚಿಲ್ಲರೆ ವಾಹನಗಳನ್ನು ರೀಪ್ಲೇಸು ಮಾಡಬೇಕಾಗುತ್ತದೆ. ನಮ್ಮ ಉದ್ದೇಶವೇನೋ ಎಲ್ಲ ಕಡೆ ರಾಷ್ಟ್ರೀಕರಣ ಮಾಡಿದ ಬಸ್ಸುಗಳನ್ನು ಓಡಿಸಬೇಕೆಂದು ಇದ್ದರೂ ಇದರ ಎಲ್ಲ ಲೆಕ್ಕಗಳನ್ನೂ ಮಾಡಿದರೆ ಇವಕ್ಕೆ ಹಣ ಬೇಕಾಗುತ್ತದೆ. ಸರಕಾರಕ್ಕೆ ಬರೀ ರಾಷ್ಟ್ರೀಕರಣ ಮಾಡುವುದೊಂದೇ ಕೆಲಸವಲ್ಲ. ಸರಕಾರ ಒಂದು ಕಡೆ ರಾಜ್ಯದಲ್ಲಿರುವ ಕೆರೆ ಕಟ್ಟೆಗಳನ್ನು ಕಟ್ಟಿಸಿಕೊಡಬೇಕು, ರಸ್ತೆ ಸೇತುವೆಗಳನ್ನು ದುರಸ್ತಿ ಮಾಡಿಕೊಡಬೇಕಾಗುತ್ತದೆ. ನೀರಾವರಿಗೆ ಖರ್ಚು ಮಾಡಬೇಕಾಗುತ್ತದೆ. ಇವೆಲ್ಲಕ್ಕೂ ಸರಕಾರಕ್ಕೆ ಹಣ ಬೇಕಾಗುತ್ತದೆ. ಸರಕಾರದ ಉದ್ದೇಶ ರಾಷ್ಟ್ರೀಕರಣ ಮಾಡಬೇಕು ಎನ್ನುವ ನೀತಿ. ಇದರಿಂದ ಹಿಂದಕ್ಕೆ ಹೋಗಬೇಕು ಎನ್ನುವುದು ಸರಕಾರದ ಉದ್ದೇಶವಲ್ಲ. ಈ ನೀತಿಯನ್ನು ಒಪ್ಪಿಕೊಂಡಿದೆ. ಆದರೆ ಇದನ್ನು ಮಾಡುವಾಗ ಹಂತ ಹಂತವಾಗಿ ಮಾಡಿಕೊಳ್ಳಬೇಕಾಗುತ್ತದೆ. ಅದರಲ್ಲೂ ಕೂಡ ನಮ್ಮ ದೇಶದ ಇಂದಿನ ಆರ್ಥಿಕ ಸ್ಥಿತಿ ಕಷ್ಟದಲ್ಲಿರುವಾಗ ಅದಕ್ಕೆ ತಕ್ಕಂತೆ ರಾಜ್ಯದಲ್ಲಿ ಸಂಪಾದನೆ ಮಾಡಿಕೊಳ್ಳಬೇಕಾಗಿದೆ. ಇದರಿಂದ ದೇಶದ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮಾಡಬೇಕಾಗುತ್ತದೆ. ರಾಜ್ಯ ಸರಕಾರದ ನೀತಿಯೇನು ಎನ್ನುವುದನ್ನು ತಿಳಿಸಿದ್ದೇನೆ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನಂಬುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ಒಂದು ಮುಖ್ಯವಾದ ವಿಚಾರದ ಬಗೆ ತಿಳಿಸಿದರೂ ಇಲ್ಲ ಅದರ ಬಗ್ಗೆ ಉತ್ತರ ಕೊಡಲಿಲ್ಲ. ಅದು ಎಂ. ಎಸ್. ಆರ್. ಟಿ. ಸಿ.ಯವರು ಟೆಂಡರು ಕರೆದು ಅದರಲ್ಲಿ ಒಂದು ಟೆಂಡರನ್ನು ಒಪ್ಪಿರುವುದರಲ್ಲಿ ಅವ್ಯವಹಾರಗಳು ಹಾಗೂ ಭ್ರಷ್ಟಾಚಾರಗಳು ಆಗಿವೆ ಎಂದು ಹೇಳಿ ಇದರ ಬಗ್ಗೆ ಇಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಇದರ ವಿವರಗಳನ್ನು ಸದನದ ಮುಂದೆ ಇಡಲೇಬೇಕು. ಇದು ಅಟಾನಮಸ್ ಬೋರ್ಡು ಎಂದು ಇಂತಹ ಅವ್ಯವಹಾರಗಳನ್ನು ಹಾಗೇ ಬಿಟ್ಟರೆ ಮುಂದೆ ಇವನ್ನು ಸರಿಮಾಡಲಾಗುವುದಿಲ್ಲ. ಇಂದು ಬೋರ್ಡುಗಳು ಬರಬರುತ್ತಾ ಹೆಚ್ಚಾಗುತ್ತಿವೆ. ಇದೇ ಸದನದಲ್ಲಿ ಹಿಂದೆ ಹೌಸಿಂಗು ಬೋರ್ಡಿನ ಬಗ್ಗೆ ಕೂಡ ಪ್ರಸ್ತಾಪ ಮಾಡಲಾಗಿತ್ತು. ಇದರ ಅವ್ಯವಹಾರಗಳ ಬಗ್ಗೆ ಇವೊತ್ತಿನವರೆಗೂ ಸರಕಾರದವತಿಯಿಂದ ಯಾವ ರೀತಿಯಾದ ವಿವರಗಳೂ ಸದನಕ್ಕೆ ಬರಲಿಲ್ಲ. ಶ್ರೀ ಬಸವಲಿಂಗಪ್ಪನವರು ಹೌಸಿಂಗು ಬೋರ್ಡಿನ ಬಗ್ಗೆ ಈ ಸದನದಲ್ಲಿ ಮಾತನಾಡುವಾಗ ಕೆಲವಾರು ವಿಷಯಗಳನ್ನು ಕಾನೂನಿನ ಬಗ್ಗೆ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ಹೇಳಿದ್ದರು. ಇದರ ಬಗ್ಗೆ ಸರಕಾರದವತಿಯಿಂದ ಇದುವರೆಗೂ ಅವರು ಕೇಳಿದಂತೆ ಯಾವ ವಿವರಗಳೂ ಇಲ್ಲಿ ಬರಲಿಲ್ಲ. ಕಳೆದ ಎರಡು ವರ್ಷಗಳಿಂದಲೂ ಈ ಹೌಸಿಂಗು ಬೋರ್ಡು ಬಗ್ಗೆ ಅನೇಕ ವ್ಯವಹಾರಗಳಾಗಿವೆ ಎಂದು ಇದೇ ಸದನದಲ್ಲಿ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದರು. ಕಳೆದ ಎರಡು ತಿಂಗಳಲ್ಲಿ ಸರಕಾರವೇನೋ ನಿಮ್ಮವರೇ ಆದವರನ್ನು ಒಬ್ಬರು ಅಧ್ಯಕ್ಷರಾಗಿರಬೇಕೆಂದು ನೇಮಕ ಮಾಡಿದ್ದೀರಿ. ನೀವೇ ಅವರನ್ನು ನೇಮಿಸಿದ ಮೇಲೆ ಅವರಾದರೂ ಇದರಲ್ಲಿ ಏನೇನು ಕಷ್ಟಗಳಿವೆ ಎಂದು ಸರಕಾರಕ್ಕೆ ತಿಳಿಸಿದ್ದಾರೆಯೇ ? ಹಾಗೆ ತಿಳಿಸಿದ್ದರೆ ಇದರ ಬಗ್ಗೆ ಸರಕಾರ ಏನಾದರೂ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಯೇ ಎನ್ನುವುದನ್ನು ಇಲ್ಲಿ ಸಚಿವರು ಹೇಳಬೇಕಾಗುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ.—ರಾಷ್ಟ್ರೀಕರಣ ಮಾಡುವುದಕ್ಕೆ ನಮ್ಮ ಸರಕಾರಕ್ಕೆ ಅಪಾರವಾದ ದುಡ್ಡು ಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಈಗ ಇಲ್ಲಿ ತಿಳಿಸಿದರು. ಆದರೆ ದೊಡ್ಡ ದೊಡ್ಡ ಶ್ರೀಮಂತರಾಗಿರುವವರು ಖಾಸಗಿ ಬಸ್ಸುಗಳನ್ನು ಓಡಿಸಿ ಸಾಕಷ್ಟು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಇಂತಹವರು ದೊಡ್ಡ ಬಸ್ಸುಗಳ ಮಾಲೀಕರಾಗಿ ಶ್ರೀಮಂತರಾಗಿರುವುದರಿಂದ ಇವರಿಂದ ಸರಕಾರ ಬೇಕಾದರೆ ಹಣ ಪಡೆದು ಅದನ್ನು ಇಪ್ಪತ್ತು ಇಲ್ಲವೇ ಮೂವತ್ತು ವರ್ಷಗಳಲ್ಲಿ ಹಿಂತಿರುಗಿಸುತ್ತೇವೆಂದು ಬಾಂಡು ಬರೆದುಕೊಟ್ಟು ಸರಕಾರ ಪಡೆಯಬಹುದಲ್ಲವೇ ?

ಶ್ರೀ ಕೆ. ಹೆಚ್. ರಂಗನಾಥ್.—ಇದು ಮಾನ್ಯ ಸದಸ್ಯರು ಹೇಳುವಷ್ಟು ಸುಲಭವಲ್ಲ. ಅದನ್ನು ಮಾಡಬೇಕಾದರೆ ಮಾಡೋಣ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ರೋಡು ಟ್ರಾನ್ಸ್‌ಪೋರ್ಟು ಕಾರ್ಪೊರೇಷನ್ ಬಗ್ಗೆ ಹಾಗೂ ಇದರ ರಿಪೋರ್ಟು ಬಗ್ಗೆ ಹೇಳಿದ್ದಾರೆ. ಇದರ ಅನ್ಯೂಯಲ್ ರಿಪೋರ್ಟನ್ನು ಸಭೆಯ ಮುಂದೆ ಇಡುತ್ತೇನೆ. ಆಗ ಇದರ ಬಗ್ಗೆ ಪೂರ್ತಿಯಾಗಿ ಚರ್ಚೆ ಮಾಡಲು ಅವಕಾಶ ಸಿಗುತ್ತದೆ. ಇದರ ಬಗ್ಗೆ ಒಂದೆರಡು ಮಾತುಗಳನ್ನು ತಿಳಿಸಿದ್ದಾರೆ. ಅದನ್ನು ವಿಚಾರ ಮಾಡುತ್ತೇನೆ. ಒಂದು ಮಾತನ್ನು ಸಭೆಗೆ ಹೇಳಲು ಈ ಸಂದರ್ಭದಲ್ಲಿ ಇಚ್ಛೆ ಪಡುತ್ತೇನೆ. ಕಾನೂನಿಗೆ ವಿರೋಧವಾದ ರೀತಿಯಲ್ಲಿ ಯಾವುದೇ ಸಂಸ್ಥೆಯಾಗಲೀ ಕೆಲಸ ಮಾಡು ವುದಕ್ಕೆ ಸರಕಾರ ಅವಕಾಶ ಕೊಡುವುದಿಲ್ಲ. ಅಂತಹ ಅನ್ಯಾಯಗಳು ಸರಕಾರದ ಗಮನಕ್ಕೆ ಬಂದಕೂಡಲೇ ಅದರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ಇಲ್ಲಿ ಹೇಳುತ್ತೇನೆ. ಇಲ್ಲಿ ಮಾನ್ಯ ಸದಸ್ಯರು ಈ ಕಾರ್ಪೊರೇಷನ್ನಿನಲ್ಲಿ ಟೆಂಡರು ಕರೆಯುವಾಗ ಯಾವುದೋ ಒಂದರಲ್ಲಿ 24 ಲಕ್ಷಕ್ಕೆ ಮಾತ್ರ ಒಪ್ಪಿ ಹೆಚ್ಚು ಹಣ ಬಂದಿರುವುದನ್ನು ಬಿಟ್ಟರು. ಇದರಿಂದ ನಾಲ್ಕು ಲಕ್ಷ ರೂಪಾಯಿ ನಷ್ಟವಾಯಿತು ಎನ್ನುವುದರ ಬಗ್ಗೆ ಹೇಳಿದರು. ಈ ಕಾರ್ಪೊ ರೇಷನ್ ನಾಲ್ಕು ಲಕ್ಷ ರೂಪಾಯಿಗಳನ್ನು ಕಳೆದುಕೊಳ್ಳುವಂತಹ ವ್ಯವಹಾರಗಳನ್ನು ಮಾಡುವು ದಿಲ್ಲ. ಆದರೆ ಇದರ ಬಗ್ಗೆ ನನ್ನಲ್ಲಿ ವಿವರಗಳು ಇಲ್ಲ ಮತ್ತು ಇದು ಸರಕಾರದ ಗಮನಕ್ಕೂ ಬಂದಿಲ್ಲ. ಇದಕ್ಕಾಗಿ ನಾನು ಆಗಲೇ ತಿಳಿಸಿದಂತೆ ಈ ಕಾರ್ಪೊರೇಷನ್ನಿನ ರಿಪೋರ್ಟು ಈ ಸಭೆಯಲ್ಲಿ ಚರ್ಚೆಗೆ ತಂದು ಇದರ ಬಗ್ಗೆ ಎಲ್ಲರೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಆಗ ಇದರ ಪೂರ್ತಿಯಾದ ಡಿಸ್‌ಕಷನ್ ಮಾಡೋಣ. ನಾವು ಸಭೆಗೆ ಯಾವ ವ್ಯವಹಾರಗಳನ್ನೂ ಮುಚ್ಚಿಡ ಬೇಕೆಂದು ನಮ್ಮ ಉದ್ದೇಶವಿಲ್ಲ. ಸರಕಾರದ ನೀತಿ ಇದರಲ್ಲಿ ಸ್ಪಷ್ಟವಾಗಿದೆ. ಸರಕಾರದ ನೀತಿಗೆ ವಿರೋಧವಾಗಿ ಕೆಲಸಗಳೇನಾದರೂ ಆಗಿದ್ದರೆ ಅವುಗಳ ಮೇಲೆ ಸೂಕ್ತವಾದ ಕ್ರಮ ತೆಗೆದು ಕೊಳ್ಳಲು ಸರಕಾರ ಹಿಂದು ಮುಂದು ನೋಡುವುದಿಲ್ಲ ಎನ್ನುವ ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹೌಸಿಂಗು ಬೋರ್ಡಿನ ಬಗ್ಗೆ ಹೇಳಲೇ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಹೌಸಿಂಗು ಬೋರ್ಡು ಒಂದು ಅಟಾನಮಸ್ ಬೋರ್ಡು. ಇದರಲ್ಲಿ ಅಕೌಂಟ್ಸ್ ಆಫೀಸರು ಇರುತ್ತಾರೆ, ಇದರ ಎಲ್ಲ ಲೆಕ್ಕಪತ್ರಗಳೂ ಆಡಿಟ್ಟಾಗುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಟಾನಮಸ್ ಬೋರ್ಡು ಎಂದು ಪ್ರತಿಯೊಂದರಲ್ಲೂ ಹೇಳುತ್ತಾ ಹೋದರೆ ಗತಿ ಏನು? ಮಾನ್ಯ ಸಚಿವರ ಅಪ್ರೋಚು ಸರಿಯಾಗಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಇದರಲ್ಲಿ ಸ್ಪಷ್ಟವಾದ ಮತ್ತು ನೇರವಾದ ವ್ಯವಹಾರಗಳು ಇರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸದನದಲ್ಲಿ ಹಿಂದೆ ಒಂದು ಮಸೂದೆ ಚರ್ಚೆಗೆ ಬಂದ ಕಾಲ ದಲ್ಲಿ ಕೆಲವಾರು ವಿಚಾರಗಳನ್ನು ಹೌಸಿಂಗು ಬೋರ್ಡಿನ ಬಗ್ಗೆ ಹೇಳಿದ್ದರು. ಇದರ ಬಗ್ಗೆ ಆಗಿದ್ದ ಅಧ್ಯಕ್ಷರ ಬಗ್ಗೆ ವಿಪರೀತವಾಗಿ ಚರ್ಚೆಯಾಯಿತು. ಇದಕ್ಕಾಗಿ ಇಲ್ಲಿರುವ ಕಾನೂನನ್ನು ತಿದ್ದುಪಡಿ ಮಾಡಬೇಕೆಂದೂ ಮಾಡಿದ್ದಿರಿ.

ಶ್ರೀ ಕೆ. ಎಚ್. ರಂಗನಾಥ್.—ಇದರ ಬಗ್ಗೆ ಇಲ್ಲಿ ಮಾತನಾಡುವಾಗ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಕೆಲವಾರು ಕಾನೂನಿನ ವಿಚಾರಗಳನ್ನು ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡಿದ್ದರು. ಉದಾಹರಣೆಯಾಗಿ ಹೇಳಬೇಕಾದರೆ ಬೋರ್ಡು ಜಮೀನನ್ನು ಕೊಂಡುಕೊಳ್ಳುವ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ಹೌಸಿಂಗು ಬೋರ್ಡಿನವರು 25 ಎಕರೆಗಳಷ್ಟು ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಇದರ ಅಧ್ಯಕ್ಷರಿಗೆ ಅಧಿಕಾರ ಇದೆ ಎಂದು ಕಾನೂನಿನಲ್ಲಿತ್ತು. ಇದಕ್ಕೆ ಬದಲು ಅಧ್ಯಕ್ಷರು ಸುಮಾರು 30-35 ಎಕರೆಗಳಷ್ಟು ಭೂಮಿಯನ್ನು ಕೊಂಡುಕೊಂಡರು, ಇದಕ್ಕೆ 17 ಲಕ್ಷ ರೂಪಾಯಿನಷ್ಟು ಹಣ ವೆಚ್ಚವಾಗಿತ್ತು ಎಂದು ಸಭೆಗೆ ತಿಳಿಸಿದರು. ಕಾನೂನು ಪ್ರಕಾರ ಇದನ್ನು ನೋಡಬೇಕಾಗುತ್ತದೆ. ಕಾನೂನಿಗೆ ವಿರೋಧವಾಗಿದ್ದರೆ ಅದರ ಬಗ್ಗೆ ತಕ್ಕ ಕಾರ್ಯ ಕ್ರಮ ತೆಗೆದುಕೊಳ್ಳಬಹುದು. ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳಿದರು ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ಇಲ್ಲಿ ಕಂಡು ಬಂದ ಕೆಲವು ಅವ್ಯವಹಾರಗಳನ್ನು ಅವರು ಮಂತ್ರಿ ಸ್ಥಾನದಿಂದ ಹೊರಗೆ ಬಂದಾಗ ಈ ಸದನದಲ್ಲಿ ಹೇಳಿದ್ದರು. ಇದರ ಬಗ್ಗೆ ತನಿಖೆಯಾಗಬೇಕು ಎಂದೂ ಹೇಳಿದ್ದರು. ಆದರೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ತಿಳಿಸಿದರು. ಇಂತಹ ಒಂದು ಅಪಾದನೆ ಬಂದಿರುವಾಗ ಸರಕಾರ ಇದರ ಬಗ್ಗೆ ಖಚಿತವಾದ ನಿಲುವನ್ನು ಇಲ್ಲಿ ತಿಳಿಸಬೇಕಾಗಿತ್ತು. ಇದೇ ಸದನದಲ್ಲಿ ಹಿಂದೆ ಕೂಡ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಹೇಳಿದ್ದರು. ಅನೇಕ ಸಂದರ್ಭಗಳಲ್ಲಿ ಹಾಸಿಂಗ್ ಬೋರ್ಡಿನ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿ ಇದರ ಬಗ್ಗೆ ಸಾಕಷ್ಟು ವಿಚಾರಗಳು ಬಂದಿದ್ದವು. ಸರಕಾರ ಇವುಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ? ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡ ಮೇಲೆ ಇದರ ಬಗ್ಗೆ ಏನಾಯಿತು ಎಂದು ಖಚಿತವಾಗಿ ನಾವು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಜಿ.ಎ.ಡಿ. ಆಡಿಟ್ ವಿಭಾಗದವರು ತನಿಖೆ ಮಾಡಿದ್ದಾರೆ. ಅವರು ಏನೇನು ನ್ಯೂನತೆಗಳನ್ನು ತೋರಿಸಿದ್ದಾರೆ, ಅವುಗಳನ್ನು ಸರಿಮಾಡುವುದಕ್ಕೆ ಛೇರ್ಮನ್ನರಿಗೆ ಆದೇಶ ಕೊಡಲಾಗಿದೆ. ಅಕೌಂಟ್ಸ್ ಆಫೀಸರ್ ಇರುತ್ತಾರೆ. ಅವರು ಎಲ್ಲವನ್ನೂ ನೋಡಿ ವ್ಯವಸ್ಥಿತವಾದ ರೀತಿಯಲ್ಲಿ, ಅನುಕೂಲವಾಗುವಂತೆ ಮಾಡುತ್ತಾರೆ. ಆದರಲ್ಲೇನಾದರೂ ವ್ಯವಹಾರ ನಡೆದಿದ್ದು, ಬೆಳಕಿಗೆ ಬಂದರೆ, ಕಾನೂನಿಗೆ ವಿರುದ್ಧವಾಗಿದ್ದರೆ, ಅದರ ಬಗ್ಗೆ ಕ್ರಮ ತೆಗದುಕೊಳ್ಳೋಣ.

Sri B. B. SAYANAK.—On the R.T.A. committees, some official members and some non-official members are there. Some non-official members are there since 8 years on these committees. May I know whether the Government is going to take action to replace the non-official members who are there on these committees since 8 years?

Mr. DEPUTY SPEAKER.—They have been reappointed. One Committee cannot be functioning for 8 years.

ಶ್ರೀ ಕೆ. ಎಚ್. ರಂಗನಾಥ್.—ಪ್ರತಿ ಆರ್.ಟಿ.ಎ ಯಲ್ಲಿ ನಾನ್ ಅಫಿಸಿಯಲ್ ಸದಸ್ಯರೂ ಇರುತ್ತಾರೆ. ಸಾರ್ವಜನಿಕರಿಂದ ವಿರೋಧ ಇಲ್ಲದೇ ಇರುವುದರಿಂದ, ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ಭಾವಿಸಬಹುದು. ಮಾನ್ಯ ಸದಸ್ಯರು ಇವತ್ತು ಯಾರ ಬಗ್ಗೆ ಹೇಳಿದ್ದಾರೆ, ಅದನ್ನು ವಿಚಾರ ಮಾಡೋಣ.

ಶ್ರೀ ಎಂ. ವೆಂಕಟಲಿಂಗಯ್ಯ.—ಮಾನ್ಯ ಸಚಿವರಿಗೆ ಖೋಟಾ ಟಿಕೆಟ್ ಕೊಟ್ಟಿದ್ದೇನೆ, ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಕೆ. ಎಚ್. ರಂಗನಾಥ್.—ಹೋಂ ಸೆಕ್ರೆಟರಿಗೆ ಕೊಟ್ಟಿದ್ದೇನೆ. ಖೋಟಾ ಟಿಕೆಟ್ ಯಾವುದು, ಒಳ್ಳೆಯ ಟಿಕೆಟ್ ಯಾವುದು ಎಂದು ಕಂಡುಹಿಡಿಯುವುದು. ಕಷ್ಟ ಅದನ್ನು ವಿಚಾರ ಮಾಡೋಣ.

Mr. DEPUTY SPEAKER.—I will now put the motion to the vote of the House.

The Question is:

> "That the respective sums not exceeding the amounts mentioned in the list of Demands for Grants be granted to Government to defray the charges which will come in course of payment during the financial year for the period ending with 31st day of March 1975, in respect of Demand Nos. 9 and 30."

The motion was adopted and the Demands were granted.

As directed by the Chair the motion for the Demands for the Grants adopted by the House are reproduced below:

Demand No. 9—Taxes on Vehicles

"That a sum exceeding Rs. 47,99,000 inclusive of the sum granted 'on account' be granted to the Government to defray the charges which will come in course of payment during the financial year ending 31st day on March 1975 in respect of "Taxes on Vehicles."

Demand No. 30—Housing

"That a sum not exceeding Rs. 3,38,00,000 inclusive of the sum granted 'on account' be granted to the Government to defray the charges which will come in course of payment during the fiancial year ending 31st day of March 1975 in respect of "Housing."

Minister for Agriculture and Animal Husbandry—

STATEMENT BY THE MINISTER FOR EDUCATION

Re: *Enhancement of D.A. to Teachers on valuation work of SSLC Answer Papers.*

†Mr. MALLIKARJUNASWAMY (Minister for Education).—Mr. Deputy Speaker, Sir, I hereby beg to make the following statement regarding the D.A. to teachers on valuation duty of S.S.L.C. papers in Bangalore.

During the consideration of the recent adjournment motion on the strike by the Secondary School Teachers drafted for valuation of the S.S.L.C. papers, it was mentioned that the rates of valuation had been increased and that the question of grant of further increases to meet the cost of living in Bangalore would be considered.

At the time the delegation from the Karnataka State Secondary School Teachers Association discussed this matter with me on the evening of 16th April 1974, I had mentioned that the question regarding granting of higher rates of D.A. would be referred to the Board for sympathetic consideration. The K.C.S.R. has doubtless been adopted by the Board as a guideline but the Board is certainly an independent statutory body and can adopt its own rates of D.A. It is because the Board has this independence that the matter was suggested to be referred to it for a decision.